ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಸಂಪುಟ 2 ಸಂಚಿಕೆ 45

ನವೆಂಬರ್ 09 . 2008


ಕನ್ನಡ ವಾರಪತ್ರಿಕೆ

ರೂ. 5/-

www.janashakthi.org



ಅಮೆರಿಕಕ್ಕೆ ಕ್ಯಾನ್ಸರ್! ಜಗಕ್ಕೆಲ್ಲಾ ಸೋಂಕು



ಚಿಕ್ಕಬಳ್ಳಾಪುರ: ಜ್ವಲಂತ ಸಮಸ್ಯೆಗಳತ್ತ ನೋಟ

ಕೃಷಿಕೂಲಿಕಾರರು ಯಾರಿಗೂ ಬೇಡವಾದವರು



ಮಂಡ್ಯ: ಪಕ್ಷಾಂತರದ ಹಿಂದೆ

ಕಳಚಿದ ಹಿಂದೂ ಭಯೋತ್ಪಾದಕರ ಮುಖವಾಡ



ಅಕ್ಟೋಬರ್ ಕ್ರಾಂತಿಯ ನೆನಪು

ಜನಶಕ್ತಿ ಕನ್ನಡ ವಾರಪತ್ರಿಕೆ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಜ್ಯೋತಿಷ್ಯವೆಂಬ ಮಹಾವಂಚನೆ

ಜ್ಯೋತಿಷ್ಯ ಎಂಬುದು ಎಂತಹ ವಂಚನೆ. ಅದಕ್ಕೆ ಆಧಾರವಾದ ಅಂಶಗಳು ಎಂತಹ ಪೊಳ್ಳು. ಒಂದು ವಿವೇಚನೆ

ಭಾಗ-2

ಇದಿಷ್ಟು ಪ್ರಶ್ನಿಸಿದ ಮೇಲೆ ಯಾರಿಗಾದರೂ ಭಾರತೀಯ ಗಣಿತದ ಬಗ್ಗೆಯೇ ತಪ್ಪು ಕಲ್ಪನೆ ಬರಬಹುದು. ವಾಸ್ತವದಲ್ಲಿ ಗಣಿತಕ್ಕೂ (ಖಗೋಲ ಗಣಿತ) ಜ್ಯೋತಿಷ್ಯಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ. ಇದನ್ನು ವೇದ ಪಂಡಿತರಾದ ಮಹಾಜ್ಞಾನಿ ಸ್ವಾಮಿ ದಯಾನಂದ ಸರಸ್ವತೀಯವರೇ ಸುದೀರ್ಘವಾಗಿ ತಮ್ಮ ಸತ್ಯಾರ್ಥ ಪ್ರಕಾಶದಲ್ಲಿ ಬರೆದಿರುತ್ತಾರೆ. ಅದಾಗ್ಯೂ -

ಮೂಢನಂಬಿಕೆಗಳ ಕ್ಷುದ್ರ ಋಣಾತ್ಮಕ ಅಂಶಗಳೊಳಗೆ ಬೆರೆತ ಧನಾತ್ಮಕ ಅಂಶದ ಬಗ್ಗೆ ನಾನು 'ಕ್ಷ' ಕಿರಣ ಬೀರಲು ಬಯಸುತ್ತೇನೆ. ಅದೆಂದರೆ ಜ್ಯೋತಿಷ್ಯ (Astrology) ಸುಳ್ಳು. ಆದರೆ ಖಗೋಳ ವಿಜ್ಞಾನ (Astronomy) ಸತ್ಯ. ಪುರೋಹಿತಶಾಹಿಯಿಂದಾಗಿ ಇವೆರಡೂ ತಳಕು ಹಾಕಿಕೊಂಡಿವೆ. ಏನೇ ಇರಲಿ. ನಮ್ಮ ಧನಾತ್ಮಕ ಪರಂಪರೆಯ ಮುಖ್ಯ ಭಾಗವಾದ ಖಗೋಲ ವಿಜ್ಞಾನದಲ್ಲಡಗಿದ ಗಣಿತ ಶಾಸ್ತ್ರದ ಬಗೆಗೆ ಕೆಲವೊಂದು ವಿವರಗಳನ್ನು ಕೊಡಬಯಸುತ್ತೇನೆ.

ಫಲ ಜ್ಯೋತಿಷ್ಯ ಅರ್ಥಹೀನ ಹಾಗೂ ಮೂರ್ಖತನದ ಪರಮಾವಧಿಯಲ್ಲದೆ ಮತ್ತೇನಲ್ಲ. ಇದು ಕೇವಲ - ಜ್ಯೋತಿಷಿಗಳಿಗೆ ಹಣ ಮಾಡಿಕೊಳ್ಳುವ ತಂತ್ರವೆಂಬುದು ವೈಜ್ಞಾನಿಕ ಚಿಂತನವನ್ನು ಹೊಂದಿದವರಿಗೆಲ್ಲಾ ತಿಳಿದ ವಿಷಯ. ಆದರೆ, ಪ್ರಾಕೃತ ಜನರಿಗೆ ಅದರಲ್ಲೂ ವಿದ್ಯಾವಂತ ಪ್ರಾಕೃತ ಜನರಿಗೆ ಇದರ ಅರಿವಿಲ್ಲ. ಆದರೆ, ಇದಂತೂ ಸತ್ಯ. ಭಾರತೀಯ ಗಣಿತಜ್ಞರು ತಮ್ಮ ಕ್ಷೇತ್ರದಲ್ಲಿ ಅತಿ ಅದ್ಭುತವಾದ ಕೆಲಸವನ್ನೇ ಮಾಡಿರುತ್ತಾರೆ. ಹಾಗೂ ವಿಶ್ವದಲ್ಲೇ ಅವರು ಸರ್ವಶ್ರೇಷ್ಠ ಸ್ಥಾನವನ್ನು ಪಡೆದಿದ್ದಾರೆ. ಫಲ ಜ್ಯೋತಿಷ್ಯವನ್ನು ತಿಪ್ಪೆಗೆಸೆಯಬಹುದು. ಆದರೆ, ಭಾರತದ ಪ್ರಾಚೀನ ಗಣಿತ ಹಾಗಲ್ಲ.

ಉದಾಹರಣೆಗೆ

ಗಣಿತದಲ್ಲಿ ಶುಲ್ಬ ಸೂತ್ರಗಳೇ ಪ್ರಪ್ರಥಮವಾದ ಮಹತ್ವಪೂರ್ಣ ಸೂತ್ರಗಳು. ಇವುಗಳ ಪ್ರಕಾರ:


1. ಭಾರತದ ಗಣಿತಜ್ಞರು ಶೂನ್ಯವನ್ನು ಕಂಡುಹುಡುಕಿದರು. '0' ಇಲ್ಲದಿದ್ದರೆ ಲೆಕ್ಕ ಮಾಡಲಿಕ್ಕೇ ಸಾಧ್ಯವಾಗದ ಪರಿಸ್ಥಿತಿಯಲ್ಲಿ ಕ್ರಿ. ಪೂ. ದ ಭಾರತೀಯ ಗಣಿತಜ್ಞರು ಇದನ್ನು ಕಂಡು ಹಿಡಿದು ಇಡೀ ವಿಶ್ವಕ್ಕೆ ಮಾರ್ಗದರ್ಶಕರಾದರು.

2. $p =$ ಎಂಬುದಕ್ಕೆ ನಾಲ್ಕು ದಶಮಾಂಶ ಸ್ಥಾನಗಳವರೆಗೂ ಮೊತ್ತ ಮೊದಲು ಲೆಕ್ಕ ಹಾಕಿ ಕೊಟ್ಟವನೆಂದರೆ ಆರ್ಯಭಟ (ಕ್ರಿ.ಶ. 476)

ಆತನ ಪ್ರಕಾರ $p = 62832 / 20000=00$
$= 3.416$. ಇಷ್ಟಾಗಿಯೂ ಅದು ಆಸನ್ನ = ಸಮೀಪವಾದುದು ಎಂದಿದ್ದಾನೆ. ಆದರೆ, ಈ ಸಮಸ್ಯೆಯನ್ನು ಸಾಧಿಸಿ ತೋರಿಸಲು ಪಾಶ್ಚಾತ್ಯರಲ್ಲಿ ಲ್ಯಾಂಬರ್ಟ್ ಬರುವ ತನಕ ಅಂದರೆ 18 ನೇ ಶತಮಾನದ ತನಕ ಕಾಯಬೇಕಾಯಿತು.

ಇಡೀ ಪ್ರಪಂಚವೇ ಭಾರತಕ್ಕೆ ಆಭಾರಿಯಾಗಿರಬೇಕಾದ ಈ ಸ್ಥಿತಿಯಲ್ಲಿ ಭಾರತ ಮೂಢನಂಬಿಕೆಗಳ ಕಂಬಳಿ ಹೊದ್ದು ಮಲಗಿದೆ.

3. ಭಾರತೀಯ ಗಣಿತ ಶಾಸ್ತ್ರದ ಒಂದು ವಿಶಿಷ್ಟ ಕೊಡುಗೆಯೆಂದರೆ $ax-by = c$ ಮತ್ತು $Nx2?1 = y2$ ಎಂಬ ಮೊದಲನೆಯ ಮತ್ತು ಎರಡನೆಯ ಪ್ರಮಾಣಗಳ ಅನಿರ್ದಿಷ್ಟ ಸಮೀಕರಣಗಳಿಗೆ ಹೊಂದುವಂತೆ x ಮತ್ತು y ಗಳಿಗೆ ಪೂರ್ಣಾಂಕ ಬೆಲೆಗಳನ್ನು ಪಡೆಯುವ ವಿಧಾನಗಳನ್ನು ಪ್ರಪಂಚದಲ್ಲಿಯೇ ಮೊಟ್ಟಮೊದಲು ಚರ್ಚಿಸಿದ ಕೀರ್ತಿ ಭಾರತೀಯರದು !



4. ಕಲನ ಶಾಸ್ತ್ರದ ಮುಖ್ಯವಾದ ಸೂತ್ರ $d (\sin x) = \cos x \, d x$ ಎಂಬುದನ್ನು ಭಾಸ್ಕರಚಾರ್ಯರು ಹೇಳಿದ್ದಾರೆ. ಈ ಸಂದರ್ಭದಲ್ಲಿ 'ನ್ಯೂಟನ್ ಮತ್ತು ಡಾರ್ವಿನ್ - ಇವರನ್ನು ಪಡೆದ ದೇಶಕ್ಕಿಂತ ಭಾಸ್ಕರಾಚಾರ್ಯ ಮತ್ತು ಶಂಕರಾಚಾರ್ಯರಿಗೆ ಜನ್ಮವಿತ್ತ ಭಾರತವರ್ಷ ಯಾವ ವಿಧದಲ್ಲಿ ತಾನೆ ಕೀಳುಮಟ್ಟದಲ್ಲಿದೆ' ಎಂದ ಭಗಿನಿ ನಿವೇದಿತಾ ಅವರ ಮಾತು ನಿಜಕ್ಕೂ ಗಮನಾರ್ಹ.

5. ಭಾಸ್ಕರಾಚಾರ್ಯರ ಈ ಹೇಳಿಕೆ ಗಮನಾರ್ಹ - 'ಸಂಪ್ರದಾಯದಲ್ಲಿ (ಕುರುಡು) ನಂಬಿಕೆಯುಳ್ಳವರ ಮುಂದೆ ಸತ್ಯವನ್ನು ನಿರ್ದಾಕ್ಷಿಣ್ಯವಾಗಿ ಹೇಳಲೇ ಬೇಕಾಗುತ್ತದೆ. ಹಿಂದಿನವರ ಹೇಳಿಕೆಗಳಲ್ಲೆಲ್ಲಾ ಇರುವ ಒಂದೊಂದೂ ದೋಷವನ್ನು ಖಂಡಿಸದೆ ನಂಬಲು ಅಸಾಧ್ಯ.

6. ಪೈಥಾಗಾರಸ್ಸನ ಪ್ರಮೇಯವು ಕ್ರಿ.ಶ. ಆರನೆಯ ಶತಮಾನಕ್ಕಿಂತ ಬಹು ಹಿಂದೆಯೇ ಪ್ರಖ್ಯಾತವಾಗಿದೆ. ಅದನ್ನು ಶುಲ್ಬ ಪ್ರಮೇಯವೆಂದು ಬಹಳ ಹಿಂದೆಯೇ ಕರೆಯಲಾಗಿದೆ.

7. ನಮಗೆ ಮೊನ್ನೆ ಮೊನ್ನೆಯಷ್ಟೆ ಬ್ರೂನೊ, ಗೆಲಿಲಿಯೊರವರಿಂದ ಭೂಮಿ ದುಂಡಗಾಗಿದೆಯೆಂದು ತಿಳಿದು ಬಂತು. ಆದರೆ ಆರ್ಯಭಟ 5 ನೆಯ ಶತಮಾನದಲ್ಲಿಯೇ ಹೇಳಿದ ವಿಷಯಗಳು ಈ ಕೆಳಗಿನಂತಿವೆ.

ಅ) *ಭೂಗ್ರಹಭಾನಾಂ ಗೋಲಾರ್ಧಾನಿ*
ಸ್ವಚ್ಛಾಯಯಾ ವಿವರ್ಣಾನಿ ।
ಅರ್ಧಾನಿ ಯಥಾಸಾರಂ
ಸೂರ್ಯಾಭಿಮುಖಾನಿ ದೀಪ್ಯಂತೆ ॥

ಭೂಮಿ, ಗ್ರಹಗಳು ಸ್ವಯಂ ಪ್ರಭೆಯಿಲ್ಲದ ಗೋಳಗಳು, ಸ್ವಭಾವತಃ ಕಾಂತಿಹೀನವಾಗಿದ್ದರೂ, ಸೂರ್ಯಾಭಿಮುಖವಾಗಿರುವ ಅರ್ಧ ಭಾಗವನ್ನು ತಮ್ಮ ಮೇಲ್ಮೈಕ್ಷೇತ್ರಗಳಿಗೆ ಅನುಗುಣವಾಗಿ ಸೂರ್ಯ ಕಿರಣಗಳಿಂದ ಪ್ರಕಾಶಿತವಾಗಿ ಉಜ್ವಲವಾಗಿ ಕಂಡುಬರುತ್ತವೆ.

ಆ) ಭೂಮಿಯು ಎಲ್ಲಾ ದಿಕ್ಕುಗಳಲ್ಲಿಯೂ ಗುಂಡಾಗಿಯೇ ಇದೆ.
(ಭೂಗೋಲಃ ಸರ್ವತೋ ವೃತ್ತಃ)

ಪ್ರಪಂಚಕ್ಕೆ ಮೊತ್ತಮೊದಲ ಬಾರಿಗೆ ಈ ಸತ್ಯವನ್ನು ಹೇಳಿದ ಕೀರ್ತಿ ಆರ್ಯಭಟನದ್ದು.

ಇ) ದೋಣಿಯಲ್ಲಿ ಕುಳಿತು ಪ್ರಯಾಣ ಮಾಡುತ್ತಿರುವವನು ದಡದಲ್ಲಿ ಸ್ಥಿರವಾಗಿರುವ ಗಿಡ, ಬಂಡೆ ಮೊದಲಾದವು ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವಂತೆ ಕಾಣುತ್ತಾನೆ. ಹಾಗೆಯೇ ನಿಶ್ಚಲವಾಗಿರುವ ನಕ್ಷತ್ರಗಳು ಪೂರ್ವದಿಂದ ಪಶ್ಚಿಮಕ್ಕೆ ಸರಿಯುವವು.

ಈ) ಅಂತೆಯೇ ಸೂರ್ಯೋದಯಾಸ್ತಗಳು ಬೇರೆ ಬೇರೆ ಕಾಲಕ್ಕೆ ಉಂಟಾಗುವ ವಿಷಯವನ್ನು ಆರ್ಯಭಟನು ಹೇಳುತ್ತಾನೆ. ಲಂಕೆಯಲ್ಲಿ ಸೂರ್ಯೋದಯವಾದಾಗ, ಸಿದ್ಧಾಪುರದಲ್ಲಿ ಸೂರ್ಯಾಸ್ತವಾಗುವುದು. ಆಗ ಯಮ (ಯವ) ಕೋಟಿಯಲ್ಲಿ ಮಧ್ಯಾಹ್ನವೂ, ರೋಮಕ ಪ್ರದೇಶದಲ್ಲಿ ಅರ್ಧರಾತ್ರಿಯೂ ಆಗಿರುತ್ತದೆ.

ಉ) ಭೂಮಿಯ ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವ ಪ್ರದೇಶಗಳಲ್ಲಿ ವರ್ಷದ ಆರು ತಿಂಗಳ ಕಾಲ ಸತತ ಹಗಲೂ ಮತ್ತು ಇನ್ನುಳಿದ ಆರು ತಿಂಗಳು ರಾತ್ರಿಯೂ ಇರುತ್ತದೆಂದು ಆರ್ಯಭಟನು ತನ್ನದೇ ಮಾತುಗಳಲ್ಲಿ ತಿಳಿಸಿದ್ದಾನೆ.

ಇದಿಷ್ಟು ಭಾರತೀಯ ಗಣಿತದ ಮಹತ್ವದ ಕುರಿತು ಎರಡು ಮಾತು. ಇದನ್ನು ಡಾ. ಬಾಲಚಂದ್ರ ರಾವ್ ಅವರ 'ಭಾರತೀಯ ಗಣಿತಶಾಸ್ತ್ರ'ದಿಂದ ಆಯ್ದುಕೊಂಡಿದ್ದೇನೆ. ಡಾ. ಬಾಲಚಂದ್ರ ರಾವ್ ವಿಖ್ಯಾತ ಗಣಿತಜ್ಞರಷ್ಟೇ ಅಲ್ಲ, ಜ್ಯೋತಿಷ್ಯವನ್ನು ಆಳವಾಗಿ ಅಭ್ಯಾಸ ಮಾಡಿ ಅದರ ಠಕ್ಕನ್ನು ಹೊರಗೆಡವಿದವರು. ಇತ್ತೀಚೆಗೆ ದಿನ ಪತ್ರಿಕೆಯೊಂದರಲ್ಲಿ ಬಿ.ವಿ. ರಾಮನ್‌ರ ಭಾಷಣದ ವಿವರವಾದ ವರದಿ ಬಂದಿತ್ತು. ಅದರಲ್ಲಿ ಬಿ.ವಿ. ರಾಮನ್ - ಜ್ಯೋತಿಷ್ಯವನ್ನು ಸುಳ್ಳು ಎನ್ನುವವರು ಬೌದ್ಧಿಕವಾಗಿ ದಿವಾಳಿ ಹೊಂದಿದವರು ಎಂದೆಲ್ಲಾ ಹೀನಾಯವಾಗಿ ತೆಗಳಿರುತ್ತಾರೆ.



ಇದೆ ಬಿ.ವಿ. ರಾಮನ್ ಅವರು ಹೇಳಿದ ಭವಿಷ್ಯದ ಭವಿಷ್ಯ ಏನು ಎಂಬುದನ್ನು ಮೇಲೆ ಉದಾಹರಿಸಿದ ಲೇಖಕರಾದ ಡಾ. ಬಾಲಚಂದ್ರ ರಾವ್ ಅವರೇ ಮೇಲಿನ ಗ್ರಂಥದಲ್ಲಿ ಬಹಿರಂಗಗೊಳಿಸಿದ್ದಾರೆ. - ಬಿ.ವಿ. ರಾಮನ್ ಅವರ ಕೆಲವು ಭವಿಷ್ಯವಾಣಿಯನ್ನು ನೋಡಿ - (ಅವರದೆ ಪತ್ರಿಕೆ)

1. ಇಂದಿರಾಗಾಂಧಿ ತನ್ನ ಪಕ್ಷವನ್ನು ಬಲಪಡಿಸಲು ಸಹಾಯ ಮಾಡಿಯಾರು ಆದರೆ, ಆಕೆಯು ಈಗಿನ ಸ್ಥಿತಿಯಿಂದ ಊರ್ಜಿತವಾಗುವ ಲಕ್ಷಣ ಇಲ್ಲ.

2. ಆಕೆ ಗೆಲ್ಲಬಹುದು ಆದರೆ ಪ್ರಧಾನ ಮಂತ್ರಿ ಆಗುವುದಿಲ್ಲ. (ಶುಕ್ರ) ಭಕ್ತಿ ಇರುವುದರಿಂದ ಆಕೆ ಪ್ರಧಾನ ಮಂತ್ರಿ ಆಗುವುದು ಸಾಧ್ಯವೇ ಇಲ್ಲ. ಇದೆಲ್ಲ ಬರೆದುದು ವಾರ್ಷಿಕ ಸಂಚಿಕೆ 1979 ರಲ್ಲಿ. ಜನವರಿ 80 ರಲ್ಲಿ - ಮೂರು ಗ್ರಹಗಳು ಒಟ್ಟಾಗಿರುವುದರಿಂದ ದೆಹಲಿಯಲ್ಲಿ ಸ್ಥಿರವಾದ ಸರಕಾರ ಸಾಧ್ಯವೇ ಇಲ್ಲ. ಎನ್ನಲಾಗಿದೆ.

ಆದರೆ, 80 ರ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಗಾಂಧಿ ಬಹುಮತ ಪಡೆದು ಪ್ರಧಾನಿಯಾದರು. ಒಬ್ಬ ಕೆಳ ಜಾತಿಯ ಅಥವಾ ಅಲ್ಪಸಂಖ್ಯಾತ ಸಮುದಾಯದ ಶಕ್ತಿಶಾಲಿಯಾದ ವ್ಯಕ್ತಿಯು ರಾಜಕೀಯ ನಾಯಕರಾಗುತ್ತಾರೆ ಎಂದು 79 ರಲ್ಲಿ ಬಿ.ವಿ. ರಾಮನ್ ಭವಿಷ್ಯ ನುಡಿದಿದ್ದಾರೆ. ಆದರೆ, ಇಂದಿರಾ ಗಾಂಧಿ ಅಲ್ಪಸಂಖ್ಯಾತ ಸಮುದಾಯದವರೂ ಅಲ್ಲ, ಕೆಳ ಜಾತಿಯವವರೂ ಅಲ್ಲ. ಅವರೊಬ್ಬ ಹಿಂದೂ, ಅದರಲ್ಲೂ ಬ್ರಾಹ್ಮಣರು.

ಇದು ಒಂದು ಸ್ಯಾಂಪಲ್ ಅಷ್ಟೆ. ಬಿ.ವಿ. ರಾಮನ್‌ರ ಭವಿಷ್ಯ ವಾರ್ತೆಗಳೆಲ್ಲಾ ಇಂತಹವೇ ಬೊಗಳೆಗಳು. ವೈಜ್ಞಾನಿಕ ಮನೋಧರ್ಮದವರು ಹಾಗೂ ಜ್ಯೋತಿಷ್ಯವನ್ನು ಅಲ್ಲಗಳೆಯುವವರು ಬೌದ್ಧಿಕವಾಗಿ ದಿವಾಳಿ ಎದ್ದವರು ಎನ್ನುವ ಈ ಮನುಷ್ಯ ಬರೇ ಧೂರ್ತ ಹಾಗೂ ವಂಚಕ. ಇಂತವರು ವಿರೋಧಿಸಲಿಕ್ಕೂ ಅನರ್ಹರು.

ದೇಶದ ಮುಖ್ಯ ವಿದ್ಯಮಾನಗಳ ಬಗ್ಗೆ ಯಾವುದೇ ಜ್ಯೋತಿಷಿ ಭವಿಷ್ಯ ನುಡಿಯಲಿಲ್ಲ. 1975ರಲ್ಲಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಹೇರುವರೆಂದು ಯಾವ ಜ್ಯೋತಿಷಿಯೂ ಹೇಳಿಲ್ಲ. ಅಂತೆಯೆ 1984 ರಲ್ಲಿ ಇಂದಿರಾ ಗಾಂಧಿಯವರ ಹತ್ಯೆಯಾಗುವುದನ್ನೂ ಹೇಳಿಲ್ಲ. ಇಂದು ಸೋಮಯಾಜಿಯಂತಹ ನೂರಾರು ಕಳ್ಳ ಜ್ಯೋತಿಷಿಗಳಿದ್ದಾರೆ. ಅವರಿಗೆ ರಾಜಾಶ್ರಯವಿದೆ. ಇನ್ನೊಂದೆಡೆ ಎಲ್ಲಾ ಟಿವಿ ಚಾನೆಲ್‌ಗಳು, ಪತ್ರಿಕೆಗಳು ಜ್ಯೋತಿಷ್ಯಕ್ಕೆ ಜೋತು ಬಿದ್ದಿವೆ. ಮಾಧ್ಯಮಗಳು ಮೌಢ್ಯದ ದೊಡ್ಡ ಪ್ರಚಾರಕರು. ಈ ಮಹಾಮಾರಿಗೆ ವ್ಯಾಕ್ಸಿನ್ ಕಂಡು ಹುಡುಕುವವರು ಯಾರು? ಕಾಲವೇ ನಿರ್ಧರಿಸಬೇಕು. ○

ಸಂಪಾದಕೀಯ

ರೈತರ ಆತ್ಮಹತ್ಯೆಗಳು - ಹೊಣೆಗೇಡಿ ಸರ್ಕಾರ

ಕಳೆದಾರು ತಿಂಗಳಲ್ಲಿ ಕರ್ನಾಟಕದಲ್ಲಿ 185 ಕ್ಕೂ ಅಧಿಕ ರೈತರು ಆತ್ಮಹತ್ಯೆಗೀಡಾಗಿದ್ದಾರೆ ಎಂಬ ಅಧ್ಯಯನದ ವರದಿಯ ಅಂಶ ಬೆಚ್ಚಿಬೀಳಿಸುವಂತಹದ್ದಾಗಿದೆ. ಸರ್ಕಾರ ಹಾಗೂ ಟಿ.ವಿ., ಪತ್ರಿಕೆಯಂತಹ ಮಾಧ್ಯಮಗಳು ಇಂತಹ ಧಾರುಣ ಘಟನೆಗಳನ್ನು ಸಾರ್ವಜನಿಕರೆದುರು ಬಿಚ್ಚಿಡದೇ ಮುಚ್ಚಿ ಸಾಗಹಾಕುತ್ತಾ ಇದೊಂದು ಮಹತ್ವದ ವಿಷಯ ಅಲ್ಲವೆಂದು ಮೂಲೆಗೊತ್ತುತ್ತಾ ಬಂದಿದೆ. ದಿನಕ್ಕೊಬ್ಬರು ಅಥವಾ ಇಬ್ಬರು ದಾರಿ ಕಾಣದೇ ತಮ್ಮ ಅಮೂಲ್ಯ ಜೀವನವನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬುದು ಆತಂಕದ ಸಂಗತಿ. ರೈತರ ಉದ್ದಾರಕ್ಕೆ ತಾವು ಅವತರಿಸಿ ಬಂದಿದ್ದೇವೆಂದೂ, ಬಡ ರೈತರ ಮೇಲೆ ಪ್ರಮಾಣ ವಚನ ಸ್ವೀಕರಿಸಿ ಗದ್ದುಗೆಗೇರಿ ಕೋಟಿಗಳ ಮಾತನಾಡುತ್ತಿರುವಾಗಲೂ ರೈತರ ಆತ್ಮಹತ್ಯೆ ತಡೆಯಲಾಗಿಲ್ಲ ಎಂಬುದು ವಾಸ್ತವವನ್ನು ತೆರೆದಿಡುತ್ತದೆ. ಈ ಆತ್ಮಹತ್ಯೆಗಳು ನಡೆದಿರುವುದು ಬಿಜೆಪಿ ಅಧಿಕಾರಾರಾವಧಿಯಲ್ಲಿ ಎಂಬುದು ಪೊಳ್ಳು ಭರವಸೆಗಳ ಮಹಾಪೂರವನು ಅನಾವರಣ ಮಾಡುತ್ತವೆ.

ಈ ಒಟ್ಟು ಘಟನೆಗಳು ಕೃಷಿ ಬಿಕ್ಕಟ್ಟಿನ ಆಳ ಮತ್ತು ತೀವ್ರತೆಯನ್ನು ಎತ್ತಿ ತೋರಿಸುತ್ತದೆ. ಕೇಂದ್ರ, ರಾಜ್ಯ ಸರ್ಕಾರಗಳು ಏನೇನೋ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆಂದು ಹೇಳುತ್ತಲೇ ಬಂದರೂ ವರುಷದಿಂದ ವರುಷಕ್ಕೆ ಬಿಕ್ಕಟ್ಟು ಹೆಚ್ಚುತ್ತಲೇ ನಡೆದಿದೆ. ಬದಲಾಗಿ ಶಮನವನ್ನು ಕೊನೆಗೆ ಸಾಂತ್ವನವನ್ನು ಒದಗಿಸಲಾಗಿಲ್ಲ. ಈ ಸ್ಫೋಟಕ ಸ್ಥಿತಿಗೆ ಕಾರಣವಾಗಿರುವ ಉದಾರೀಕರಣ, ಜಾಗತೀಕರಣದ ದಿವಾಳಿಕೋರ ನೀತಿಗಳನ್ನು ಕೈಬಿಡಲು ತಯಾರೇ ಇಲ್ಲ. ಇನ್ನೂ ಬಿಕ್ಕಟ್ಟು, ಆತ್ಮಹತ್ಯೆಗಳು ನಿಲ್ಲುವುದಾದರೂ ಹೇಗೆ?

ಈ ಅವಧಿಯಲ್ಲಿ ಸತ್ತವರಲ್ಲಿ ಹಾಸನ ಜಿಲ್ಲೆಯಲ್ಲಿ 23. ಅವರು ಬಹುತೇಕ ಆಲೂಗಡ್ಡೆ ಬೆಳೆಗಾರರು, ಬೀದರ್-20, ಬೆಳಗಾಂ-15, ಚಿಕ್ಕಮಗಳೂರು-13, ಮಂಡ್ಯ-12, ಬೆಂಗಳೂರು-10. ಹೀಗೆ ಸಾಗುತ್ತದೆ ಪಟ್ಟಿ. ಇದು ಮಾಧ್ಯಮಗಳ ಕಣ್ಣಿಗೆ ಬಿದ್ದ, ಪೋಲೀಸರು ಬರೆದುಕೊಂಡು ವರದಿಗಳು. ಇವೆಲ್ಲಾ ನೀರಾವರಿ, ಒಣ ಬೇಸಾಯ, ಕಾಫಿ ಪ್ಲಾಂಟೇಷನ್, ಭತ್ತ, ಇತ್ಯಾದಿ ಪ್ರದೇಶಗಳಾಗಿವೆ. ಬಹುತೇಕರ ಸಮಸ್ಯೆಯೆಂದರೆ ಸಾಲದ ಭಾದೆ. ಕೃಷಿಗಾಗಿ ಮಾಡಿದ ಸಾಲವೇ ಪ್ರಧಾನ. ಫಸಲಿಗೆ ಸೂಕ್ತ ಬೆಲೆ ಸಿಗದೆ ಹಾಕಿದ ಬಂಡವಾಳ ವಾಪಸು ಸಿಗದೇ ತತ್ತರಿಸಿ ಹೋದವರು. ಕೃಷಿ ಸಲಕರಣೆಗಳು ದುಬಾರಿ ಬೇರೆ. ಮತ್ತೆ ಕೃಷಿ ಚಟುವಟಿಕೆ ನಡೆಸಲು ಸಾಲ ಸಿಗದೇ ಕಂಗಾಲಾದವರು. ಈ ದಿಶೆಯಲ್ಲಿ ಸರ್ಕಾರಗಳ ಸಾಲ ಮನ್ನಾ ಯೋಜನೆಗಳ ಘೋಷಣೆ ನೆರವಿಗೆ ಬಂದಿಲ್ಲ. ಕೇವಲ ಸಾಂಸ್ಥಿಕವಲ್ಲದೇ, ಖಾಸಗಿ ಲೇವಾದೇವಿಗಾರರ ಸಾಲದ ಜಾಲದಲ್ಲಿ ರೈತಾಪಿಗಳು ಸಿಲುಕಿದ್ದಾರೆ. ಇಂತಹ ಖಾಸಗಿ ಲೇವಾದೇವಿಗಾರರ ಸಾಲವನ್ನು ತೀರಿಸಲು ಸರ್ಕಾರ ಕ್ರಮ ವಹಿಸಬೇಕು. ಈಗಾಗಲೇ ಕೇರಳ ಸರ್ಕಾರ ಈ ದಿಶೆಯಲ್ಲಿ ದೇಶದಲ್ಲೇ ಗಮನಾರ್ಹವಾದ ಕ್ರಮಗಳನ್ನು ಕೈ ಗೊಂಡಿದೆ.

ಒಂದೆಡೆ ತರಕಾರಿಗಳು, ದವಸ ಧಾನ್ಯಗಳ ಬೆಲೆ ಗಗನಕ್ಕೇರಿದೆ. ಆದರೆ ಫಸಲಿಗೆ ಬೆಲೆ ಸಿಗದೇ ರೈತರು ಕಂಗಾಲಾಗಿ ಬೀದಿಗೆ ಸುರಿದು ಹತಾಶೆ ಪ್ರತಿಭಟನೆ ತೋರಿಸಿದ್ದಾರೆ. ಬೆಂಬಲಿತ ಬೆಲೆ ಸಿಗಬೇಕೆಂದು ಅಗ್ರಹವಿದೆಯಾದರೂ ಸರ್ಕಾರಗಳು ಪೂರ್ಣ ಕ್ರಮ ವಹಿಸಲು ನಿರಾಕರಿಸುತ್ತಾ ಬಂದಿವೆ. ಒಟ್ಟು ಲಾಭ ಸಟ್ಟಾ ವ್ಯಾಪಾರಿಗಳ, ಕಾಳಸಂತೆಕೋರರ ಪಾಲಾಗುತ್ತಿದೆ.


ಇದನ್ನು ನಿಯಂತ್ರಿಸಲು ಸರ್ಕಾರದ ಕ್ರಮಗಳಿಲ್ಲ. ಕೇಂದ್ರ ಸರ್ಕಾರ ಊಹಾತ್ಮಕ ವ್ಯಾಪಾರಕ್ಕೆ ನಿರ್ಬಂಧನೆ ವಿಧಿಸಲೇ ಇಲ್ಲ. ಈ ನಡುವೆ ಕೃಷಿ ಕ್ಷೇತ್ರದೊಳಗೆ, ವ್ಯಾಪಾರ ರಂಗದಲ್ಲಿ ಬಹುರಾಷ್ಟ್ರೀಯ ಕಂಪನಿಗಳು, ವಿದೇಶಿ ಬಂಡವಾಳ ಹರಿದು ಬರಲು ಮುಕ್ತ ಅವಕಾಶ ತೆರೆಯಲಾಗಿದೆ. ಅಣು ಒಪ್ಪಂದದ ಬ್ರಹ್ಮಾಸ್ತ್ರ ಬೇರೆ. ಹೀಗೆ ಕೃಷಿಕರ ಕೊರಳಿಗೆ ನೇಣು ಬಿಗಿಯುವ ನೀತಿಗಳೇ.

ಇಂತಹ ಸಂದರ್ಭದಲ್ಲಿ ಯಡಿಯೂರಪ್ಪನವರ ಸರ್ಕಾರದ ಕ್ರಮಗಳು ತೋರಿಕೆಯವು. ಹೀಗೆ ದಿವಾಳಿಯಾಗುತ್ತಿದ್ದಾರೆ. ಅವರ ಭೂಮಿಯನ್ನು ಕಿತ್ತುಕೊಂಡು ಭೂ ದಂಧೆ ನಡೆಸಲು ಸರ್ಕಾರವೇ ಭೂ ಬ್ಯಾಂಕ್ ಸ್ಥಾಪಿಸಹೊರಟಿದೆ. ಭೂಸುಧಾರಣೆಯ ಪ್ರಕ್ರಿಯೆಗೆ ವಿರುದ್ಧವಾದ ಈ ಕ್ರಮಗಳು ಕೃಷಿಯನ್ನು ಕೃಷಿಕರನ್ನು ದಿವಾಳಿಯೆಬ್ಬಿಸಲಿದೆ. ಜೀವನಾಧಾರ ಕಿತ್ತುಕೊಳ್ಳಲಿದೆ. ಅಧಿಕಾರವಹಿಸಿಕೊಂಡ ನಂತರದಲ್ಲಿ ರೈತರ ಬಗ್ಗೆ ಅಪಾರ ಕಾಳಜಿ ಇರುವವರಂತೆ ಬಿಜೆಪಿ ಸರ್ಕಾರ ನಟಿಸಿತು. ಆದರೀಗ ಅದನ್ನು ಪೂರೈಸಿ ಕೈಬಿಟ್ಟು, ಸೌಜನ್ಯದ ಭೇಟಿಯೂ ಇಲ್ಲದೆ ಕ್ರೌರ್ಯ ಮೆರೆದಿದೆ. ಮೇಲಾಗಿ ರಾಜ್ಯದಲ್ಲಿ ಮುಸ್ಲಿಂ-ಕ್ರೈಸ್ತರ ಮೇಲೆ ದಾಳಿ ಹೆಚ್ಚಿಸಿ ಕೋಮುಗಲಭೆ ಸೃಷ್ಟಿಸಿ ಗಮನವನ್ನೇ ನಿಜ ಸಮಸ್ಯೆಗಳಿಂದ ದೂರ ಸೆಳೆದಿದೆ, ಮರೆ ಮಾಚಿದೆ.

ಆತ್ಮಹತ್ಯೆಗಳ ಸರಣಿ ಮುಂದುವರೆದಿರುವ ಸಂದರ್ಭದಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಜನತೆಯ ಬದುಕಿನ ಪ್ರಶ್ನೆಗಳ ಇತ್ಯರ್ಥಕ್ಕೆ ಚಳುವಳಿ ನಡೆಸಬೇಕು. ಇದು ರಾಜಕೀಯದಲ್ಲಿಯೂ ಪ್ರಧಾನ ಅಜೆಂಡಾವಾಗುವಂತಾಗಬೇಕು.

ಈಗಲಾದರೂ ಸನ್ನಿವೇಶದ ಗಂಭೀರತೆ ಅರಿತು ಕೃಷಿ - ಕೃಷಿಕರನ್ನು ರಕ್ಷಿಸಲು ಸರ್ಕಾರ ಅಗತ್ಯ ಕ್ರಮ ವಹಿಸಬೇಕು. ಕಾಯುವ ಬದಲು ಕೊಲ್ಲುವ ಸ್ಥಾನದಲ್ಲಿ ಸರ್ಕಾರಗಳೇ ನಿಂತಿರುವುದೇ ಕ್ರೂರ ವಾಸ್ತವ

ಮುಖ್ಯಮಂತ್ರಿಗಳ ದೆಹಲಿಯಾತ್ರೆಯ ಮಾತು



ಇದೀಗ ರಾಜ್ಯೋತ್ಸವದ ಆಚರಣೆ ಆರಂಭ. ಏನಿಲ್ಲವೆಂದರೂ ಈ ಒಂದು ತಿಂಗಳು ಎಲ್ಲೆಡೆಗಳಲ್ಲಿಯೂ ಸಭೆ, ಸಮಾರಂಭ, ಗಾನಗೋಷ್ಠಿಗಳ ಅಬ್ಬರ. ಕನ್ನಡಕ್ಕಾಗಿ ಕೈ ಎತ್ತುವ, 'ಕೈ ಚಾಚುವ' ವರಸೆ! ಅಂತೂ ಒಂದು ತಿಂಗಳಾದರೂ ಭಾಷೆ, ನೆಲೆ, ಜಲ ಇತ್ಯಾದಿಗಳು ಜಾಲ್ತಿಯಲ್ಲಿರುತ್ತವೆ ಎಂಬುದೇ ಒಂದು ವಿಶೇಷ.

ಇದು ಕರ್ನಾಟಕ ರಾಜ್ಯೋತ್ಸವ. ಆದರೆ ಮೆಲ್ಲ ಮೆಲ್ಲನೆ ಬರುಬರುತ್ತಾ ಇದು 'ಕನ್ನಡ'ದ ರಾಜ್ಯೋತ್ಸವವಾಗಿ ಬಿಟ್ಟಿದೆ! ಕರ್ನಾಟಕ ಎಂದಾಗ ಕೇವಲ ಕನ್ನಡ ಭಾಷೆ ಮಾತ್ರವಲ್ಲ, ತುಳು, ಕೊಡವ, ಕೊಂಕಣಿ.... ತೆಲುಗು, ಮಲೆಯಾಳಂ, ತಮಿಳು ಮುಂತಾದ ಭಾಷೆಗಳು, ಭಾಷಿಕರನ್ನು ಒಳಗೊಳ್ಳುತ್ತದೆ. ಇದೆಲ್ಲಾ ಸೇರಿದಾಗಲೇ ಕರ್ನಾಟಕ. ಆದರೆ ವಿಶಾಲಾರ್ಥದ ಆಚರಣೆಯನ್ನು ಅತ್ಯಂತ ಸಂಕುಚಿತಗೊಳಿಸಿ ಕನ್ನಡಕ್ಕೆ ಮಾತ್ರ ಸೀಮಿತಗೊಳಿಸಿದಾಗ ಉಳಿದ ಭಾಷಿಕರನ್ನು ಹೊರಗೆ ಉಳಿಸಿದಂತಾಗುತ್ತದೆ. ಪರಕೀಯತೆ ಭಾವನೆ ಬಿತ್ತಲಾಗುತ್ತದೆ. ಬೆಂಗಳೂರಿನಂತಹ ಕಡೆಯಲ್ಲಿ ರಾಜ್ಯೋತ್ಸವ ಎಂದರೆ ಅನ್ಯ ಭಾಷಿಕರಿಗೆ ಎಚ್ಚರಿಕೆ ನೀಡುವ, ಭಾರತದ ಪ್ರಜೆಗಳಾಗಿದ್ದರೂ ಮರ್ಜಿಯಲ್ಲಿ ಬದುಕಬೇಕೆಂಬ ಸ್ವಯಂಘೋಷ ಫರ್ಮಾನುಗಳು ಹೊರಡಿಸುವ ಸಂದರ್ಭಗಳಾಗಿರುತ್ತವೆ. ಇದು ಕರ್ನಾಟಕದ ಏಕೀಕರಣದ ಆಶಯಕ್ಕೆ ವಿರುದ್ಧವಾದುದು. ಆದರೇನು ನಮ್ಮ ಮಾಧ್ಯಮಗಳೂ ಇದನ್ನು ಭಾಷೆಯ ಮಟ್ಟಕ್ಕೆ ಇಳಿಸಿ ಕನ್ನಡ ರಾಜ್ಯೋತ್ಸವ ನಡೆಸುತ್ತವೆ.

ನಮ್ಮ ರಾಜ್ಯೋತ್ಸವ ನಿಜಕ್ಕೂ ಏಕೀಕರಣದ ಆಶಯ, ನಾಡು-ನುಡಿಯ ಬೆಳವಣಿಗೆ - ಬದುಕಿನ ರಕ್ಷಣೆಯತ್ತ ಗಹನ ಚಿಂತನೆ ಹುಟ್ಟುಹಾಕುವ, ವಿಶ್ಲೇಷಣೆಗೊಳಪಡುವಂತೆ ಬೆಳಕು ಕಾಣಲು ಸಾಧ್ಯವಾಗುವಂತಿಬೇಕಿದೆ. ಆದರೆ ಬಹುತೇಕ ಆಚರಣೆಗಳು ಸ್ವಪ್ರದರ್ಶನದ, ಪ್ರತಿಷ್ಠೆಯ ಪ್ರದರ್ಶನಗಳಾಗಿವೆ. ಬದಲು ಅರ್ಥಪೂರ್ಣ ಆಚರಣೆಗಳಾಗಬೇಕು. ಬಣ್ಣದ ಬಾವುಟಗಳಡಿ 'ಪುಂಡುಗಂದಾಯ' ವಸೂಲಿಯ ಸಂದರ್ಭವಾಗಬಾರದು.

ಹೌದು ! ಕರ್ನಾಟಕದ ಕನ್ನಡದಂತಹ ಭಾಷೆ, ಬದುಕು, ಆರ್ಥಿಕತೆ, ಸಂಸ್ಕೃತಿ ರಕ್ಷಣೆಗೆ ನಡೆಯುವ ಹೋರಾಟ, ಯತ್ನಗಳು ಕೇವಲ ನವೆಂಬರ್‌ಗೆ ಸೀಮಿತವಾಗಬೇಕಿಲ್ಲ. ಆದರೇನು? ನವೆಂಬರ್ ಹತ್ತಿರ ಬರುತ್ತಿರುವಂತೆಯೇ ಕೆಲವರಿಗೆ ವಿಶೇಷವಾಗಿ ಪುಳಕವಾಗುತ್ತದೆ. ಕನ್ನಡಕ್ಕಾಗಿ ಹಾಸಿ-ಹೊದ್ದು ಮಲಗುವ ಅಥವಾ 'ಹಟ್ಯಾಕ್' ಹೋರಾಟ ಮಾಡುವ ನಾಯಕರಿರಲಿ, ಸ್ವತಃ ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪನವರೇ ಇಂದು ದೆಹಲಿಗೆ ಹೋಗಿ ಕೈ ಎತ್ತಲು ನಿರ್ಧರಿಸಿಬಿಟ್ಟರು. ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ ನೀಡಬೇಕೆಂದೂ, ಹೈ.ಕ. ಪ್ರದೇಶವನ್ನು ಸಂವಿಧಾನದ 371ನೇ ಕಲಮಿನ ವ್ಯಾಪ್ತಿಗೆ ಸೇರಿಸಬೇಕೆಂದೂ ಕೇಂದ್ರವನ್ನು ಆಗ್ರಹಿಸಿ ಗಾಂಧೀಜಿ ಸಮಾಧಿಬಳಿ ಧರಣಿ ಕೂರುವುದು. ಇದಕ್ಕಾಗಿ ಸರ್ವಪಕ್ಷಗಳನ್ನು ಕರೆದೊಯ್ಯುವುದಾಗಿ ಘೋಷಿಸಿದರು. ಆದರೆ ಸಮಸ್ಯೆಗಳ ಬಗ್ಗೆ ಸಮಾಲೋಚನೆಯೇ ಮಾಡದೇ ಸೀದಾ ವಿಮಾನ ಹತ್ತಿ ಬೆನ್ನ ಹಿಂದೆ ಬನ್ನಿ ಎಂಬ ಮುಖ್ಯಮಂತ್ರಿಗಳ ಆಹ್ವಾನವನ್ನು ಎಲ್ಲರೂ ತಿರಸ್ಕರಿಸಿದರು. ತಮ್ಮ ಮಹಾನ್ ಕೆಲಸಕ್ಕೆ ರಾಜ್ಯದ ಹಿತಕ್ಕೆ ವಿರೋಧ ಪಕ್ಷಗಳಿಂದ ಸಹಕಾರ ಸಿಗಲಿಲ್ಲವೆಂದು ಸಿದ್ಧ ಉತ್ತರದ ಕೆಂಡಗಾರಿ, ಸಮಾಧಿ ಬಳಿ ತಾವೊಬ್ಬರೇ ಕೂಡುವುದಾಗಿ ಹೇಳಿದರು. ಆಗಲೇ ಅವರ ನಿಜ ಕಾಳಜಿ ಏನೆಂಬುದೂ ಹೊರಗೆ ಬಂತು.

ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬೇಡಿಕೆಗಳು ಈಡೇರಲೇಬೇಕೆಂಬ ಇರಾದೆಯೇನೂ ಇರಲಿಲ್ಲ. ಕನ್ನಡಕ್ಕಾಗಿ ತಾನು ಏನೆಲ್ಲಾ ಮಾಡಿದೆ ಎಂದು ಹೇಳಿಕೊಳ್ಳಲು ಬೇಕಿದೆ. ಮೇಲಾಗಿ ಮುಂಬರುವ ಲೋಕಸಭೆ ಹಾಗೂ ವಿಧಾನಸಭೆಯ ಉಪ ಚುನಾವಣೆಯಲ್ಲಿ ಸಾಧನೆಗಳ ಪಟ್ಟಿಯಲ್ಲಿ ಇದನ್ನೊಂದು ಸೇರಿಸಿಕೊಳ್ಳಬೇಕಿದೆ. ಮತ ಸೆಳೆಯಲು ಬೇಕಿದೆ. ಸರಿ ಕನ್ನಡಕ್ಕೇನೂ ಶಾಸ್ತ್ರೀಯ ಸ್ಥಾನಮಾನ ಕೇಳಲಿ, ಆದರೆ ಅದೇ ಹೊತ್ತಿನಲ್ಲಿ ಈ 'ಹೋರಾಟ'ವನ್ನು ತಮಿಳು - ತಮಿಳರ ವಿರುದ್ಧ ತಿರುಗಿಸಲು ಯಾಕೆ ಪ್ರಯತ್ನಿಸಲಾಯಿತು. ಅಂದರೆ ಇಲ್ಲಿ ಭಾಷಾಂಧತೆಯನ್ನು ಬಡಿದೆಬ್ಬಿಸಿ ರಾಜಕೀಯ ಲಾಭ ಹೊಡೆಯುವ ಲೆಕ್ಕಾಚಾರ ಇಲ್ಲವೆನ್ನಲು ಹೇಗೆ ಸಾಧ್ಯ. ಹಿಂದಿನಿಂದಲೂ ಹೊಗೇನಕಲ್, ಗಡಿ ವಿವಾದಗಳನ್ನು ದುರ್ಬಳಕೆ ಮಾಡಲು ಯತ್ನಿಸುತ್ತಲೇ ಬರಲಾಗಿದೆ. ಹೋಗಲಿ ಇಂದು ಕನ್ನಡ ಭಾಷೆ, ಕರ್ನಾಟಕ ಎದುರಿಸುತ್ತಿರುವ ಜ್ವಲಂತ ಪ್ರಶ್ನೆಗಳನ್ನಾದರೂ ಎತ್ತಿದ್ದಾರೆಯೇ ಎಂದರೆ ಆ ಮಾತೇ ಇಲ್ಲ. 371ನೇ ಕಲಮಿನ ವಿಚಾರವೂ ಅಷ್ಟೇ, ಬಿಜೆಪಿಯುದ್ದೇ ಸರ್ಕಾರ ಕೇಂದ್ರದಲ್ಲಿದ್ದಾಗ ಈ ಬಗ್ಗೆ ಚಕಾರವೂ ಎತ್ತದ ಇವರು ಈಗ ಎತ್ತುವುದು ಎಂದರೇನು ಅರ್ಥ. ಪ್ರಾದೇಶಿಕ ಅಸಮಾನತೆ ತೊಲಗಿಸುವುದಾಗಿ ದಿನವೂ ಹೇಳುವ ಸರ್ಕಾರ ನಿಜಕ್ಕೂ ಆ ದಿಕ್ಕಿನಲ್ಲಿ ಕಾರ್ಯಪ್ರವೃತ್ತರಾಗಲು ಮೂಲಭೂತ ಕ್ರಮಗಳನ್ನು ಕೈಗೊಂಡಿದೆಯೇ? ಹೋಗಲಿ ಮಾನವ ಅಭಿವೃದ್ಧಿ ಸೂಚ್ಯಂಕದ ಆಧಾರದಲ್ಲಿ ಜನತೆಯ ಬದುಕು ಸುಧಾರಿಸಲು ಕಾರ್ಯಯೋಜನೆಯನ್ನು ರೂಪಿಸಲಿಲ್ಲ. ಸಾವಿರಾರು ಕೋಟಿ ರೂಪಾಯಿಗಳ ಅಭಿವೃದ್ಧಿ ಮಾತುಗಳು ರಸ್ತೆಯಂತಹ ಕಾಮಗಾರಿ ಕಂಟ್ರಾಕ್ಟ್‌ಗಳ ಜೇಬಿಗೆ ಹಣ ಸೇರಿಸುವ ಯೋಜನೆಗಳೆಂಬುದಕ್ಕೆ ಹೆಚ್ಚಿನ ಪುರಾವೆಯಾದರೂ ಬೇಕಿಲ್ಲ. ಹಿಂದಿನ, ಇಂದಿನ ಸರ್ಕಾರಗಳದ್ದು ಇದೇ ಪರಿಪಾಠ. ಇದಕ್ಕಿಂತ ಯಡ್ಡಿಯೇನು ಭಿನ್ನ! ವಿಚಿತ್ರವೆಂದರೆ ಮನಸ್ಸಿನೊಳಗೆ ಇಂತಹ ವಂಚನೆಯ ಯೋಜನೆ ಇರಿಸಿಕೊಂಡು ಗಾಂಧಿ ಸಮಾಧಿಯ ಮುಂದೆ ಕೂಡುವುದು ಪರಿಹಾಸ್ಯದ ಪ್ರಸಂಗ. ಮಾತ್ರವಲ್ಲ. ಹೀಗೂ ಗಾಂಧೀಜಿಯವರಿಗೆ ಅವಮಾನ ಮಾಡುವ ಸಂಘ ಪರಿವಾರಿಗಳ ವಿಧಾನ.

ಯಡಿಯೂರಪ್ಪನವರು ದೆಹಲಿಯಲ್ಲಿ ಧರಣಿ ಹೂಡಲು ಏನಾದರೊಂದು ನೆಪವೂ ಬೇಕಿತ್ತು. ಬಿಜೆಪಿ ಅಧಿಕಾರಕ್ಕೆ ಬಂದ ನಂತರದಿಂದಲೂ ಅವ್ಯಾಹತವಾಗಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು, ವಿಶೇಷವಾಗಿ ಇತ್ತೀಚೆಗೆ ಆರ್.ಎಸ್.ಎಸ್.ನ ಪರಿವಾರದಿಂದ ಕ್ರೈಸ್ತರ ಮೇಲೆ ಹಾಗೂ ಕ್ರೈಸ್ತ ಪ್ರಾರ್ಥನಾ ಮಂದಿರಗಳ ಮೇಲೆ ನಡೆಸಿದ ಅಮಾನುಷ ಧಾಳಿಗಳು ಬಿಜೆಪಿ ಸರ್ಕಾರಕ್ಕೆ ಛಿಮಾರಿ ಹಾಕಿದವು. ದೇಶದೆಲ್ಲೆಡೆಗಳಲ್ಲಿಯೂ ಖಂಡನೆಗೆ ಒಳಗಾಯಿತು. ಅನಿವಾರ್ಯವಾಗಿ ಕೇಂದ್ರ ಸರ್ಕಾರವೂ ಮಧ್ಯಪ್ರವೇಶಿಸಿ ಸಂವಿಧಾನಾತ್ಮಕ ಕ್ರಮದ ಇಂಗಿತ ತೋರಿತು. ದೇಶದೆದುರು ತಲೆ ತಗ್ಗಿಸುವಂತಹ ಕ್ರಮಗಳಿಂದ ಮುಖಭಂಗಕ್ಕೆ ಈಡಾಗಿದ್ದ ಯಡಿಯೂರಪ್ಪ ಹಾಗೂ ಅವರ ಸರ್ಕಾರ ಮುಖ ಉಳಿಸಿಕೊಳ್ಳಲು ಕೇಂದ್ರದ ವಿರುದ್ಧ ಒಂದು ನೆಪ ಹುಡುಕಿತು.

ಹೀಗಾಗಿ ಯಡೂರಪ್ಪನವರ ದೆಹಲಿ ಧರಣಿ ಒಂದು ಸ್ಟಂಟ್ ಮಾತ್ರ, ಅಗ್ಗದ ತಂತ್ರವಷ್ಟೇ.

ಇದು ಅಚ್ಚಿಗೆ ಸಿದ್ಧವಾಗುತ್ತಿರುವ ಹೊತ್ತಿಗೆ ಸಂತೋಷದ ಸಂಗತಿಯೊಂದು ಹೊರಬಿದ್ದಿದೆ. ಕನ್ನಡ-ತೆಲುಗು ಭಾಷೆಗಳಿಗೆ ಶಾಸ್ತ್ರೀಯ ಸ್ಥಾನಮಾನವನ್ನು ಕೇಂದ್ರ ಸರ್ಕಾರ ಘೋಷಿಸಿದೆ. (ಇದೊಂದೇ ಸಾಲದು ಎನ್ನುತ್ತಲೇ ಸ್ವಾಗತಿಸೋಣ) ಅಂದರೆ ಯಡಿಯೂರಪ್ಪನವರ ಧರಣಿ ಗತಿ? ದೆಹಲಿ ಯಾತ್ರೆ ಕೈಬಿಟ್ಟಿದ್ದಾರಂತೆ! ಇನ್ನೊಂದಕ್ಕೆ ಸಿದ್ಧವಾಗುತ್ತಿರಬಹುದು. ಯಾಕೆಂದರೆ ಅಂದುಕೊಂಡದ್ದು ಪೂರ್ಣ ಆಗಲಿಲ್ಲವಲ್ಲ.

ಮಂಡ್ಯ ನಗರಸಭೆಗೆ ಕಾಲಿಟ್ಟ ಆಪರೇಷನ್ ಕಮಲ

ಬೇರೆಯವರ ಗೂಡಲ್ಲಿ ಮೊಟ್ಟೆ ಇಕ್ಕಿ ಮರಿ ಮಾಡುವ ವಂಚಕ ರಾಜಕೀಯಕ್ಕೆ ಹೆಸರಾಗಿರುವ ಬಿ.ಜೆ.ಪಿ. ಪಕ್ಷ ರಾಜ್ಯಾದ್ಯಂತ 'ಆಪರೇಷನ್ ಕಮಲ'ದ. ಹೆಸರಿನಲ್ಲಿ ನಡೆಸುತ್ತಿರುವ ಅನೈತಿಕ ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆ ಮಂಡ್ಯದಲ್ಲೂ ತನ್ನ ಕರಾಳ ಮುಖ ತೋರಿದೆ.

36 ಸದಸ್ಯ ಬಲದ ಮಂಡ್ಯ ನಗರ ಸಭೆಯನ್ನು 23 ಸೀಟು ಗೆಲ್ಲುವ ಮೂಲಕ ಜಾತ್ಯಾತೀತ ಜನತಾದಳ ಜಯಭೇರಿ ಬಾರಿಸಿತ್ತು. 5 ಸದಸ್ಯರು ಪಕ್ಷೇತರ, 2 ಬಿ.ಜೆ.ಪಿ, 6 ಕಾಂಗ್ರೆಸ್ ಗೆದ್ದುಕೊಂಡಿತು. ನಂತರ ನಡೆದ ಅಧ್ಯಕ್ಷ -ಉಪಾಧ್ಯಕ್ಷ ಚುನಾವಣೆಯಲ್ಲಿ ಪಕ್ಷೇತರ ಸದಸ್ಯ ರಮೇಶನನ್ನು ಜಾತ್ಯಾತೀತ ಜನತಾದಳಕ್ಕೆ ಸೇರಿಸಿಕೊಂಡು ಉಪಾಧ್ಯಕ್ಷನನ್ನಾಗಿ ಜೆ.ಡಿ.ಎಸ್. ಆಯ್ಕೆ ಮಾಡಿಕೊಂಡಿತ್ತು.



ಯಾವಾಗ ವಿಧಾನಸಭೆ ಚುನಾವಣೆ ಮುಗಿದು ರಾಜ್ಯದಲ್ಲಿ ಬಿ.ಜೆ.ಪಿ ಸರ್ಕಾರ ಅಧಿಕಾರಕ್ಕೆ ಬಂತೋ ಅಲ್ಲಿಂದಲೇ ಮಂಡ್ಯ ನಗರವನ್ನು ಬಿ.ಜೆ.ಪಿ ನೆಲೆ ಮಾಡಲುಇರುವ ಎಲ್ಲಾ ಅವಕಾಶಗಳಿಗಾಗಿ ಹುಡುಕಾಟ ನಡೆಸಿ ವ್ಯವಸ್ಥಿತವಾಗಿ ಕೋಮು ದಂಗೆಗಳನ್ನು ಒಂದಲ್ಲ ಹಲವಾರು ಬಾರಿ ಹುಟ್ಟುಹಾಕಲು ವಿಫಲ ಯತ್ನ ನಡೆಸಿತ್ತು.

ಒಂದು ವರ್ಷದ ಹಿಂದೆ ಕೊಲೆಯಾದ ಅಬಕಾರಿ ಉದ್ಯಮಿ ನಾಗೇಂದ್ರರವರ ಪತ್ನಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾದ ವಿದ್ಯಾ ನಾಗೇಂದ್ರರಿಗೆ ಬಿ.ಜೆ.ಪಿ ಟಿಕೇಟ್ ಕೊಟ್ಟು ಪ್ರಬಲ ಪೈಪೋಟಿ ನೀಡಿ ಎರಡನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು. ಇದರಿಂದ ಉತ್ತೇಜಿತರಾಗಿ ಏನಾದರೂ ಮಾಡಿ ಜಿಲ್ಲೆಯಲ್ಲಿ ನೆಲೆಯೂರಲು ನಗರಸಭೆಯುನ್ನು ಹೈಜಾಕ್ ಮಾಡಲು ಕಳೆದ 6 ತಿಂಗಳುಗಳಿಂದ ನಡೆಸಿದ ಸತತ ಪ್ರಯತ್ನದಿಂದಾಗಿ ಜೆ.ಡಿ.ಎಸ್. ನಿಂದ 9, ಕಾಂಗ್ರೆಸ್ 3, ಪಕ್ಷೇತರರು ಹಾಲಿ ಉಪಾಧ್ಯಕ್ಷ ಸೇರಿ 5 ಜನರನ್ನು ತನ್ನ ತೆಕ್ಕೆಗೆ ಸೆಳೆದುಕೊಂಡು ಅನೈತಿಕ ರಾಜಕಾರಣದ ಪರಮಾವಧಿಯ ಮಾದರಿಯನ್ನು ಜಿಲ್ಲೆಗೆ ಬಿ.ಜೆ.ಪಿ ಪರಿಚಯಿಸಿದೆ.

ಬಿ.ಜೆ.ಪಿ ನಾಯಕರು ಗಣಿಧಣಿ ಕರುಣಾಕರ ರೆಡ್ಡಿ ನೇತೃತ್ವದಲ್ಲಿ ಹತ್ತಾರು ಬಾರಿ ಗುಟ್ಟಾಗಿ ನಗರಕ್ಕೆ ಬಂದು ಹೋಗಿದ್ದಾರೆ. ಒಬ್ಬ ಸದಸ್ಯರಿಗೆ 10 ಲಕ್ಷ ರೂ.ಗಳಿಗೆ ಬುಕ್ ಮಾಡಿ ಈ ಸಂಬಂಧ ಮುಖ್ಯ ಜವಾಬ್ದಾರಿಯನ್ನು ಜೆ.ಡಿ.ಎಸ್. ಸದಸ್ಯ ನಾಗೇಂದ್ರ ಹಾಗೂ ಪಕ್ಷೇತರ ಕಾಂಗ್ರೆಸ್ ಬಂಡಾಯ ಸದಸ್ಯ ಎಂ.ಎಲ್.ಮಂಜುನಾಥ್‌ಗೆ ವಹಿಸಿದ್ದರು.

ಈ ಪಕ್ಷಾಂತರ ಹಿಂದೆ ಇದ್ದ ಏಕಮೇವ ಉದ್ದೇಶ ನಗರಸಭೆ ಅಧಿಕಾರ ಹಿಡಿಯುವುದು ಆ ಮೂಲಕ ಬೆಂಗಳೂರು-ಮೈಸೂರು ಮಧ್ಯ ಇರುವ ಮಂಡ್ಯದ ಬೆಳೆಯುತ್ತಿರುವ ನಗರದ ಅಮೂಲ್ಯ ಆಸ್ತಿಯನ್ನು ತಮ್ಮ ರಿಯಲ್ ಎಸ್ಟೇಟ್ ದಂದೆಗೆ ಉಪಯೋಗಿಸಿಕೊಳ್ಳುವುದು. ಈ ರೀತಿ ಬಂದ ಹಣದಲ್ಲಿ ಜೆ.ಡಿ.ಎಸ್.ನ್ನು ಮುಗಿಸಿ ಬಿ.ಜೆ.ಪಿ ಬೆಳೆಸುವ 'ಬಳ್ಳಾರಿ ಮಾದರಿ'ಯನ್ನು ಜಿಲ್ಲೆಯಲ್ಲಿ ರೂಪಿಸುವುದಾಗಿದೆ. ಈಗ ಬರುತ್ತಿರುವ ಲೋಕಸಭಾ ಚುನಾವಣೆಗೂ ಭದ್ರವಾದ ಅಡಿಪಾಯ ಹಾಕುವುದು ಕೂಡ ತಕ್ಷಣದ ಉದ್ದೇಶವಾಗಿರುವುದು ಯಾರಿಗೆ ಬೇಕಾದರೂ ಗೊತ್ತಾಗಬಲ್ಲ ಸಂಗತಿಯಾಗಿದೆ.

ಮೂರು ತಿಂಗಳ ಹಿಂದೆ ಜೆ.ಡಿ.ಎಸ್ ಸದಸ್ಯೆ ಪದ್ಮಾವತಿ ಪತ್ರಿಕಾಗೋಷ್ಠಿ ನಡೆಸಿ ಬಿಜೆಪಿ ಸೇರಲು ಬೆದರಿಕೆ ಹಾಕುತ್ತಿರುವ ವಿಷಯ ಸೇರಿದಂತೆ 10 ಲಕ್ಷ ಹಣದ ಆಮಿಷ ಒಡ್ಡುತ್ತಿರುವ ವಿಷಯವನ್ನು ಬಹಿರಂಗ ಪಡಿಸಿದ್ದರು. ಆದರೆ ನಂತರ ನಡೆದ ಬೆಳವಣಿಗೆಯಲ್ಲಿ ಪಕ್ಷಾಂತರಗೊಂಡ ಸದಸ್ಯರಲ್ಲಿ ಪದ್ಮಾವತಿಯವರು ಸೇರಿದ್ದು ಎಲ್ಲರಲ್ಲಿ ಅಚ್ಚರಿ ಮೂಡಿಸಿತು.

ತಕ್ಷಣ ಕ್ರಿಯಾಶೀಲವಾದ ಜೆ.ಡಿ.ಎಸ್. ಪಕ್ಷ ನಗರದಲ್ಲಿ ಪ್ರತಿಭಟನೆ ಆಯೋಜಿಸಿ ವಾರ್ಡ್‌ನ ಮತದಾರರನ್ನು ಸಂಘಟಿಸಿ ಪಕ್ಷಾಂತರಗೊಂಡ ಸದಸ್ಯರ ಮೇಲೆ ಕ್ರಮಕ್ಕೆ ಆಗ್ರಹಿಸಿ ಮೆರವಣಿಗೆ ನಡೆಸಿತು. ಆ ಮೆರವಣಿಗೆ ದಿನವೇ ಪದ್ಮಾವತಿ ಬಿ.ಜೆ.ಪಿ. ತ್ಯಜಿಸಿ ಜೆ.ಡಿ.ಎಸ್. ಸೇರಿ ಮೆರವಣಿಗೆಯಲ್ಲಿ ಪಾಲ್ಗೊಂಡು ಅಧ್ಯಕ್ಷರನ್ನಾಗಿ ಮಾಡುವ ಬಿಜೆಪಿಯವರ ಆಮಿಷಕ್ಕೆ ಬಲಿಯಾಗಿ ತಪ್ಪು ಮಾಡಿದ್ದೇನೆ. ಈಗ ನನ್ನ ತಪ್ಪು ಅರಿವಾಗಿದೆ. ನಾನು ಪಕ್ಷಕ್ಕೆ ದ್ರೋಹ ಮಾಡುವುದಿಲ್ಲ ಎಂದು ಘೋಷಿಸಿ ಬಿ.ಜೆ.ಪಿಯ ಬಣ್ಣ ಬಯಲು ಮಾಡಿದರು.

ಬಹುಮತಕ್ಕೆ ಕೊರತೆ ಇರುವ ಸಂಖ್ಯೆಯನ್ನು ಮಾತ್ರ ತುಂಬಿಸಿಕೊಳ್ಳುತ್ತೇನೆ ಎಂದು ಹೇಳಿದ್ದ ಮುಖ್ಯಮಂತ್ರಿ ಯಡಿಯೂರಪ್ಪನ ಠಕ್ಕುತನ ಈ ಮೂಲಕ ಬಯಲಾಗಿದೆ. 'ಆಪರೇಷನ್ ಕಮಲ' ಕೇವಲ ಶಾಸನ ಸಭೆಗಷ್ಟೇ ಅಲ್ಲದೆ ಬಿ.ಜೆ.ಪಿ - ಆರ್.ಎಸ್.ಎಸ್. ಅನ್ನು ಸಂಘಟನಾತ್ಮಕವಾಗಿ ಗಟ್ಟಿಗೊಳಿಸಲು ಬೇಕಾದ ರಾಜಕೀಯ ತಂತ್ರ ಎಂಬುದು ಬಯಲಾಗಿದೆ. ಕೇವಲ 2 ಸದಸ್ಯರನ್ನು ಗೆದ್ದಿದ್ದ ಬಿ.ಜೆ.ಪಿ. ಅಧಿಕಾರ ಹಿಡಿಯಲು ನಡೆಸಿದ ಪ್ರಯತ್ನವು ಜನರಲ್ಲಿ ಹೇಸಿಗೆ ಹುಟ್ಟಿಸಿದೆ. ಬಿ.ಜೆ.ಪಿ ಸೇರಿದ್ದ ಸದಸ್ಯರೊಬ್ಬರು ಮತ್ತೆ ಜೆ.ಡಿ.ಎಸ್.ಗೆ ಸೇರಿರುವುದು ಬಿ.ಜೆ.ಪಿಗೆ ಭಾರೀ ಮುಖಭಂಗವಾಗಿ ಅಧಿಕಾರ ಹಿಡಿಯುವ ಅವರ ಪ್ರಯತ್ನಕ್ಕೆ ತೀವ್ರ ಧಕ್ಕೆ ಬಂದಿದೆ. ಅವಿಶ್ವಾಸ ಗೊತ್ತುವಳಿ ಅಂಗೀಕರಿಸಲು 2/3 ರಷ್ಟು ಅಂದರೆ 24 ಸದಸ್ಯರು ಬೇಕು ಇನ್ನೂ 2-3 ರಷ್ಟು ಜೆ.ಡಿ.ಎಸ್. ಮಂದಿ ವಾಪಸ್ಸು ಬರುವ ಚಟುವಟಿಕೆಗಳು ನಡೆಯುತ್ತಿವೆ.

ಬಿಜೆಪಿಯ ಬಾಣ ಮಂಡ್ಯದಲ್ಲಿ ತಿರುಗುಬಾಣವಾಗುವ ಸಂಭವವೇ ಹೆಚ್ಚಾಗಿದೆ ಎನ್ನುವುದು ಇಲ್ಲಿನ ನಾಗರೀಕರ ಅಭಿಪ್ರಾಯವಾಗಿದೆ.

■ ಟಿ.ಯಶವಂತ

ನಾಳಿನ ಕಾರ್ಯಕ್ರಮಗಳು

- ರಂಗಭೂಮಿಯ ಸುವರ್ಣಯುಗದ ಸಂಭ್ರಮಾಚರಣೆ 'ರಂಗಶಂಕರ ನಾಟಕೋತ್ಸವ-08' ಅಕ್ಟೋಬರ್ 31 ರಿಂದ ನವೆಂಬರ್ 9, 2008ರವರೆಗೆ, ಬೆಂಗಳೂರು
- ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 4ನೇ ಸಮ್ಮೇಳನ ನವೆಂಬರ್ 2-4,2008 ಬಾಗೇಪಲ್ಲಿ
- ಎಐಎಡಬ್ಲ್ಯೂಯು ನ ಅಖಿಲ ಭಾರತ ಜಾಥಾ ನವೆಂಬರ್ 5 ರಿಂದ ಡಿಸೆಂಬರ್ 2, 2008 ರವರೆಗೆ ಬೃಹತ್ ರ್‍ಯಾಲಿ ಹೈದ್ರಾಬಾದ್
- ಅಕ್ಟೋಬರ್ 30 ರಿಂದ ನವೆಂಬರ್ 5ರವರೆಗೆ ಭಯೋತ್ಪಾದನೆ ಮತ್ತು ಕೋಮುವಾದದ ವಿರುದ್ಧ ಪ್ರಚಾರಾಂದೋಲನ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ.
- ಸಮುದಾಯ ರಾಜ್ಯ ಸಮ್ಮೇಳನ ಡಿಸೆಂಬರ್ 7-8, 2008 ಬೆಂಗಳೂರು

ಹೀಗೆ ಅನ್ಯಾಯ ಮಾಡಬಹುದೇ?

ಅಂತೂ ಇಂತೂ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಎಂಬ ಸ್ಥಾನ ಮಾನ ಸಿಕ್ಕಿದೆ. ನಮ್ಮ ಓರಾಟವೇ ಕಾರಣ ಅಂತ ಉಟ್ಟು ಓರಾಟಗಾರರೂ, ನಾವೇ ಕಾರಣ ಅಂತ ವಿವಿಧ ರಾಜಕೀಯ ಪಕ್ಷಗಳೂ ಪಟಾಕಿ ಸಿಡಿಸುತ್ತಿವೆ. ಸಹಜವೇ. ಯಶಸ್ಸಿಗೆ ಅಪ್ಪಂದಿರು ಜಾಸ್ತಿ. ಕನ್ನಡ ಶಾಸ್ತ್ರೀಯ ಭಾಷೆ ಎಂದು ಕರೆಯಲ್ಪಡುತ್ತದೇನೋ ನಿಜ. ಆದರೆ ಅದರ 'ಸ್ಥಾನ ಮಾನ'? ಕ್ರಮೇಣ ಸಂಸ್ಕೃತದ 'ಸ್ಥಾನ ಮಾನ' ಕ್ಕೇರುತ್ತಿದೆ. ('ಸ್ಥಾನ ಮಾನ', 'ಸ್ಥಾನ ಮಾನ' ಎನ್ನುತ್ತಿದ್ದರೆ ಸಿದ್ಧರಾಮಯ್ಯನವರ 'ಸ್ಥಾನ ಮಾನ' ನೆನಪಾಗುವುದು ಇಲ್ಲಿ ಅಪ್ರಸ್ತುತ ಅಲ್ಲವೇ?!). ಆಡಳಿತದಲ್ಲಿ ಜಾರೀ..., ಜಾರೀ..., ಶಾಲೆಗಳಲ್ಲಿ ಕನ್ನಡ ಮಾಧ್ಯಮ ಜಾರೀ..., ಜಾರೀ..., ಕರ್ನಾಟಕದಲ್ಲೇ ಕನ್ನಡ ದೇವರ ಪಾದ ಸೇರುತ್ತಿದೆ! ಅದೇನೇ ಇರಲಿ ದೆಹಲಿಗೆ ನಿಯೋಗ ಕರದೊಯ್ದು ಓರಾಟವ ಹಾಡಿ, 'ನಿಯೋಗ' ಪದ್ಧತಿ ಮೂಲಕ ಕನ್ನಡವನ್ನು ಶಾಸ್ತ್ರಿ ಭಾಷೆ ಮಾಡಬೇಕೆಂದಿದ್ದ ನಮ್ಮ ಸನ್ಮಾನ್ಯ ಶ್ರೀ ಮುಖ್ಯಮಂತ್ರಿಗಳಿಗೆ ನಿರಾಸೆಯಾಗಿರಬೇಕು.

ಮೊದಲು ತೊಂಭತ್ತು ಮಂದಿ 'ಗಣ್ಯರಿಗೆ' ನಂತರ ಇಲ್ಲದೇ ಇರುವ ಒಬ್ಬ ವ್ಯಕ್ತಿ ಕಡಿಮೆಯಾಗಿ, ಆಮೇಲೆ ಮೂರು ಮಂದಿ ಜಾಸ್ತಿಯಾಗಿ, ಒಟ್ಟಿನಲ್ಲಿ ಈ ಕ್ಷಣದವರೆಗೆ ತೊಂಭತ್ತೆರಡು ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಲಾಗಿದೆ. ಶತಕಕ್ಕೆ ಎಂಟೇ ಎಂಟು ಕಡಿಮೆಯಾಯಿತು ಛೇ! ಆರು ಕೋಟಿ ಜನರ ಈ ನಾಡಿನಲ್ಲಿ ಇನ್ನೊಂದು ಎಂಟು ಮಂದಿ ಗಣ್ಯರ ಕೊರತೆಯಾಯಿತಲ್ಲ! ಈ ಬಾರಿಯ ರಾಜ್ಯೋತ್ಸವನ್ನು ವಿಜಯೋತ್ಸವವನ್ನಾಗಿ ಆಚರಿಸುತ್ತೇವೆ ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅಂತೆಯೇ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಯನ್ನು ಕಮಲೋತ್ಸವ ಪ್ರಶಸ್ತಿ ಎಂದೂ ಕರೆಯಬಹುದೇನೋ?!. ಬಹಳ ನಿಯತ್ತಿನ ಪಕ್ಷ ಭಾಜಪ. ತನ್ನ ಸರಕಾರ ಇರುವಾಗ ತನ್ನ ಬೆಂಬಲಿಗರ ಋಣವನ್ನು ಸರಕಾರಿ ಖರ್ಚಿನಲ್ಲಿ ತೀರಿಸುವ ಪ್ರಾಮಾಣಿಕತೆಯನ್ನು ಮೆರೆದಿದೆ.

ಶ್ರೀ

ಬರೀ ಗಣ್ಯರಿಗೆ ಮಾತ್ರ ಪ್ರಶಸ್ತಿ ಕೊಟ್ಟು, 'ಗಣಿಯವರಿಗೆ' ಏನೂ ಕೊಟ್ಟಿಲ್ಲವಲ್ಲ? ಅಂದಹಾಗೆ ರಾಜಕೀಯ ಕ್ಷೇತ್ರದಲ್ಲಿ ಯಾರೂ ಗಣ್ಯರಿಲ್ಲವೇ? ರಾಜಕೀಯ ಕ್ಷೇತ್ರಕ್ಕೆ ಯಾಕೆ ಪ್ರಶಸ್ತಿ ಇಲ್ಲ? ಆಪರೇಷನ್ ಮಾಡಿದವರಿಗೆ ಕೊಡಬೇಕೋ? ಆಪರೇಷನ್ ಮಾಡಿಸಿ ಕೊಂಡವರಿಗೆ ಕೊಡಬೇಕೋ? ಗೊಂದಲವಾಗಿರ ಬೇಕು. ಮುಂದಿನಬಾರಿ ಕಮಲೋತ್ಸವ ಪ್ರಶಸ್ತಿಯ ಹಾಗೆ, ರಾಜ್ಯೋತ್ಸವ ಕೇಸರಿ ಪ್ರಶಸ್ತಿ, ರಾಜ್ಯೋತ್ಸವ ಗಣಿ ಪ್ರಶಸ್ತಿ ಮುಂತಾದುವುಗಳನ್ನೂ ಕೊಡಮಾಡಬಹುದು.

ನಮ್ಮ ಘನ(ಂದಾರೀ) ಸರಕಾರವು ಭಾರತ ರತ್ನ ಪ್ರಶಸ್ತಿಗೆ ಹೆಸರುಗಳನ್ನು ಶಿಫಾರಸ್ಸು ಮಾಡಿ ಕಳುಹಿಸಿದೆ. ಸರ್ವಸಂಗ ಪರಿತ್ಯಾಗಿಗಳಾದ ಇಷ್ಟೊಂದು ಮಂದಿ ಸ್ವಾಮೀಜಿಗಳು ನಮ್ಮ ನಾಡಿನಲ್ಲಿರುವಾಗ ಒಬ್ಬರು ಸ್ವಾಮೀಜಿಯ ಹೆಸರನ್ನು ಮಾತ್ರ ಶಿಫಾರಸ್ಸು ಮಾಡಿರುವುದು ಅವರಿಗೆಲ್ಲ ಶಾನೆ ಬೇಸರವಾಗಿರಬಹುದು.

ಬೇಕಾದುದನ್ನು ಹುಡುಕಿಕೊಡುವ ಸಂಶೋಧಕರಿಗೂ, ಬೇಕಾದ್ದನ್ನು ಬೇಕಾದ ಭಿತ್ತಿಯಲ್ಲಿ ಬರೆದುಕೊಡುವ ಸಾಹಿತಿಗಳಿಗೂ, ಇತ್ತ ರಾಜ್ಯದಲ್ಲೂ ಯಾವ ಪ್ರಶಸ್ತಿಯನ್ನೂ ನೀಡದೆ, ಅತ್ತ ಕೇಂದ್ರಕ್ಕೆ ಯಾವುದಾದರೂ ಛದ್ಮ ಅಲ್ಲ ಸಾರಿ, ಪದ್ಮ ಪ್ರಶಸ್ತಿಗಾದರೂ ಶಿಫಾರಸ್ಸು ಮಾಡದೆ, ಅವರಿಗೆ ಯಾವ 'ಸ್ಥಾನ ಮಾನಾ'ನೂ ಕೊಡದೆ, ಅವರಿಗೆ ಹೀಗೆ ಅನ್ಯಾಯ ಮಾಡಬಹುದೇ?.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ

ಅದೇ ಬಡತನ, ನಿರುದ್ಯೋಗ, ಆರೋಗ್ಯ ಸೇವೆಗಳ ಕೊರತೆ, ಕುಡಿಯುವ ನೀರಿನ ಗಂಭೀರ ಸಮಸ್ಯೆ, ವಸತಿ ಮತ್ತಿತರ ಮೂಲಭೂತ ಸಮಸ್ಯೆಗಳು ಕ್ಷೇತ್ರದ ಜನತೆಯನ್ನು ಪ್ರತಿನಿತ್ಯ ಕಾಡುತ್ತಿವೆ. ಈ ಎಲ್ಲ ಸಮಸ್ಯೆಗಳನ್ನು ಸಾಮಾನ್ಯ ಜನತೆಗೆ ಮನದಟ್ಟು ಮಾಡಿಕೊಡಲು ಮತ್ತು ಅವರಲ್ಲಿ ಜಾಗೃತಿ ಮೂಡಿಸಿ, ಬಲಿಷ್ಠ ರಾಜಕೀಯ, ಸಾಮಾಜಿಕ ಹೋರಾಟಕ್ಕೆ ಅಣಿನೆರೆಸುವ ಉದ್ದೇಶದಿಂದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಜಿಲ್ಲಾ ಸಮಿತಿಗಳು ಒಂದು ವಾರ ಕಾಲ ಜನಜಾಗೃತಿ ಜಾಥಾ ಸಂಘಟಿಸಿತ್ತು.

ಜ್ವಲಂತ ಸಮಸ್ಯೆಗಳತ್ತ ನೋಟ ಹರಿಸಿದ ಜಾಥಾ

ಚಿಕ್ಕಬಳ್ಳಾಪುರ ಲೋಕಸಭೆ ಕ್ಷೇತ್ರ ಜಗತ್ತಿನ ಐಟಿ ರಾಜಧಾನಿ ಬೆಂಗಳೂರಿಗೆ ಆತುಕೊಂಡಿದ್ದರೂ ರಾಜ್ಯದ ಇತರ ಕೆಲವು ಕ್ಷೇತ್ರಗಳಂತೆ ಭಾರಿ ಹಿಂದುಳಿದಿದೆ. ರಾಷ್ಟ್ರೀಯ ಹೆದ್ದಾರಿ ಏಳು ಮತ್ತು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಈ ಕ್ಷೇತ್ರದ ವ್ಯಾಪ್ತಿಯಲ್ಲಿದ್ದು ಅಭಿವೃದ್ಧಿ ಮಾತ್ರ ಇವೆರಡಕ್ಕೇ ಸೀಮಿತವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ನೂತನವಾಗಿ ರಚಿತವಾಗಿರುವ ಚಿಕ್ಕಬಳ್ಳಾಪುರ ಲೋಕಸಭೆ ಕ್ಷೇತ್ರದಿಂದ ಮಧುಗಿರಿ, ಕೊರಟಗೆರೆ ಮತ್ತು ಶಿಡ್ಲಘಟ್ಟ ಕ್ಷೇತ್ರಗಳು ಹೊರಗುಳಿದಿವೆ. ಹೊಸದಾಗಿ ದೇವನಹಳ್ಳಿ, ಹೊಸಕೋಟೆ, ಯಲಹಂಕ ಸೇರ್ಪಡೆಯಾಗಿವೆ. ಆದರೂ ಕ್ಷೇತ್ರದಲ್ಲಿನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಅದೇ ಬಡತನ, ನಿರುದ್ಯೋಗ, ಆರೋಗ್ಯ ಸೇವೆಗಳ ಕೊರತೆ, ಕುಡಿಯುವ ನೀರಿನ ಗಂಭೀರ ಸಮಸ್ಯೆ, ವಸತಿ ಮತ್ತಿತರ ಮೂಲಭೂತ ಸಮಸ್ಯೆಗಳು ಕ್ಷೇತ್ರದ ಜನತೆಯನ್ನು ಪ್ರತಿನಿತ್ಯ ಕಾಡುತ್ತಿವೆ.

ಈ ಎಲ್ಲ ಸಮಸ್ಯೆಗಳನ್ನು ಸಾಮಾನ್ಯ ಜನತೆಗೆ ಮನದಟ್ಟು ಮಾಡಿಕೊಡಲು ಮತ್ತು ಅವರಲ್ಲಿ ಜಾಗೃತಿ ಮೂಡಿಸಿ, ಬಲಿಷ್ಠ ರಾಜಕೀಯ, ಸಾಮಾಜಿಕ ಹೋರಾಟಕ್ಕೆ ಅಣಿನೆರೆಸುವ ಉದ್ದೇಶದಿಂದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಜಿಲ್ಲಾ ಸಮಿತಿಗಳು ಒಂದು ವಾರ ಕಾಲ ಜನಜಾಗೃತಿ ಜಾಥಾ ಸಂಘಟಿಸಿತ್ತು.

ಎಲ್ಲ ಜನತೆಗೆ ಶುದ್ಧವಾದ ಕುಡಿವ ನೀರು ಒದಗಿಸಬೇಕು, ಶಾಶ್ವತ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಬೇಕು, ಅಸಂಘಟಿತ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕೆಂಬ ಅತಿ ಮುಖ್ಯ ಬೇಡಿಕೆಗಳ ಆಧಾರದಲ್ಲಿ ಜಾಥಾ ಒಂದೆಡೆಯಿಂದ ಮತ್ತೊಂದೆಡೆಗೆ ಮುನ್ನಡೆಯಿತು.

ಅಕ್ಟೋಬರ್ 12ರಂದು ಹೊಸಕೋಟೆಯಲ್ಲಿ ಬಾಗೇಪಲ್ಲಿ ಮಾಜಿ ಶಾಸಕರು ಹಾಗೂ ಸಿಪಿಎಂ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಕಾಮ್ರೇಡ್ ಜಿ.ವಿ. ಶ್ರೀರಾಮರೆಡ್ಡಿಯವರು ಜಾಥಾ ಉದ್ಘಾಟಿಸಿದರು.

ಎಡಪಕ್ಷಗಳು ಪಟ್ಟು ಹಿಡಿದಿದ್ದರಿಂದ ಕೇಂದ್ರದ ಯುಪಿಎ ಸರ್ಕಾರ ಜಾರಿಗೆ ತಂದಿರುವ ನರೇಗಾ ಯೋಜನೆಯಲ್ಲಿ ಸದ್ಯ ಪ್ರತಿದಿನ 84 ರೂ. ಕೂಲಿ ನಿಗದಿಪಡಿಸಲಾಗಿದೆ. ಅಧಿಕ ಪ್ರಮಾಣದ ಹಣದುಬ್ಬರ ಮತ್ತು ವಿಪರೀತವಾಗಿ ಬೆಲೆ ಏರಿಕೆ ಕಂಡಿರುವ ಪ್ರಸಕ್ತ ಸಂದರ್ಭದಲ್ಲಿ ಈ ಪ್ರಮಾಣದ ಕೂಲಿ ಏನೇನೂ ಸಾಲದಾಗಿದೆ. ಹಾಗಾಗಿ ಕೂಲಿಯನ್ನು 150 ರೂ.ಗೆ ಹೆಚ್ಚಿಸಬೇಕೆಂದು ಶ್ರೀರಾಮರೆಡ್ಡಿ ಒತ್ತಾಯಿಸಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸ್ವಾರ್ಥ ರಾಜಕಾರಣದಲ್ಲಿ ಮುಳುಗಿದ್ದು ರಾಜ್ಯದ ಅಭಿವೃದ್ಧಿಯನ್ನು ನಿರ್ಲಕ್ಷಿಸಿವೆ ಎಂದು ಕಟುವಾಗಿ ಟೀಕಿಸಿದರು. ಬಿಜೆಪಿ ನೇತೃತ್ವದ ರಾಜ್ಯಸರ್ಕಾರ ಅಧಿಕಾರ ಉಳಿಸಿಕೊಳ್ಳಲು ಅನ್ಯ ಪಕ್ಷಗಳ ಶಾಸಕರನ್ನು ಖರೀದಿಸುವಂತಹ ಕೀಳು ಮಟ್ಟದ ರಾಜಕಾರಣಕ್ಕೆ ಇಳಿದಿದ್ದು, ದೇಶದ ಪ್ರಜಾಪ್ರಭುತ್ವ ತಲೆತಗ್ಗಿಸುವಂತೆ ಮಾಡಿದೆ ಎಂದರು.

1996ರಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಜನತಾದಳ ಅಭ್ಯರ್ಥಿಯಾಗಿ ಆರ್.ಎಲ್. ಜಾಲಪ್ಪ ಜಯಗಳಿಸಿದ್ದ ಅವಧಿ ಹೊರತುಪಡಿಸಿದರೆ, 1952ರಿಂದಲೂ ನಿರಂತರವಾಗಿ ಕಾಂಗ್ರೆಸ್ ಪಕ್ಷ ಈ ಕ್ಷೇತ್ರವನ್ನು ಪ್ರತಿನಿಧಿಸಿದೆ. ಕೆಪಿಸಿಸಿ ಅಧ್ಯಕ್ಷರೂ ಆಗಿದ್ದ, ಕೂದಲೆಳೆ ಅಂತರದಲ್ಲಿ ಮುಖ್ಯಮಂತ್ರಿಯಾಗುವುದನ್ನು ತಪ್ಪಿಸಿಕೊಂಡ ವಿ.ಕೃಷ್ಣರಾವ್ ಹಲವಾರು ಬಾರಿ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದಾರೆ. ಆದರೆ ಅಭಿವೃದ್ಧಿ ಮಾತ್ರ ಶೂನ್ಯ. ಕಾಂಗ್ರೆಸ್ ಪಕ್ಷದ ದೀರ್ಘಾವಧಿ ಆಡಳಿತಾವಧಿಯಲ್ಲಿ ಕನಿಷ್ಠ ಪಕ್ಷ ಕುಡಿಯುವ ನೀರನ್ನು ಒದಗಿಸುವಲ್ಲಿ ವಿಫಲವಾಗಿದೆ ಎಂದು ಶ್ರೀರಾಮರೆಡ್ಡಿ ಟೀಕಿಸಿದರು. ವಿ.ಕೃಷ್ಣರಾವ್ ಅವರ ಸ್ವಂತ ಗ್ರಾಮ



ಗೌರಿಬಿದನೂರಿನ ನಕ್ಕಲಹಳ್ಳಿಗೆ ಶ್ರೀರಾಮರೆಡ್ಡಿ ಶಾಸಕರಾಗಿದ್ದಾಗ ಕೊಳವೆ ಬಾವಿ ಹಾಕಿಸುವವರೆಗೂ ಗ್ರಾಮಸ್ಥರು ಕುಡಿವ ನೀರಿಗೆ ತತ್ತರಿಸುತ್ತಿದ್ದರು ಎಂಬುದು ವಾಸ್ತವ ಸಂಗತಿ.

ಕ್ಷೇತ್ರದಲ್ಲಿ ಸರಿಸುಮಾರು ನಾಲ್ಕು ಲಕ್ಷದವರೆಗೂ ಅಸಂಘಟಿತ ಕಾರ್ಮಿಕರಿದ್ದಾರೆ. ಅಂಗನವಾಡಿ, ಗ್ರಾಮಪಂಚಾಯಿತಿ, ಅಕ್ಷರ ದಾಸೋಹ ಯೋಜನೆಗಳಲ್ಲಿ ಸೇವೆ ಸಲ್ಲಿಸುವ ನೌಕರರೂ ಅಸಂಘಟಿತ ಕ್ಷೇತ್ರಕ್ಕೆ ಸೇರ್ಪಡೆಯಾಗಲಿದ್ದು ಅವರಿಗೆ ಯಾವುದೇ ಸೇವಾ ಭದ್ರತೆ, ಮೂಲಸೌಲಭ್ಯಗಳಿಲ್ಲದೆ ಅವರ ಬದುಕು ನಡುನೀರಿನಲ್ಲಿ ಹತೋಟಿ ಕಳೆದುಕೊಂಡ ದೋಣಿಯಂತಾಗಿದೆ.

ಮತ್ತೊಂದೆಡೆ ಕೃಷಿ ಕೂಲಿ ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು, ಬೀಡಿ ಕಾರ್ಮಿಕರು, ಹಮಾಲಿಗಳು, ನೇಯ್ಗೆಯವರು ಅಪಾರ ಪ್ರಮಾಣದಲ್ಲಿದ್ದು ಅವರ ಪರಿಸ್ಥಿತಿ "ಚಿರುವ ನಿಂಡಿತೆ ನಂಗಲಿ ಲೇಕಪೋತೆ ಎಂಗಲಿ (ಕೆರೆ ತುಂಬಿದರೆ ನಂಗಲಿ ಇಲ್ಲದಿದ್ದರೆ ಎಂಜಲು)" ಎನ್ನುವಂತಾಗಿದೆ.

ಪ್ರಸ್ತುತ ಸಂಸದರಾಗಿರುವ ಜಾಲಪ್ಪರವರು ಸ್ವಹಿತಾಸಕ್ತಿಯ ರಾಜಕಾರಣ ಮಾಡಿಕೊಂಡು ಕ್ಷೇತ್ರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಚುನಾವಣೆ ಬಂತೆಂದರೆ ಯಥೇಚ್ಛವಾಗಿ ಹಣ ಚೆಲ್ಲಿ ಗೆದ್ದು ಹೊರಟರೆ ಮತ್ತೆ ಕಾಣಿಸಿಕೊಳ್ಳುವುದು ಮತ್ತೊಂದು ಚುನಾವಣೆಗೆ. ಸಂಸದರ ಪ್ರದೇಶಾಭಿವೃದ್ಧಿ ನಿಧಿ ಅವರ ಚೇಲಾಗಳ ಹೊಟ್ಟೆ ಪಾಡಿನ ನಿಧಿಯಾಗಿದೆ ಎಂಬುದು ಕಣ್ಣಿಗೆ ರಾಚುವ ನಗ್ನ ಸತ್ಯವಾಗಿದೆ. ಚಿಕ್ಕಬಳ್ಳಾಪುರಕ್ಕೆ ಕುಡಿವ ನೀರಿನ ಆಶ್ರಯವಾಗಿರುವ ಜಕ್ಕಲ ಮಡುಗು ಜಲಾಶಯದಿಂದ ದೊಡ್ಡಬಳ್ಳಾಪುರಕ್ಕೂ ನೀರು ಒದಗಿಸಬೇಕೆಂದು ಒತ್ತಾಯಿಸುವ ಮೂಲಕ ಕುಡಿವ ನೀರಿಗೆ ರಾಜಕೀಯ ವಿವಾದವನ್ನು ಬೆರೆಸಿದ ಕೀರ್ತಿ ಜಾಲಪ್ಪನವರಿಗೆ ಸಲ್ಲಬೇಕು.

ಅಪ್ಪು

ಗೌರಿಬಿದನೂರಿನಿಂದ ಯಥೇಚ್ಛವಾಗಿ ಮರಳು ಕಳ್ಳಸಾಗಣೆ ನಡೆಯುತ್ತಿದೆ. ಇದರಿಂದ ಅಲ್ಲಿನ ಅಂತರಜಲಕ್ಕೆ ತೀವ್ರ ಧಕ್ಕೆಯಾಗಿದೆ. ಗೌರಿಬಿದನೂರಿನ ಪ್ರಮುಖ ರಾಜಕಾರಣಿಗಳು ಕ್ಷುಲ್ಲಕ ಕುಟುಂಬ ರಾಜಕಾರಣದಲ್ಲಿ ತೊಡಗಿದ್ದು ಮರಳು ಕಳ್ಳಸಾಗಾಣಿಕೆಯನ್ನು ನಿಷೇಧಿಸುವ ಗೋಜಿಗೆ ಹೋಗಿಲ್ಲ. ಇದಕ್ಕಿಂತ ಹೆಚ್ಚಾಗಿ ಹೇಳಬೇಕೆಂದರೆ ಮರಳು ದಂಧೆಯ ಹಿಂದಿನ ರೂವಾರಿಗಳು ಇವರೇ.

ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಚಿಂತಾಮಣಿ, ಗುಡಿಬಂಡೆ, ಗೌರಿಬಿದನೂರು ತಾಲೂಕುಗಳಲ್ಲಿನ ಜನತೆ ಕುಡಿಯುತ್ತಿರುವುದು ವಿಷಯುಕ್ತ ನೀರಾಗಿದೆ. ಸಾವಿರಾರು ಮಂದಿ ಇಂದು ಅಂಗವೈಕಲ್ಯಗಳಿಗೆ ತುತ್ತಾಗಿದ್ದಾರೆ. ಕೊಳವೆ ಬಾವಿಗಳಿಂದ ಭೂಮಿ ಆಳದಿಂದ ತೆಗೆಯುವ ಕುಡಿಯುವ ನೀರಿನಲ್ಲಿ ಮಿತಿಗಿಂತಲೂ ಹೆಚ್ಚು ಫ್ಲೋರೈಡ್ ಅಂಶ ಇರುವುದು ಅಲ್ಲಿನ ಜನತೆಯ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಹಿರಿಯರು, ಮಹಿಳೆಯರು ಮತ್ತು ಮಕ್ಕಳಲ್ಲಿ ಮೂಳೆ ಕ್ಯಾನ್ಸರ್‌ಗೆ ಇದು ಕಾರಣವಾಗಿದೆ. ಈಗಾಗಲೇ ಸಾವಿರಾರು ಮಂದಿ ಈ ರೋಗಕ್ಕೆ ತುತ್ತಾಗಿದ್ದಾರೆ.

ಮತ್ತೊಂದೆಡೆ ಅವಿಭಜಿತ ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಕೃಷಿ ಸಂಪೂರ್ಣವಾಗಿ ಮಳೆ ಆಧರಿತ ಇಲ್ಲವೆ ಅಂತರ ಜಲದ ಮೇಲೆ ಅವಲಂಬಿಸಿದೆ. ಯಾವುದೇ ಶಾಶ್ವತ ನೀರಾವರಿ ಯೋಜನೆಗಳಿಲ್ಲ. ಇತ್ತೀಚಿನ ವರ್ಷಗಳಲ್ಲಿ ಕೃಷಿಯಲ್ಲಿ ತೊಡಗಿಸುವ ಬಂಡವಾಳ ಸಹ ಅಪಾರ ಪ್ರಮಾಣದಲ್ಲಿ ಹೆಚ್ಚಿರುವುದರಿಂದ ರೈತರು ಕೃಷಿಯನ್ನೇ ಬಿಡುವಂತಹ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಕೃಷಿಯಿಂದ ಬದುಕಲು ಸಾಧ್ಯವಿಲ್ಲ ಎನ್ನುವ ತೀರ್ಮಾನಕ್ಕೆ ಬಂದಿರುವ ದೊಡ್ಡಬಳ್ಳಾಪುರ, ದೇವನಹಳ್ಳಿ, ಯಲಹಂಕ, ಹೊಸಕೋಟೆ ತಾಲೂಕುಗಳಲ್ಲಿನ ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಬಹುರಾಷ್ಟ್ರೀಯ ಕಂಪನಿಗಳಿಗೆ ಭೂಮಿ ಮಾರಾಟ ಮಾಡಿ ಕೆಲವು ವರ್ಷಗಳ ನಂತರ ಅವರ ಬಳಿಯೇ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುವಂತಹ ಪರಿಸ್ಥಿತಿಗೆ ದೂಡಲ್ಪಡುತ್ತಿದ್ದಾರೆ. ಇಂತಹ ಹಲವಾರು ಸಮಸ್ಯೆಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡಿರುವ ಚಿಕ್ಕಬಳ್ಳಾಪುರ ಲೋಕಸಭೆ ಕ್ಷೇತ್ರ ರಾಜಕೀಯ ಸಂಕಲ್ಪ ಹೊಂದಿರುವ ರಾಜಕಾರಣಿಗಳು ಮತ್ತು ಪಕ್ಷಗಳಿಗಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದೆ. ಈ ಎಲ್ಲ ಸಮಸ್ಯೆಗಳನ್ನು ಆಧರಿಸಿ ಸಿಪಿಎಂ ಪಕ್ಷ ಜನ ಜಾಗೃತಿ ಜಾಥಾವನ್ನು ಸಂಘಟಿಸಿದೆ.

ಅವಿಭಜಿತ ಕೋಲಾರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕೃಷಿ ಮತ್ತು ಕುಡಿಯಲು ನೇತ್ರಾವತಿ ಮತ್ತು ಕೃಷ್ಣ ನದಿಯಲ್ಲಿನ ತಮ್ಮ ಪಾಲನ್ನು ಹರಿಸಬೇಕೆಂದು, ಪರಮಶಿವಯ್ಯ ಅವರ ವರದಿಯನ್ನು ಅನುಷ್ಠಾನಗೊಳಿಸಬೇಕೆಂದು ಶ್ರೀರಾಮರೆಡ್ಡಿ ನೇತೃತ್ವದಲ್ಲಿ ಶಾಶ್ವತ ನೀರಾವರಿ ಹೋರಾಟಗಳನ್ನು ಮುನ್ನಡೆಸಲಾಗುತ್ತಿದೆ. ಇದರ ಭಾಗವಾಗಿ 2003ರಲ್ಲಿ ಬೆಂಗಳೂರಿಗೆ ಸುಮಾರು 15 ಸಾವಿರ ಮಂದಿಯ ಐತಿಹಾಸಿಕ ಕಾಲ್ನಡಿಗೆ ಜಾಥಾವನ್ನು ಸಂಘಟಿಸಲಾಗಿತ್ತು.


ಕ್ಷೇತ್ರದ ಬಹುತೇಕ ಮಂದಿಗೆ ಇಂದಿಗೂ ಸ್ವಂತ ಮನೆಗಳಿಲ್ಲ. ಲಕ್ಷಾಂತರ ಮಂದಿ ಹುಲ್ಲಿನ ಮನೆಗಳಲ್ಲಿ ವಾಸವಾಗಿದ್ದಾರೆ. ಅವರಿಗೆಲ್ಲ ನಿವೇಶನ ಮತ್ತು ಮನೆಗಳನ್ನು ಒದಗಿಸಬೇಕೆಂದು ಜಾಥಾದಲ್ಲಿ ಒತ್ತಾಯಿಸಲಾಯಿತು. ಹೊಸಕೋಟೆಯಿಂದ ಆರಂಭವಾದ ಜಾಥಾ ಸೂಲಿಬೆಲೆ, ದೇವನಹಳ್ಳಿ ಮುಖಾಂತರ ಸಂಚರಿಸಿತು. ದೇವನ ಹಳ್ಳಿಯಲ್ಲಿ ಬೀದಿ ಬದಿ ಸಭೆ ನಡೆಸಲಾಯಿತು. ಯಲಹಂಕದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ನೆಲಮಂಗಲ ಮತ್ತು ಡಾಬಸ್‌ಪೇಟೆಗಳಲ್ಲಿ ಸಂಚರಿಸಿದ ಜಾಥಾ ಗೌರಿಬಿದನೂರು, ಗುಡಿಬಂಡೆ, ಬಾಗೇಪಲ್ಲಿಗಳಲ್ಲಿ ಬೃಹತ್ ಬಹಿರಂಗಸಭೆಗಳನ್ನು ಏರ್ಪಡಿಸಲಾಗಿತ್ತು. ಅಕ್ಟೋಬರ್ 18ರಂದು ಚಿಕ್ಕಬಳ್ಳಾಪುರದಲ್ಲಿ ಸಮಾರೋಪಗೊಂಡಿತು. ಅಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ವಿಜೆಕೆ. ನಾಯರ್, ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ಜಿ.ವಿ. ಶ್ರೀರಾಮರೆಡ್ಡಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಮ್ರೇಡ್ ಪ್ರಸನ್ನ ಮತ್ತಿತರರು ಮಾತನಾಡಿದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಪ್ರಕಾಶ್, ಕೆ.ಎನ್. ಉಮೇಶ್, ಚಂದ್ರಶೇಖರ ಮತ್ತಿತರ ಮುಖಂಡರು ಜಾಥಾ ನೇತೃತ್ವ ವಹಿಸಿದ್ದರು.

ಜನಶಕ್ತಿ ಕನ್ನಡ ವಾರಪತ್ರಿಕೆ
ನವೆಂಬರ್ 09, 2008

ಕೋಮು ಸೌಹಾರ್ದತೆಯತ್ತ ಸಮುದಾಯದ ಚಿತ್ತ

ಡಾ. ಕೆ. ಲಿಖಿಗಪ್ಪ

ಕರ್ನಾಟಕ ರಾಜಕೀಯ ಇತಿಹಾಸದ ಕಾಲಘಟ್ಟದಲ್ಲಿ ಹಿಂದೆಂದೂ ನೆಲೆ ಕಂಡರಿಯದ ಭಾರತೀಯ ಜನತಾ ಪಕ್ಷ ಈಗ ಅಧಿಕಾರದ ಗದ್ದುಗೆ ಹಿಡಿದಿದೆ. ಇದರ ಅಧಿಕಾರದ ಸಾರಥ್ಯದಡಿಯಲ್ಲಿ ರೈತರು ಕ್ರಿಮಿಗಳಂತೆ ಸಾಯುತ್ತಿದ್ದರೂ/ ಸಾಯಿಸಲ್ಪಡುತ್ತಿದ್ದರೂ (ಹಾವೇರಿ ಗೋಲಿಬಾರ್), ಪ್ರಸಕ್ತ ದಿನಗಳಲ್ಲಿ ಕೋಮುಶಕ್ತಿಗಳು ಕೊಬ್ಬುತ್ತಿರುರುವುದು ತೀರ ದುರಂತದ ಸಂಗತಿಯಾಗಿದೆ. ಗುಜರಾತಿನ ಉದ್ದಗಲಕ್ಕೂ ನಡೆಸಿದ ಕೋಮು ದುರ್ದಾಳಿಯ ಬೀಕರ ಹತ್ಯಾಕಾಂಡದ ಹುಣ್ಣು ಇನ್ನೂ ಹಸಿಯಾಗಿರುವಾಗಲೇ, ಕರ್ನಾಟಕದ ಜನತೆಯನ್ನು ತನ್ನ ದುಷ್ಟ ಮನೋಧರ್ಮದ ಸಾಂಕ್ರಾಮಿಕ ರೋಗಕ್ಕೆ ತುತ್ತಾಗುವಂತೆ ಮಾಡಿ ಚರ್ಚ್‌ಗಳ ಮೇಲೆ ದಾಳಿಯಿಡಿಸುವ ಮೂಲಕ ಕೋಮು ಸೌಹಾರ್ದತೆಯನ್ನು ಕದಡಿದೆ. ಜನರ ನಿರೀಕ್ಷೆಗಳನ್ನು ಗೋರಿ ಕಲ್ಲುಗಳ ಮೇಲೆ ಕೆತ್ತಲಾಗುತ್ತಿದೆ. ಒಮ್ಮೆ ವ್ಯಕ್ತವಾಗಿ, ಇನ್ನೊಮ್ಮೆ ಅವ್ಯಕ್ತವಾಗಿ, ಪ್ರತ್ಯಕ್ಷವೂ, ಪರೋಕ್ಷವೋ ಒಟ್ಟಿನಲ್ಲಿ ಹಿಂದೆಂದೂ ಕಂಡರಿಯದಂಥ ವಿಧ್ವಂಸಕ ಕೃತ್ಯಗಳನ್ನು ಮತ್ತು ಜೀವವಿರೋಧಿ ಅಜೆಂಡಾಗಳನ್ನು ಮೇಲಿಂದ ಮೇಲೆ ಜಾರಿಮಾಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕೋಮುವಾದಿ ಗಳನ್ನು ಹಿಮ್ಮೆಟ್ಟಿಸಲು ಮತ್ತು ದ್ವೇಷ ಸಂಸ್ಕೃತಿಯನ್ನು ನಿರ್ನಾಮ ಮಾಡಲು ಜನಪರ ಕಾಳಜಿಯುಳ್ಳವರು ಮತ್ತು ಬುದ್ಧಿ ಜೀವಿಗಳು ಸನ್ನದ್ಧರಾಗಿ ಮಾನವೀಯತೆ ಮೆರೆಯ ಬೇಕಾಗಿದೆ. ಅಲ್ಲದೆ ಜನಮಾನಸದಲ್ಲಿ ಅಂತರ್ಗತಗೊಳಿಸುತ್ತಿರುವ ಅಮಾನವೀಯತೆಯನ್ನು ಒದ್ದೋಡಿಸಿ ಜನತೆ ಕಳೆದುಕೊಂಡ ವಿವೇಚನೆ, ಶಾಂತಿ, ಸೌಹಾರ್ದತೆ ಹಾಗೂ ಸಂವೇದನಾಶೀಲತೆಯನ್ನು ಜನರ ಮನದಲ್ಲಿ ಗಟ್ಟಿಯಾಗಿ ಪ್ರತಿಷ್ಠಾಪಿಸಬೇಕಾಗಿದೆ. ಅಧೋಮುಖಿ ಚಿತ್ರಣವನ್ನು ಬಹಳ ಮನೋಜ್ಞವಾಗಿ ಬಿಂಬಿಸುತ್ತಾ ಅದರ ಓರೆ-ಕೋರೆಗಳನ್ನು ತಿದ್ದುವ, ಜನಪರ ಜೀವಪರ ದುಡಿಯುವ ಹಾಗೂ ಸಮಾಜದ ಶ್ರೇಯೋಭಿವೃದ್ಧಿಯಲ್ಲಿ ಕಳೆದ ಮೂರು ದಶಕಗಳಿಂದಲೂ ನಿರಂತರವಾಗಿ ತನ್ನ ಅಮೂಲ್ಯವಾದ ಸೇವೆಯನ್ನು ಧಾರೆಯೆರೆಯುತ್ತಾ ಬಂದಿದೆ.



ಪ್ರಸಕ್ತ ಜ್ವಲಂತ ಸಮಸ್ಯೆ ಗಳಲ್ಲೊಂದಾದ ಕೋಮು ಗಲಭೆ ಗಂಭೀರವಾದುದಾಗಿದೆ. ಈ ದಿಶೆಯಲ್ಲಿ ಸಮುದಾಯ ಕಲಬುರ್ಗಿಯು, ಮುಗ್ದ ಮುಸ್ಲಿಂ ಜನತೆಯನ್ನು ಸಮಾಜದಲ್ಲಿ ಯಾವ ತರ ತಿರುಚಿ ವಿಕೃತವಾಗಿ ಬಿಂಬಿಸಲಾಗಿದೆ ಎಂದು ಜನರಲ್ಲಿ ಜಾಗೃತಿ ಮೂಡಿಸುವ ಹಾಗೂ ಸಮಾಜದ ಗಮನ ಸೆಳೆಯುವ ಪ್ರಯುಕ್ತವಾಗಿ ಎಚ್.ಎಸ್.ಶಿವಪ್ರಕಾಶ್ ರವರ 'ಸುಲ್ತಾನ ಟಿಪ್ಪು' ಎಂಬ ನಾಟಕವನ್ನು ಕೈಗೆತ್ತಿಕೊಂಡು ಒಂದು ತಿಂಗಳ ಕಾಲ ಕಲಾವಿದರಿಗೆ ತರಬೇತಿ ನೀಡುತ್ತಿರುವುದು ಶ್ಲಾಘನೀಯವಾಗಿ ಈ ಭಾಗದ ಸಮುದಾಯದ ಸಂಸ್ಥೆಗಳಿಗೆ ಇದು ಪ್ರೇರಣೆ ಮತ್ತು ಮಾದರಿಯಾಗಿದೆ. ಒಂದು ತಿಂಗಳ ಕಾಲಾವಧಿಯ ತರಬೇತಿಯಲ್ಲಿ ಸುಮಾರು 30 ವಿದ್ಯಾರ್ಥಿಗಳು ಕಲಾವಿದರಾಗಿ ಭಾಗವಹಿಸುತ್ತಿದ್ದಾರೆ. ತರಬೇತಿಯಲ್ಲಿ ವಿದ್ಯಾರ್ಥಿಗಳಿಗೆ ಸಮುದಾಯದ ಧ್ಯೇಯ, ಧೋರಣೆ, ಆಂಗಿಕ ಅಭಿನಯ ರಂಗಭೂಮಿ ನಡೆದು ಬಂದ ದಾರಿ, ವೈಜ್ಞಾನಿಕ ಮನೋಭಾವನೆ, ರಸೋತ್ಪತ್ತಿ, ಕಾವ್ಯ ಮಿಮಾಂಸೆ, ಕಲೆ ಮತ್ತು ಸಾಮಾಜಿಕ ಚಳುವಳಿಯಲ್ಲಿ ವಚನ ಸಾಹಿತ್ಯ ಮತ್ತು ತತ್ವ ಪದಗಳ ಪಾತ್ರ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಪರಿಣಿತರಾದಂತಹ ನೀಲಾ.ಕೆ, ಶಂಕರಯ್ಯಾ ಘಂಟಿ, ಡಾ.ಪ್ರಭು ಖಾನಾಪುರೆ, ಪ್ರೊ.ಶ್ರೀಶೈಲ್ ಘೂಳಿ, ಡಾ.ಕಾಶೀನಾಥ ಅಂಬಲಗೆ, ಡಾ.ಅಮೃತ ಕಟಕೆ, ಪ್ರೊ.ಆರ್.ಕೆ.ಹುಡಗಿ, ಡಾ.ಮೀನಾಕ್ಷಿ ಬಾಳಿ, ಮಹಾಂತೇಶ್ ನವಲಕಲ್, ಪ್ರೊ.ಶಿವಶರಣ ಮುಳೆಗಾಂವ್, ಅಶೋಕ ಶೆಟಕಾರ, ಬಸವಪ್ರಭು, ಕೋದಂಡರಾಮಪ್ಪ, ನಾಗೇಂದ್ರಪ್ಪ ಅವರಾದಿ, ಸಂದೀಪ ಹಾಗೂ ಶರಣು ನಾಯಿಕೂಡೆ ಇವರಿಂದ ಹೇಳಿಕೊಡಲಾಗುತ್ತಿದೆ. ನಾಟಕದ ನಿರ್ದೇಶನವನ್ನು ರಂಗಾಯಣ, ಮೈಸೂರು ಹಾಗೂ ಧಾರವಾಡ ಘಟಕದಲ್ಲಿ ಸೇವೆ ಸಲ್ಲಿಸಿದ ವಾಸುದೇವ್ ಗಂಗೇರರವರು ವಹಿಸಿಕೊಂಡಿದ್ದಾರೆ. ○

'ಕೋಮುವಾದ ಒಂದು ಪಿಡುಗು - ಪ್ರಜಾಪ್ರಭುತ್ವ ಪವಿತ್ರ'

ಬೀದರ್ ಸಮುದಾಯ ದಿ: 16.10.2008ರಂದು ನಗರದ ಜನವಾಡ ರಸ್ತೆಯ ಅಂಬೇಡ್ಕರ್ ಭವನದಲ್ಲಿ 'ಕೋಮುವಾದ ಒಂದು ಪಿಡುಗು - ಪ್ರಜಾಪ್ರಭುತ್ವ ಪವಿತ್ರ' ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಅಲ್ಲಿ ಕೇಳಿಬಂದ ಕೆಲವು ವಿಚಾರ ಪೂರ್ಣ ಮಾತುಗಳು ಇಲ್ಲಿವೆ.

'ಬುದ್ಧ, ಬಸವ, ಪೈಗಂಬರ, ನಾನಕ, ಕ್ರಿಸ್ತ ಮುಂತಾದವರು ತಮ್ಮ ಪಂಥಗಳ ಮೂಲಕ ಮಾನವ ಸಮಾಜಕ್ಕೆ ಒಳಿತನ್ನೇ ಹೇಳಿದ್ದಾರೆ, ಆದರೆ ಮತೀಯವಾದಿಗಳು ಅವರ ಮೌಲ್ಯಗಳನ್ನು ತಪ್ಪಾಗಿ ಕಲ್ಪಿಸುತ್ತ ಸಮಾಜಕ್ಕೆ ಧಕ್ಕೆ ಉಂಟುಮಾಡುತ್ತ ಕತ್ತಲೆಯ ಕಡೆ ಯುವ ಸಮಾಜವನ್ನು ಒಯುತ್ತಿದ್ದಾರೆ, ಚರಿತ್ರಯ ಚಕ್ರವನ್ನು ಹಿಂದಕ್ಕೆ ತಿರುಗಿಸುತ್ತಿದ್ದಾರೆ ಎಂದು ಉದ್ಘಾಟಕರಾಗಿ ಆಗಮಿಸಿದ ಶ್ರೀಯುತರಾದ ಬಸವಶ್ರೀ ಬೆಲ್ದಾಳ ಶರಣರು ಅಭಿಪ್ರಾಯಪಟ್ಟರು.

ವ್ಯಕ್ತಿ ಯಾವುದೇ ಜಾತಿಯಲ್ಲಿ ಹುಟ್ಟಿರಲಿ, ಎಲ್ಲರಿಗೂ ಒಳ್ಳೆಯದನ್ನು ಬಯಸುವುದು ಅವನ ಧರ್ಮವಾಗಬೇಕು. ಕಾಯಕ ತತ್ವ, ಸಿದ್ಧಾಂತಗಳ ಮೂಲಕ ಅಕ್ಷರಸ್ತರು ವಿಚಾರವಂತರಾಗಿ, ಅನಕ್ಷರಸ್ತರನ್ನು ಸರಿದಾರಿಯ ಕಡೆಗೆ ಕೊಂಡೊಯ್ಯ ಬೇಕು. ಜಾತಿ ವ್ಯವಸ್ಥೆಗೆ ಇಂಬುಕೊಡುವ ಅಕ್ಷರಸ್ತರು ಏನು ಓದಿ ಯಾರಿಗೆ ಫಲ? ಎಂದು ಪ್ರಶ್ನಿಸಿದ ಅವರು ಓದಿನ ವೈಚಾರಿಕ ಪ್ರಜ್ಞೆ ಇಂದು ಯುವಜನರಲ್ಲಿ ಇಲ್ಲವಾಗಿ, ಅವೈಜ್ಞಾನಿಕ ನಿಲುವುಗಳಿಗೆ ಮಾರು ಹೋಗುತ್ತಿದ್ದಾರೆ ಎಂದು ಟೀಕಿಸಿದರು.

ಮುಂದುವರಿದು ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬನೂ ಬಾಳಿ ಬದುಕಲು ಸಮಾನ ಅವಕಾಶಗಳಿವೆ. ಇಂದು ಸಂವಿಧಾನದತ್ತ ಅಧಿಕಾರ; ಮತ, ಧರ್ಮಗಳನ್ನು ಸ್ವೀಕರಿಸುವ ಅಥವಾ ಧಿಕ್ಕರಿಸುವ ಅಧಿಕಾರ ಭಾರತೀಯ ಪ್ರತಿಯೊಬ್ಬ ಪ್ರಜೆಗೂ ಇದೆ. ಇದು ವಯಕ್ತಿಕ. ಆದರೆ ಮತಾಂತರ ವಿರೋಧಿಸುವ ಮತೀಯವಾದಿಗಳು ಜಾತೀಯತೆ ಮುಂದುವರಿಸುವ ಹುನ್ನಾರು ನಡೆಸುತ್ತಿದ್ದಾರೆ.

ಯಾವನು ನನ್ನ ಧರ್ಮವೇ ಶ್ರೇಷ್ಠ ಎನ್ನುವನೂ ಅವನು ಪ್ರತ್ಯೇಕತಾವಾದಿ ಎಂದೇ ತಿಳಿಯಬೇಕು. ಮಧುರಾದಲ್ಲಿ ಇತ್ತೀಚಿಗೆ ದಲಿತರ ಹೆಣ್ಣು ಮಗಳಿಂದ ಮೈಲಿಗೆಯಾಯಿತೆಂದು ಆಕೆಯನ್ನು ಎಣ್ಣೆಹಾಕಿ ಸುಟ್ಟಾಗ ಆರ್‌ಎಸ್‌ಎಸ್ ವಿಹೆಚ್‌ಪಿ ಸಂಘಟನೆಗಳು ಏನು ಮಾಡಿದವು? ಹೊಲೆಮಾದಿಗರನ್ನು ಮನುಷ್ಯರನ್ನಾಗಿ ನೋಡದ ಈ ಸಂಘಟನೆಗಳು ಈ ದೇಶಕ್ಕೊಂದು ಪಿಡುಗು, ಅದಕ್ಕಾಗೇ ಡಾ॥ ಬಾಬಾ ಸಾಹೇಬರು 'ಹುಟ್ಟುವಾಗ ಹಿಂದೂ ಆಗಿ ಹುಟ್ಟಿದರೂ ಸಾಯುವಾಗ ಹಿಂದೂ ಆಗಿ ಸಾಯಲಾರೆ' ಎಂದು ಹೇಳಿದರು. ಬೌದ್ಧ ಧರ್ಮ ಸ್ವೀಕರಿಸಿ ಭಾರತೀಯರಿಗೆ ಜಾತ್ಯಾತೀತ ಸಂವಿಧಾನ ರಚಿಸಿಕೊಟ್ಟರು. ಈ ಮನುವಾದಿ ಮಠಗಳು ಈ ದೇಶಕ್ಕೆ ಏನು ಕೊಟ್ಟಿದೆ ? ಎಂದು ಕೆಂಡಕಾರಿದರು.

ಶ್ರೇಷ್ಠ-ಕನಿಷ್ಠ

ಮುಖ್ಯ ಅತಿಥಿಗಳಾಗಿ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಬೀದರನ ಪ್ರೊ.



ಸಿದ್ರಾಮಪ್ಪ ಮಾಸಿಮೆಡರವರು, ಕೋಮುವಾದಿಗಳ ಈ ವಿಷಬೀಜ ಮನುಷ್ಯ ಮನುಷ್ಯನ ಮನಸ್ಸುಗಳ ಅಸಮಾನತೆಯ ಬಗ್ಗೆ ಹೇಳುವಂತಾದ್ದು. ನಾನು ಶ್ರೇಷ್ಠ ನೀನು ಕನಿಷ್ಠ ಎಂದು ಹೇಳುವಂತಾದ್ದು ಎಂದರು.

ಇಂಗ್ಲೀಷರು ನಮ್ಮನ್ನಾಳುವಾಗ ಇದೇ ಕೋಮುವಾದಿಗಳು ಅವರಿಗೆ ಜಮಖಾನೆ ಹಾಸಿ ಸ್ವಾಗತಿಸಿದರು, ತಮಗಾಗಿ ಇಂಗ್ಲೀಷರ ಹತ್ತಿರದವರಾದ ಇವರು ರೈತರ, ಕಾರ್ಮಿಕರ, ಕಾಯಕ ಜೀವಿಗಳ ಬದುಕಿನ ಮೌಲ್ಯಗಳನ್ನೇ ಗಾಳಿಗೆ ತೂರಿದ್ದರು ಎಂಬುದನ್ನು ಚರಿತ್ರೆ ಹೇಳುತ್ತದೆ. ಜನರನ್ನು ಒಡೆದು ತಮ್ಮ ರಕ್ಷಣೆಗೆ ಬಳಸುವ ಈ ಮತಾಂಧತೆ ಹೆಚ್ಚಿನ ದಿನ ಬದುಕಬಾರದು ಎಂದರು.

ಮನುಷ್ಯ ನಾನೆನ್ನುವ ಮೌಲ್ಯ ಮುಖ್ಯ

ಸಮಾರಂಭದ ಮತ್ತೊಬ್ಬ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಲಾಲ ಹುಸೇನ ಕಂದಗಲ್ ಅವರು ಕೋಮುವಾದ ಈ ದೇಶದ ದೊಡ್ಡ ರೋಗ, ಪ್ರಜಾಪ್ರಭುತ್ವ ಈ ದೇಶದ ಆರೋಗ್ಯಕರ ಬೆಳವಣಿಗೆ ಎಂದು ಅಭಿಪ್ರಾಯ ಪಟ್ಟರು. ಹಿಂದು, ಮುಸ್ಲಿಂ, ಕ್ರೈಸ್ತ ಎಂದು ಹೇಳಿಕೊಳ್ಳುವ ಮುಂಚಿ ನಾನೊಬ್ಬ ಮನುಷ್ಯ ಎಂದು ಹೇಳಿಕೊಳ್ಳುವವರ ಮೌಲ್ಯ ಇಂದು ಈ ನಾಡಿಗೆ ಬಹುಮುಖ್ಯವಾಗಿ ಬೇಕಾಗಿದೆ. ಕೋಮುವಾದಿಗಳ ಅಟ್ಟಹಾಸದಲ್ಲಿ ಶ್ರೀಮಂತರು, ನಾಯಕರು, ಸಾಯುವುದಿಲ್ಲ, ಆದರೆ ತುತ್ತು ಕೂಳಿಗೆ ಗತಿಯಿಲ್ಲದ, ದೀನ, ದಲಿತರು, ಅಮಾಯಕರು ಸಾಯುತ್ತಾರೆ. ಎಲ್ಲಾ ಧರ್ಮದಲ್ಲೂ ಮತೀಯವಾದಿಗಳು ಇಂತಹ ಗಲಾಟೆಗಳನ್ನು ಬಯಸುತ್ತಾರೆ. ಸಾಮಾನ್ಯರಾದ ನಾವು ಅವರಿಂದ ಎಚ್ಚರ ವಹಿಸಬೇಕಾಗಿದೆ ಎಂದರು.

ಕ್ರೈಸ್ತ ಮತದ ಆರ್.ಸಿ.ಆರ್.ಎಸ್. ಪ್ರಧಾನ ಕಾರ್ಯದರ್ಶಿ ಶ್ರೀ ಸುಶೀಲ ಕುಮಾರ ಚಿದ್ರಿ ಅವರು ಅತಿಥಿಗಳಾಗಿ ಮಾತನಾಡುತ್ತಾ, ದಲಿತರಿಗೆ ಬಹಿಷ್ಕಾರ ಹಾಕುವಾಗ ಬಾಯಿ ಮುಂಚಿಕೊಂಡಿರುವ ಮಠಾದೀಶರು ಕ್ರೈಸ್ತರ ಬಗ

ಪುಟ 15ಕ್ಕೆ

ಭಯೋತ್ಪಾದಕರಿಗೆ ಧರ್ಮವಿಲ್ಲ

ಮಹಾತ್ಮಾ ಗಾಂಧಿಯವರನ್ನು ಗುಂಡಿಟ್ಟುಕೊಂದಾಗ ಗೋಡ್ಸೆ ಆರೆಸ್ಸೆಸ್ ಸದಸ್ಯನಾಗಿರಲಿಲ್ಲವಂತೆ. ಅದೇ ರೀತಿ ಪ್ರಜ್ಞಾ ಸಿಂಗ್ ಹಿಂದೆ ಎಬಿವಿಪಿಯ ಮುಖಂಡರಾಗಿದ್ದರೂ ಅವರನ್ನು ಆರೆಸ್ಸೆಸ್ನೊಂದಿಗೆ ಗುರುತಿಸುವುದು ಸರಿಯಲ್ಲವಂತೆ. ನಾಥೂರಾಂ ಗೋಡ್ಸೆಯವರ ಸೋದರನೇ ಬಿಜೆಪಿ ಮುಖಂಡರ ಈ ಹೇಳಿಕೆಗೆ ಸವಾಲು ಹಾಕಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಹೀಗೆಂದು ದೇಶದ ಜಾತ್ಯಾತೀತರು ಹೇಳುತ್ತಲೇ ಬಂದಿದ್ದಾರೆ. ಆದರೆ ಸಂಘ ಪರಿವಾರದವರು ಮತ್ತು ಮಾಧ್ಯಮಗಳ ಬಹಳಷ್ಟು ಮಂದಿ ಅದನ್ನು ಒಂದು ಧರ್ಮದೊಂದಿಗೇ ಗುರುತಿಸುತ್ತಾರೆ. ಜನಮಾನಸದಲ್ಲೂ ಅದನ್ನೇ ಬಿಂಬಿಸುವ ಪ್ರಯತ್ನ ನಡೆಸಿಕೊಂಡೇ ಬಂದಿದ್ದಾರೆ.

ಆದರೆ ಇತ್ತೀಚೆಗೆ, ಅಕ್ಟೋಬರ 23ರಂದು ಮಹಾರಾಷ್ಟ್ರದ ಭಯೋತ್ಪಾದಕ-ವಿರೋಧಿ ಪಡೆ(ಎಟಿಎಸ್) ಹಿಂದೂ ಸನ್ಯಾಸಿನಿಯೆನಿಸಿಕೊಂಡ ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್ ಮತ್ತು ಸಹಚರರಾದ ಶ್ಯಾಮ್ ಭಂವರ್ ಲಾಲ್ ಸಾಹು ಮತ್ತು ಶಿವನಾರಾಯಣ್ ಗೋಪಾಲ್ ಸಿಂಗ್ ಕಲ್ಸಂಘ್ರಾ ಎಂಬವರನ್ನು ಬಂಧಿಸಿರುವುದು ಅವರ ಬಾಯಿ ಕಟ್ಟಿದೆ. ಇವರೆಲ್ಲಾ ಸಂಘ 'ಪರಿವಾರ'ಕ್ಕೆ ಸೇರಿದವರು. ಅಕ್ಟೋಬರ್ 28 ರಂದು ಇನ್ನೂ ಇಬ್ಬರನ್ನು ಬಂಧಿಸಲಾಗಿದೆ. ಇವರೂ ಅದೇ 'ಪರಿವಾರ'ದವರು - ಸಮೀರ್ ಕುಲಕರ್ಣಿ ಮತ್ತು ರಮೇಶ್ ಉಪಾಧ್ಯಾಯ. 34 ವರ್ಷ ವಯಸ್ಸಿನ ಕುಲಕರ್ಣಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸದಸ್ಯನಾಗಿದ್ದರೆ, 57 ವರ್ಷದ ಉಪಾಧ್ಯಾಯ ನಿವೃತ್ತ ಸೇನಾ ಮೇಜರ್. ಎಟಿಎಸ್ ಸೆಪ್ಟಂಬರ್ 29 ರಂದು ಮಹಾರಾಷ್ಟ್ರದ ಮಲೆಗಾಂವ್ ಮತ್ತು ಮೊಡಾಸಾದಲ್ಲಿನ ಬಾಂಬ್ ಸ್ಫೋಟಗಳ ತನಿಖೆಯಲ್ಲಿ ಈ ಐವರನ್ನು ಬಂಧಿಸಿದೆ. ನಾಶಿಕ್‌ನಲ್ಲಿರುವ ಭೋನ್ಸಾಲಾ ಮಿಲಿಟರಿ ಸ್ಕೂಲ್‌ನ ಕಮಾಂಡೆಂಟ್ ಆಗಿದ್ದ ನಿವೃತ್ತ ಕರ್ನಲ್ ಎಸ್.ಎಸ್.ರಾಯ್ಕರ್ ಎಂಬಾತನ ವಿಚಾರಣೆ ನಡೆಸಿ ಬಿಡಲಾಗಿದೆ. ಇನ್ನೂ ಕೆಲವರ ವಿಚಾರಣೆ ನಡೆಯುತ್ತಿದೆ.

ನಿರೀಕ್ಷಿಸಿದಂತೆ ಬಿಜೆಪಿ, ಎಬಿವಿಪಿ ಮತ್ತು ಸಂಘ ಪರಿವಾರದ ಇತರ ಮುಖಂಡರು ತಮ್ಮನ್ನು ಇವರಿಂದ ದೂರವಿರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಅಡ್ವಾಣಿಯವರು ನಾಥೂರಾಂ ಗೋಡ್ಸೆ ಮತ್ತು ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್ ಇವರಿಬ್ಬರನ್ನು ಹೋಲಿಸಿದ್ದಾರೆ. ಮಹಾತ್ಮಾ ಗಾಂಧಿಯವರನ್ನು ಗುಂಡಿಟ್ಟುಕೊಂದಾಗ ಗೋಡ್ಸೆ ಆರೆಸ್ಸೆಸ್ ಸದಸ್ಯನಾಗಿರಲಿಲ್ಲವಂತೆ. ಅದೇ ರೀತಿ ಪ್ರಜ್ಞಾಸಿಂಗ್ ಹಿಂದೆ ಎಬಿವಿಪಿಯ ಮುಖಂಡರಾಗಿದ್ದರೂ ಅವರನ್ನು ಆರೆಸ್ಸೆಸ್‌ನೊಂದಿಗೆ ಗುರುತಿಸುವುದು ಸರಿಯಲ್ಲವಂತೆ. ನಾಥೂರಾಂ ಗೋಡ್ಸೆಯವರ ಸೋದರನೇ ಬಿಜೆಪಿ ಮುಖಂಡರ ಈ ಹೇಳಿಕೆಗೆ ಸವಾಲು ಹಾಕಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪ್ರಜ್ಞ ಮಧ್ಯಪ್ರದೇಶದ ಭಿಂಡ್‌ನಲ್ಲಿ ಆಕೆಯ ಕಾಲೇಜು ದಿನಗಳಲ್ಲಿ ಪ್ರಮುಖ ಎಬಿವಿಪಿ ಮುಖಂಡಳಾಗಿದ್ದಳು. ಮುಂದೆ ಅಲ್ಲಿ ಮತ್ತು ರಾಜ್ಯದ ಇತರೆಡೆಗಳಲ್ಲೂ ಬಿಜೆಪಿ ವಲಯಗಳಲ್ಲಿ ಎಲ್ಲರಿಗೂ ಪರಿಚಿತ ವ್ಯಕ್ತಿಯಾಗಿದ್ದಳು. ಆಕೆಯ ತಂದೆ ಸಿ.ಪಿ.ಸಿಂಗ್ ಡಾಕ್ಟರಾಗಿದ್ದು ಕ್ಲಿನಿಕ್ ನಡೆಸುತ್ತಿದ್ದಾರೆ. ಅವರು ಆರೆಸ್ಸೆಸ್‌ನ ಪದಾಧಿಕಾರಿಯಾಗಿದ್ದರು ಎಂದು ಪೋಲೀಸ್ ಸೂಪರಿಂಟೆಂಡೆಂಟ್ ಹೇಳಿದ್ದಾರೆ.

> **ಈ ಬೆಳವಣಿಗೆಗಳು ಎರಡು ಅಂಶಗಳನ್ನು ಮತ್ತೊಮ್ಮೆ ಎಲ್ಲರ ಗಮನಕ್ಕೆ ತಂದಿವೆ. ಮೊದಲನೆಯದಾಗಿ, ಆರಂಭದಲ್ಲಿ ಹೇಳಿದಂತೆ, ಭಯೋತ್ಪಾದನೆಗೆ ಧರ್ಮವಿಲ್ಲ. ಅದು ಕೇವಲ ರಾಷ್ಟ್ರ-ವಿರೋಧಿಯಾಗಿರುತ್ತದೆ. ಎರಡನೆಯದಾಗಿ, ಎಲ್ಲಾ ಬಣ್ಣಗಳ ಭಯೋತ್ಪಾದನೆಗಳು ಒಂದನ್ನೊಂದು ಪೋಷಿಸುತ್ತವೆ, ಬಲಪಡಿಸುತ್ತವೆ. ಈ ಪ್ರಕ್ರಿಯೆಯಲ್ಲಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನೇ ಅವು ಧ್ವಂಸ ಮಾಡುತ್ತವೆ.**

ಇದೇ ಮೊದಲಲ್ಲ

ಇಲ್ಲಿ ಪ್ರಶ್ನೆ ಈಗ ಆಕೆ ಅಥವಾ ಆತ ಯಾವುದೇ ಸಂಘ ಪರಿವಾರದ ಸದಸ್ಯರು ಹೌದೋ ಅಲ್ಲವೋ ಎಂಬುದಲ್ಲ, ಸಂಘ ಪರಿವಾರ ಎಂತಹ ವಿಷಯುಕ್ತ ಸಿದ್ಧಾಂತಗಳನ್ನು ಯುವಜನರ ತಲೆಯಲ್ಲಿ ತುಂಬುತ್ತಿದೆ, ಅದು ಎಂತಹ ಹಿಂಸಾತ್ಮಕ ಪ್ರವೃತ್ತಿಯನ್ನು ಬೆಳೆಸುತ್ತಿದೆ ಎಂಬುದೇ ಇಲ್ಲಿರುವ ಆತಂಕ.



ಹಿಂದೂ ಭಯೋತ್ಪಾದಕ ಸಾಧ್ವಿ(?) ಪ್ರಜ್ಞಾ ಸಿಂಗ್ ಠಾಕೂರ್

ಬಾಂಬ್ ಸ್ಫೋಟಗಳಲ್ಲಿ ಆರೆಸ್ಸೆಸ್‌ನ ಕೈವಾಡ ಇದೇ ಮೊದಲಲ್ಲ. ಇದೇ ಮಲೇಗಾಂವ್‌ನಲ್ಲಿ ಈ ಹಿಂದೆಯೂ ಹಿಂಸಾಚಾರಗಳು ನಡೆದಿದ್ದು ಹಿಂದೂ ಕೋಮುವಾದಿ ಸಂಘಟನೆಗಳ ಕೈವಾಡದ ಬಗ್ಗೆ ಸಂದೇಹಗಳಿದ್ದವು. ಅಷ್ಟೇ ಅಲ್ಲ, 2003ರಲ್ಲಿ ಮಹಾರಾಷ್ಟ್ರದ ಪರ್ಭಾನಿ, ಜಾಲ್ನಾ ಮತ್ತು ಜಲಗಾಂವ್ ಜಿಲ್ಲೆಗಳಲ್ಲಿ, 2005ರಲ್ಲಿ ಉತ್ತರ ಪ್ರದೇಶದ ಮಾವು ಜಿಲ್ಲೆಯಲ್ಲಿ, 2006ರಲ್ಲಿ ಮಹಾರಾಷ್ಟ್ರದ ನಾಂದೇಡ್‌ನಲ್ಲಿ, ಜನವರಿ 2008ರಲ್ಲಿ ತಿರುನಲ್ವೇಲಿಯ ತೆಂಕಾಸಿಯ ಆರೆಸ್ಸೆಸ್ ಕಚೇರಿಯಲ್ಲಿ, ಅಗಸ್ಟ್ 2008ರಲ್ಲಿ ಕಾನ್ಪುರದಲ್ಲಿ ನಡೆದ ಸ್ಫೋಟಗಳಲ್ಲಿ ಹಿಂದೂ ಕೋಮುವಾದಿಗಳ ಪಾತ್ರವಿತ್ತು ಎಂದು ಪೋಲೀಸ್ ತನಿಖೆಗಳಿಂದ ತಿಳಿದು ಬಂದಿತ್ತು. ಆದ್ದರಿಂದಲೇ, ಅಕ್ಟೋಬರ್ 13 ರಂದು ನಡೆದ ರಾಷ್ಟ್ರೀಯ ಸಮಗ್ರತಾ ಮಂಡಲಿಯ ಸಭೆಯಲ್ಲಿ ಸೀತಾರಾಂ ಯೆಚೂರಿಯವರು ಇದನ್ನು ಪ್ರಸ್ತಾಪಿಸುತ್ತ ಇಂತಹ ಎಲ್ಲ ಕೇಸುಗಳಲ್ಲಿ ನಿಷ್ಪಕ್ಷಪಾತವಾಗಿ, ಅದೇ ತೀವ್ರತೆಯಿಂದ ತನಿಖೆ ನಡೆಸಿದರೆ ಮಾತ್ರವೇ ಆಂತರಿಕ ಭದ್ರತೆಯನ್ನು ಬಲಪಡಿಸಲು ಸಾಧ್ಯ ಎಂದಿದ್ದರು.

ಈ ಎಲ್ಲಾ ಕೇಸುಗಳ ಆಮೂಲಾಗ್ರ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಬೇಕಾದ ಸಮಯವೀಗ ಬಂದಿದೆ. ಈ ಬೆಳವಣಿಗೆಗಳು ಎರಡು ಅಂಶಗಳನ್ನು ಮತ್ತೊಮ್ಮೆ ಎಲ್ಲರ ಗಮನಕ್ಕೆ ತಂದಿವೆ. ಮೊದಲನೆಯದಾಗಿ, ಆರಂಭದಲ್ಲಿ ಹೇಳಿದಂತೆ, ಭಯೋತ್ಪಾದನೆಗೆ ಧರ್ಮವಿಲ್ಲ. ಅದು ಕೇವಲ ರಾಷ್ಟ್ರ- ವಿರೋಧಿಯಾಗಿರುತ್ತದೆ, ಆದ್ದರಿಂದ ಅದರೊಡನೆ ಮಾತುಕತೆಯಾಗಲೀ, ಅದನ್ನು ಸ್ವೀಕರಿಸುವುದಾಗಲೀ ಸಾಧ್ಯವಿಲ್ಲ. ಎರಡನೆಯದಾಗಿ, ಎಲ್ಲಾ ಬಣ್ಣಗಳ ಭಯೋತ್ಪಾದನೆಗಳು ಒಂದನ್ನೊಂದು ಪೋಷಿಸುತ್ತವೆ, ಬಲಪಡಿಸುತ್ತವೆ. ಈ ಪ್ರಕ್ರಿಯೆಯಲ್ಲಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನೇ ಅವು ಧ್ವಂಸ ಮಾಡುತ್ತವೆ.

ಸಾವರ್ಕರ್‌ರಿಂದ ಕಲ್ಯಾಣ್‌ಸಿಂಗ್‌ವರೆಗೆ

ಹಿಂದೂಗಳಿಗೆ ಮಿಲಿಟರಿ ತರಬೇತಿ ನೀಡಬೇಕು ಎಂಬ ವಾದವೂ ಹೊಸದೇನಲ್ಲ. ಅದಕ್ಕೂ ದೀರ್ಘ ಇತಿಹಾಸ ಇದೆ. ಕಳೆದ ಶತಮಾನದ ಮೂರನೇ ದಶಕದ ವೇಳೆಗೆ ಸಾವರ್ಕರ್ 'ಎಲ್ಲಾ ರಾಜಕೀಯವನ್ನು ಹಿಂದೂಕರಣಗೊಳಿಸಿ ಮತ್ತು ಹಿಂದುತ್ವವನ್ನು ಮಿಲಿಟರೀಕರಿಸಿ' ಎಂಬ ಘೋಷಣೆ ಕೊಟ್ಟಿದ್ದರು.

ಆರೆಸ್ಸೆಸ್ ಸಂಸ್ಥಾಪಕ ಡಾ. ಹೆಗ್ಡೆವಾರ್‌ರವರ ಗುರು ಡಾ. ಬಿ.ಎಸ್. ಮುಂಜೆಯವರು ಫ್ಯಾಸಿಸ್ಟ್ ಸರ್ವಾಧಿಕಾರಿ ಮುಸಲೋನಿಯನ್ನು ಭೇಟಿಯಾಗಲು ಇಟಲಿಗೆ ಹೋಗಿದ್ದರು. ಮಾರ್ಚ್ 19, 1931ರಲ್ಲಿ ಈ ಭೇಟಿ ನಡೆಯಿತು. ಮಾರ್ಚ್ 20 ರ ಅವರ ಡೈರಿಯಲ್ಲಿ ಇಟಾಲಿಯನ್ ಫ್ಯಾಸಿಸಂ ತನ್ನ ಯುವಜನರಿಗೆ(ಗದ್ದಲ ಎಬ್ಬಿಸುವವರಿಗೆ) ಹೇಗೆ ಮಿಲಿಟರಿ ತರಬೇತಿ ನೀಡುತ್ತಿದೆ ಎಂಬ ಬಗ್ಗೆ ಅವರ ಆಕರ್ಷಣೆ ಮತ್ತು ಮೆಚ್ಚುಗೆ ವ್ಯಕ್ತಗೊಂಡಿದೆ. ಅಲ್ಲಿಂದ ಹಿಂತಿರುಗಿದ ಮೂಂಜೆಯವರು 1935ರಲ್ಲಿ ನಾಸಿಕ್‌ನಲ್ಲಿ ಸೆಂಟ್ರಲ್ ಹಿಂದೂ ಮಿಲಿಟರಿ ಎಜ್ಯುಕೇಶನ್ ಸೊಸೈಟಿ ಆರಂಭಿಸಿದರು. ಇದೇ ಮುಂದೆ 1937ರಲ್ಲಿ ಭೋನ್ಸಾಲಾ ಮಿಲಿಟರಿ ಸ್ಕೂಲ್ ಆಯಿತು.

> **ರಾಜಕೀಯ ಕ್ರೋಢೀಕರಣಕ್ಕೆ ಭಯೋತ್ಪಾದನೆಯನ್ನು ಒಂದು ಸಾಧನವಾಗಿ ಬಳಸುವ ದುಷ್ಟ ಸೈದ್ಧಾಂತಿಕ ವಿಧಾನ ತನ್ನ ಹೆಜ್ಜೆಗುರುತುಗಳನ್ನು ಹರಡುತ್ತಿದೆ. ವ್ಯಾಪಕ ಚುನಾವಣಾ ಬೆಂಬಲಕ್ಕಾಗಿ ಕೋಮುವಾದೀ ಧ್ರುವೀಕರಣ ಅಥವಾ ಪ್ರಾದೇಶೀಕ ಸಂಕುಚಿತತೆಯ ಮೂಲಕ ಭಯೋತ್ಪಾದನೆಯನ್ನು ಉಂಟು ಮಾಡುವುದು ಭಾರತದ ಸಂಕೀರ್ಣ ಸಾಮಾಜಿಕ ಹಂದರವನ್ನು ಛಿದ್ರ-ವಿಚ್ಛಿದ್ರಗೊಳಿಸಲು ನೀಡುವ ಆಹ್ವಾನವೇ ಸರಿ. ಇಂತಹ ರಾಜಕೀಯವನ್ನು ಸೋಲಿಸಬೇಕಾಗಿದೆ.**

ಗೋಲ್ವಾಲ್ಕರ್ 1939ರಲ್ಲಿ ಹಿಟ್ಲರ್ ಯೆಹೂದ್ಯರನ್ನು 'ತೊಳೆಯುವ' ಕೆಲಸ ಮಾಡುತ್ತಿದ್ದುದನ್ನು ಹಾಡಿ ಹೊಗಳುವ ಅವರು ಅದು 'ಹಿಂದುಸ್ತಾನದಲ್ಲಿರುವ ನಾವು ಕಲಿತು ಪ್ರಯೋಜನ ಪಡೆಯಬೇಕಾದ ಒಂದು ಒಳ್ಳೆಯ ಪಾಠ' ಎಂದಿದ್ದರು.

ತೀರಾ ಇತ್ತೀಚೆಗೆ ಬಾಬ್ರಿ ಮಸೀದಿ ಧ್ವಂಸದ ನಂತರ, ಆರೆಸ್ಸೆಸ್ ಕಬಂಧ ಬಾಹುಗಳಾದ ವಿಹೆಚ್‌ಪಿ, ಭಜರಂಗ ದಳ ಇದಕ್ಕೆ ತಾವು 'ಕರಸೇವಕ'ರಿಗೆ ತರಬೇತಿ ನೀಡಿದ್ದೆವು ಎಂದು ಬಹಿರಂಗವಾಗಿಯೇ ಹೆಮ್ಮೆಯಿಂದ ಹೇಳುತಿದ್ದರು. ಬಾಬ್ರಿ ಮಸೀದಿಯನ್ನು ಧ್ವಂಸ ಮಾಡುವ ಕೆಲಸವನ್ನು ಕರಸೇವಕರು ಯಾವುದೇ ವೃತಿಪರ ಕಾಂಟ್ರಾಕ್ಟರನಿಗಿಂತ ತ್ವರಿತವಾಗಿ, ದಕ್ಷತೆಯಿಂದ ನೆರವೇರಿಸಿದರು ಎಂದು ಉತ್ತರಪ್ರದೇಶದ ಆಗಿನ ಬಿಜೆಪಿ ಮುಖ್ಯಮಂತ್ರಿ ಹೆಮ್ಮೆಯಿಂದ ಸಾರ್ವಜನಿಕವಾಗಿಯೇ ಹೇಳಿದರು!

ಏಕೆ ಈ ಎಡಬಿಡಂಗಿತನ?

ಎಬಿವಿಪಿ ಒಂದು ದೇಶಭಕ್ತ ಸಂಘಟನೆ, ಅದು ಏನೇ ಮಾಡಿದರೂ ಭಯೋತ್ಪಾದನೆಯಲ್ಲ ಎಂಬಂತೆ ವಾದ ಮಾಡಲಾಗುತ್ತಿದೆ. ಹಿಂದೂ ಸಮರಶೀಲತೆ, ಹಿಂದೂ ಭಯೋತ್ಪಾದನೆ ಎಂಬ ಪದ ಬಳಕೆ ಮಾಡಬೇಡಿ ಎನ್ನುತ್ತಾರೆ ಅವರು. ನಿಜ, ಯಾವುದೇ ಧರ್ಮದ ವ್ಯಕ್ತಿಗಳು ಭಯೋತ್ಪಾದನೆಯಲ್ಲಿ ತೊಡಗಿದರೆ ಅದಕ್ಕೆ ಆ ಇಡೀ ಧಾರ್ಮಿಕ ಸಮುದಾಯವನ್ನೇ ಹೊಣೆ ಮಾಡಬಾರದು. ಆದರೆ ಇದು ಎಲ್ಲಾ ಧರ್ಮಗಳಿಗೂ ಅನ್ವಯವಾಗುತ್ತದೆಯಲ್ಲವೇ? ಆರೆಸ್ಸೆಸ್ ಇದನ್ನು ಒಪ್ಪುವುದಿಲ್ಲ. ಏಕೆಂದರೆ ಇತ್ತೀಚೆಗಷ್ಟೇ ಅಕ್ಟೋಬರ್ 17 ರಿಂದ 19ರ ವರೆಗೆ ನಡೆದ ಅದರ ಅಖಿಲ ಭಾರತೀಯ ಕಾರ್ಯಕಾರೀ ಮಂಡಳಿಯ ಬೈಠಕ್ ಒಂದು ಠರಾವು ಅಂಗೀಕರಿಸಿತು. ಅದರ ಶಿರೋನಾಮೆ-'ಇಸ್ಲಾಮೀ ಭಯೋತ್ಪಾದನೆಯನ್ನು ಕಠಿಣವಾಗಿ ನಿಗ್ರಹಿಸಿ'! ಹಾಗಿದ್ದರೆ ಹಿಂದೂ ಭಯೋತ್ಪಾದನೆ ಎಂದು ಏಕೆ ಹೇಳಬಾರದು?

ಈ ನಿರ್ಣಯದಲ್ಲಿ ಇನ್ನೊಂದು ಆಸಕ್ತಿಕಾರಕ ಸಂಗತಿಯಿದೆ. ಅದು ಮಹಾರಾಷ್ಟ್ರದಲ್ಲಿ ಮತ್ತು ಇತರ ಕಡೆಗಳಲ್ಲಿ ಪೊಲೀಸ್ ಪಡೆಗಳು ಬಹುಶಃ ಈ 'ಇಸ್ಲಾಮೀ ಭಯೋತ್ಪಾದಕರ' ವಿರುದ್ಧ 'ಯಶಸ್ವಿ ಕಾರ್ಯಾಚರಣೆ'ಗಳ ಬಗ್ಗೆ, ಮುಖ್ಯವಾಗಿ ಮಹಾರಾಷ್ಟ್ರದ ಭಯೋತ್ಪಾದನಾ- ವಿರೋಧಿ ಪಡೆ(ಎಟಿಎಸ್)ಯ ಮೇಲೆ ಹೊಗಳಿಕೆಗಳ ಸುರಿಮಳೆಗೈದಿದೆ. ಆದರೆ ಈಗ ಅದೇ ಎಟಿಎಸ್ ಸಂಘ ಪರಿವಾರದವರನ್ನು ಬಂಧಿಸಿರುವುದು ಅವರಿಗೆ ಮುಜುಗರ ಉಂಟುಮಾಡಿದೆ. ಅದೇನೇ ಇರಲಿ, ತನಿಖೆಗಳನ್ನು ತ್ವರಿತವಾಗಿ ನಡೆಸಿ ಕಾನೂನು ತನ್ನ ಕೆಲಸ ಮಾಡಲು ಬಿಡಬೇಕು ಎಂಬುದು ಎಲ್ಲಾ ಪ್ರಜಾಪ್ರಭುತ್ವವಾದಿಗಳ ಆಶಯ.

ರಾಜಕೀಯ ಕ್ರೋಢೀಕರಣಕ್ಕೆ ಭಯೋತ್ಪಾದನೆಯನ್ನು ಒಂದು ಸಾಧನವಾಗಿ ಬಳಸುವ ದುಷ್ಟ ಸೈದ್ಧಾಂತಿಕ ವಿಧಾನ ತನ್ನ ಹೆಜ್ಜೆಗುರುತುಗಳನ್ನು ಹರಡುತ್ತಿದೆ. ಮಹಾರಾಷ್ಟ್ರ ನವನಿರ್ಮಾಣ ಸೇನೆ ಉತ್ತರ ಭಾರತೀಯರ ವಿರುದ್ಧ ನಡೆಸಿರುವ ಪ್ರಚಾರ, ಅದಕ್ಕೆ ಶಿವಸೇನೆಯ ಅನುಮೋದನೆ ಒಂದು ನಗ್ನ ಉದಾಹರಣೆ. ವ್ಯಾಪಕ ಚುನಾವಣಾ ಬೆಂಬಲಕ್ಕಾಗಿ ಕೋಮುವಾದೀ ಧ್ರುವೀಕರಣ ಅಥವಾ ಪ್ರಾದೇಶೀಕ ಸಂಕುಚಿತತೆಯ ಮೂಲಕ ಭಯೋತ್ಪಾದನೆಯನ್ನು ಉಂಟು ಮಾಡುವುದು ಭಾರತದ ಸಂಕೀರ್ಣ ಸಾಮಾಜಿಕ ಹಂದರವನ್ನು ಛಿದ್ರ-ವಿಚ್ಛಿದ್ರಗೊಳಿಸಲು ನೀಡುವ ಆಹ್ವಾನವೇ ಸರಿ. ಇಂತಹ ರಾಜಕೀಯವನ್ನು ಸೋಲಿಸಬೇಕಾಗಿದೆ. 'ಹಿಂದೂ ವೋಟ್ ಬ್ಯಾಂಕ್' ಎಂಬುದನ್ನು ಕ್ರೋಢೀಕರಿಸಲು ಕೋಮು ಧ್ರುವೀಕರಣವನ್ನು ಆರೆಸ್ಸೆಸ್/ಬಿಜೆಪಿ ಒಂದು ಸಾಧನವಾಗಿ ಬಳಸುವುದು ಒಂದು ಅತ್ಯಂತ ಕೆಟ್ಟ 'ವೋಟ್ ಬ್ಯಾಂಕ್ ರಾಜಕೀಯ'. ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ಉಳಿಸಿ, ಬಲಪಡಿಸಲು ಇಂತಹ ರಾಜಕೀಯವನ್ನು ಸೋಲಿಸಲೇಬೇಕು. ○

ಆರ್ಥಿಕ ಕುಸಿತ

ಅಮೆರಿಕಾಕ್ಕೆ ಕ್ಯಾನ್ಸರ್! - ಜಗಕ್ಕೆಲ್ಲಾ ಸೋಂಕು

ವಿಶ್ವಸಂಸ್ಥೆ ವರದಿ : ■ ಮುಂದಿನ ವರ್ಷ ಜಗತ್ತಿನ ಒಟ್ಟು ನಿರುದ್ಯೋಗಿಗಳ ಸಂಖ್ಯೆ - 21 ಕೋಟಿ.
■ ಇನ್ನೊಂದು ವರ್ಷದಲ್ಲಿ ಉದ್ಯೋಗ ಕಳಕೊಳ್ಳುವವರ ಸಂಖ್ಯೆ - 2 ಕೋಟಿ.
ಐ.ಎಂ.ಎಫ್. ವರದಿ : ■ ಅಮೇರಿಕಾದಲ್ಲಿ ಈವರೆಗೆ ಈ ವರ್ಷದಲ್ಲಿ 13 ಬ್ಯಾಂಕ್‌ಗಳು ಮುಳುಗಿವೆ.
■ 2002ರಲ್ಲಿ 11 ಬ್ಯಾಂಕ್‌ಗಳು ಮುಚ್ಚಿದ್ದವು.
■ ಯುರೋಪಿನಲ್ಲಿ ಒಟ್ಟು ವಾರ್ಷಿಕ ಉತ್ಪನ್ನ (ಜಿಡಿಪಿ) ಶೇ.0.2ಕ್ಕೆ ಕುಸಿತ

ಹೀಗೆ ವರದಿಗಳು ಒಂದರ ಮೇಲೊಂದರಂತೆ ಬರುತ್ತಲೇ ಇವೆ. ಇಂತಹ ವರದಿಗಳು ಇನ್ನು ಮುಂದೆ ಇನ್ನೂ ಹೆಚ್ಚಾಗಲಿವೆ.

ಸೋವಿಯತ್ ರಶಿಯಾದಲ್ಲಿ ಕಮ್ಯೂನಿಸ್ಟ್ ಸರಕಾರದ ಪತನದ ನಂತರ ಸಮಾಜವಾದಕ್ಕಿಂತ ಬಂಡವಾಳವಾದವೇ ಶ್ರೇಷ್ಠ ಎಂದು ಗೋಗರೆದ ಅಮೇರಿಕಾದ ಮತ್ತು ಇಂಗ್ಲೆಂಡ್‌ನ ಆಡಳಿತಗಾರರು ಬ್ಯಾಂಕುಗಳ ರಾಷ್ಟ್ರೀಕರಣಕ್ಕೆ ಕೈಹಾಕಿದ್ದಾರೆ. ಕಟ್ಟಾ ಕಮ್ಯೂನಿಸ್ಟ್ ವಿರೋಧಿ ಅಮೇರಿಕಾದ ಸೆನೆಟರ್ ಒಬ್ಬ ಕೇಳಿಯೇಬಿಟ್ಟ "ಇದೇನು? ಮಾರುಕಟ್ಟೆ ಆರ್ಥಿಕ ನೀತಿಯನ್ನು ಕೈಬಿಟ್ಟು ಸಮಾಜವಾದಕ್ಕೆ ಬಲಿಬೀಳುತ್ತಿರುವಿರೇನು?" ಎಂದು.

159 ವರ್ಷ ಇತಿಹಾಸವುಳ್ಳ ಲಿಮನ್ ಬ್ರದರ್ಸ್, 119 ವರ್ಷ ಇತಿಹಾಸದ ವಾಷಿಂಗ್ಟನ್ ಮ್ಯೂಚುವಲ್ ದೀವಾಳಿ ಅರ್ಜಿ ಹಾಕಿವೆ. ಪ್ರತಿಷ್ಠಿತ ಮೆರಿಲಿಂಚ್ ಬ್ಯಾಂಕ್ ಆಫ್ ಅಮೇರಿಕಾದೊಂದಿಗೆ ವಿಲೀನಗೊಂಡಿದೆ. ವಿಮಾ ವ್ಯವಹಾರದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಸಂಸ್ಥೆ ಎಂಬ ಖ್ಯಾತಿ ಹೊಂದಿದ್ದ ಎಐಜಿ ಮೊದಲಾದವುಗಳಿಗೆ ರಕ್ಷಣೆ ನೀಡಲು ಅಮೇರಿಕಾ ಸರಕಾರ ಇದುವರೆಗೆ 700 ಬಿಲಿಯ ಡಾಲರು (70,000 ಕೋಟಿ ಡಾಲರು ಅಥವಾ 31,50,000 ಕೋಟಿ ರೂ.)ಗಳಷ್ಟು ಹಣ ನೀಡಿದೆ. ಇಷ್ಟೊಂದು ಹಣ ಎಂದರೆ ಎಷ್ಟಾಗುತ್ತದೆ ಗೊತ್ತೇ?

ನಮ್ಮ ದೇಶದ ವಾರ್ಷಿಕ ಬಜೆಟ್ 700,000 ಕೋಟಿ ರೂ. ನಮ್ಮ ದೇಶದ ಒಂದು ವರ್ಷದ ಒಟ್ಟು ಬಜೆಟ್‌ನ 4 ರಿಂದ 5 ಪಟ್ಟು ಹಣವನ್ನು ಕೆಲವು ಕಂಪನಿಗಳನ್ನು ಉಳಿಸಿಕೊಳ್ಳಲು ಅಮೇರಿಕಾ ಸರಕಾರ ಸಹಾಯ ಮಾಡಿದೆ. (ಇನ್ನಷ್ಟು ವಿವರಣೆ ಬಾಕ್ಸ್‌ನಲ್ಲಿ)

ಅಂದು ಹಣಕಾಸು ಸಂಸ್ಥೆಗಳು ಲಾಭ ಮಾಡುತ್ತಿದ್ದಾಗ ಅವುಗಳ ಖಾಸಗಿ ಮಾಲೀಕರು, ಉನ್ನತ ಅಧಿಕಾರಿಗಳು ಕೋಟಿಗಟ್ಟಲೆ ಸ್ವಾಹ ಮಾಡಿದರು. ಇಂದು ಆ ಕಂಪನಿಗಳನ್ನು ಉಳಿಸಲು ಜನರು ನೀಡಿದ ತೆರಿಗೆಯ ಹಣವನ್ನು ಬಳಸಿಕೊಳ್ಳಲಾಗುತ್ತಿದೆ. ಇದು ಬಂಡವಾಳಶಾಹಿ ಸಮಾಜದ ಆರ್ಥಿಕ ನೀತಿ!

ಬಡತನ-ಸಿರಿತನದ ನಡುವಿನ ಅಂತರ

ಜಗತ್ತಿನಲ್ಲಿಯೇ ದೊಡ್ಡ ಆರ್ಥಿಕತೆಯನ್ನು ಹೊಂದಿರುವ ದೇಶ ಎಂಬ ಹೆಗ್ಗಳಿಕೆ ಅಮೇರಿಕಾದ್ದು.



ದೇಹದ ಯಾವುದೇ ಮೂಲೆಯಲ್ಲಿ ಕ್ಯಾನ್ಸರ್ ಕಾಣಿಸಿಕೊಂಡರೆ ಪ್ರಾಥಮಿಕ ಹಂತದಲ್ಲಿ ಚಿಕಿತ್ಸೆ ಮಾಡದೆ ಹೋದಲ್ಲಿ ದೇಹದೆಲ್ಲೆಡೆ ಪಸರಿಸುವಂತೆ, ಅಮೆರಿಕಾದಲ್ಲಿ ಉಂಟಾದ ಆರ್ಥಿಕ ಕುಸಿತವೆಂಬ ಕ್ಯಾನ್ಸರ್ ಜಗತ್ತಿಗೆಲ್ಲ ಪಸರಿಸುತ್ತಿದೆ. ಎಡಪಕ್ಷಗಳ ಸೂಕ್ತ ಮಧ್ಯ ಪ್ರವೇಶದಿಂದ ಭಾರತದಲ್ಲಿ ದೊಡ್ಡ ಅನಾಹುತ ತಪ್ಪಿದೆ. ಆದರೂ ಸರ್ಕಾರದ ನೀತಿಗಳ ವಿರುದ್ಧ ಜನರು ಎಚ್ಚರದಿಂದಿರಬೇಕು.

ಬಾಲಕೃಷ್ಣ ಶೆಟ್ಟಿ

ಆದರೆ ಬಡವರು ಮತ್ತು ಸಿರಿವಂತರ ನಡುವಿನ ಅತ್ಯಂತ ಹೆಚ್ಚು ಅಂತರವಿರುವುದೂ ಅಮೇರಿಕಾದಲ್ಲಿಯೇ. 2005 ರಲ್ಲಿ ಶೇಕಡಾ 1 ರಷ್ಟು ಅಮೇರಿಕನ್ನರು, ಒಟ್ಟು ಶೇ.21.2 ರಷ್ಟು ಆದಾಯವನ್ನು ಹೊಂದಿದ್ದರು. ಅತ್ಯಂತ ಬಡತನದ ಶೇ.50ರಷ್ಟು ಜನರು ಕೇವಲ 12.8 ರಷ್ಟು ಆದಾಯವನ್ನು ಹೊಂದಿದ್ದರು. ಕಳೆದ 1 ವರ್ಷದಲ್ಲಿ 7.5 ಲಕ್ಷ ಉದ್ಯೋಗ ಕಳೆದುಕೊಂಡಿರುವ ಹಿನ್ನೆಲೆಯಲ್ಲಿ ಈ ಅಂತರ ಇನ್ನಷ್ಟು ಹೆಚ್ಚಾಗಲಿದೆ. ತೀವ್ರ ಆರ್ಥಿಕ ತುಡಿತದಿಂದ ಕಂಗೆಟ್ಟಿರುವ ಅಮೇರಿಕಾದಲ್ಲಿ ಮುಂಬರುವ ದಿನಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಲಿದೆ.

ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ತೆರಿಗೆದಾರರ ಹಣವನ್ನು ಬಡ ಅಮೇರಿಕಾದ ಜನರಿಗೆ ಪರಿಹಾರ ನೀಡುವ ಬದಲಾಗಿ ಸಮಾಜವನ್ನು ಕೊಳ್ಳೆ ಹೊಡೆದ ಖಾಸಗಿ ಹಣಕಾಸು ಸಂಸ್ಥೆಗಳಿಗೆ ದೊಡ್ಡ ಮೊತ್ತವನ್ನು ನೀಡಲಾಗಿದೆ.

ಕುಸಿತಕ್ಕೆ ಕಾರಣವೇನು?

ಈ ಸಂದರ್ಭದಲ್ಲಿ ಕಾರ್ಲ್ ಮಾರ್ಕ್ಸ್ 'ಬಂಡವಾಳ'ದ ಕುರಿತಾಗಿ ಬರೆದ ತನ್ನ ಶ್ರೇಷ್ಠ ಗ್ರಂಥದಲ್ಲಿ ಹೇಗೆ ವಿವರಿಸಿದ್ದಾರೆ ಎಂಬುದನ್ನು ಗಮನಿಸಬೇಕು. "ಸಾಕಷ್ಟು ಲಾಭ ಗಳಿಸುವ ಬಂಡವಾಳ ಧೈರ್ಯಶಾಲಿಯಾಗಿರುತ್ತದೆ. ಶೇ.10 ಲಾಭ ಗ್ಯಾರಂಟಿಯಾದರೆ ಎಲ್ಲಾ ಕಡೆ ಸಂಚರಿಸುತ್ತದೆ. ಶೇ.20ರ ಲಾಭ ಉತ್ಸುಕತೆಯನ್ನು ಸೃಷ್ಟಿಸುತ್ತದೆ. ಶೇ.50 ಲಾಭವು ಅಹಂಕಾರವನ್ನು ಉಂಟುಮಾಡಿದರೆ, ಶೇ.100 ಲಾಭ ಎನ್ನುವುದು ಎಲ್ಲಾ ಕಾನೂನುಗಳನ್ನು ಕಟ್ಟಿಹಾಕುತ್ತದೆ. ಶೇ.300 ಲಾಭ ಬಂದರಂತೂ ತನ್ನ ಮಾಲಿಕನನ್ನೇ ನೇಣುಗಂಬಕ್ಕೆ ನೂಕುವಷ್ಟು ರಿಸ್ಕ್ ತೆಗೆದುಕೊಳ್ಳುತ್ತದೆ". ಇದು ಬಂಡವಾಳದ ಗುಣ. ಸಮಾಜದ ಅಭಿವೃದ್ಧಿಯ ಅಭಿಯಾನದಲ್ಲಿ ಬಂಡವಾಳವೇ ಕೊನೆಯ ಹಂತ ಎಂಬ ಬಂಡವಾಳಶಾಹಿಗಳ ದುರಾಸೆಯಿಂದ ಇಂದಿನ ಕುಸಿತ ಏರ್ಪಟ್ಟಿದೆ. ಆದ್ದರಿಂದ ಮಾನವ ಸಮಾಜದ ಬೆಳವಣಿಗೆಯಲ್ಲಿ ಸಮಾಜವಾದ ಮತ್ತು ಅದರ ನಂತರ ಘಟ್ಟವಾದ ಸಮತಾವಾದವೇ ಅಂತಿಮ ಘಟ್ಟವಾಗಿರುತ್ತದೆ.

ಅಮೇರಿಕಾದ ಇಂದಿನ ಬಿಕ್ಕಟ್ಟಿಗೆ 80ರ ಹಾಗೂ 90ರ ದಶಕದ ಆರ್ಥಿಕ ಉದಾರೀಕರಣ ನೀತಿಗಳೇ ಕಾರಣ. 1999 ರಲ್ಲಿ ಹಣಕಾಸು ಸೇವೆಗಳ ಆಧುನೀಕರಣ ಕಾಯಿದೆ ಜ್ಯಾರಿಗೆ ತಂದು ಎಲ್ಲಾ ಕಾನೂನುಗಳನ್ನು ಸಡಿಲಗೊಳಿಸಿ ಲಾಭವೊಂದೇ ಪ್ರಮುಖ ಗುರಿಯನ್ನಾಗಿಸಿತು. ಇದರಿಂದಾಗಿ ಸಟ್ಟಾ

ಪುಟ 12ಕ್ಕೆ

ಏಳುನೂರು ಶತಕೋಟಿ ಡಾಲರ್‌ನಲ್ಲಿ ಏನೆಲ್ಲಾ ಮಾಡಬಹುದು?

ಬುಶ್ ಅಧ್ಯಕ್ಷಗಿರಿಯ ಕೊನೆಯ ಪ್ರಮಾದ ಈಗ ಕುಪ್ರಸಿದ್ಧವಾಗಿರುವ ಏಳುನೂರು ಶತಕೋಟಿ ಡಾಲರುಗಳ 'ಬೇಲ್ ಔಟ್ (ಮುಚ್ಚಳಿಕೆ ಅಥವಾ ಜಾಮೀನು) ಯೋಜನೆ'. ಈ ಏಳುನೂರು ಶತಕೋಟಿ ಡಾಲರುಗಳ 'ಬೇಲ್ ಔಟ್' ಪ್ರಮುಖ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳು ಮತ್ತು ಅವುಗಳ ಕೊಬ್ಬಿದ ತಿಮಿಂಗಲ ಅಧಿಕಾರಿಗಳು ದಿವಾಳಿಯಾಗುವುದು ತಪ್ಪಿಸಲು. ಅವರೇ ತಮ್ಮ ಜೂಜುಕೋರ (ಹಲವು ಬಾರಿ ಕಾನೂನು ಬಾಹಿರ) ವಹಿವಾಟುಗಳಿಂದ, ಈಗಿನ ಆರ್ಥಿಕ ಬಿಕ್ಕಟ್ಟು ಸೃಷ್ಟಿಸಿದ ಕ್ರಿಮಿನಲ್‌ಗಳು. ಬುಶ್ ಈ ಕ್ರಿಮಿನಲ್ ಅಪರಾಧಿಗಳಿಗೆ ಭಾರೀ ತರಾತುರಿಯಲ್ಲಿ 'ಜಾಮೀನು' ಕೊಡುತ್ತಿದ್ದಾರೆ. ಅವರ ಪರವಾಗಿ 'ಮುಚ್ಚಳಿಕೆ' ಬರೆದು ಕೊಡುತ್ತಿದ್ದಾರೆ. ಈ ಪೂರ್ತಿ ಹಣ ಈ ಸಂಸ್ಥೆಗಳ ಬೆಲೆ ಇಲ್ಲದ ಆಸ್ತಿ ಮತ್ತು ಶೇರು ಖರೀದಿಸಲು ಬಳಸಲಾಗುವುದು. ಈ ಸಂಸ್ಥೆಗಳು ದಿವಾಳಿಯಾಗುವುದು ತಪ್ಪುತ್ತದೆ ಎಂದು ಬಿಟ್ಟರೆ ಅಮೆರಿಕದ ಆರ್ಥಿಕಕ್ಕೆ ಅಥವಾ ಯಾರಿಗೂ ಇದರಿಂದ ಬೇರೆ ಏನೂ ನೇರ ಪ್ರಯೋಜನ ಇಲ್ಲ.

ಆರ್ಥಿಕ ಬಿಕ್ಕಟ್ಟಿನ ಇತರ ಹಲವು ಆಯಾಮಗಳ - ಕೋಟ್ಯಾಂತರ ಜನ ಮನೆಸಾಲ ತೆರಲಾರದೆ ಮನೆ ಕಳೆದುಕೊಳ್ಳುತ್ತಿರುವುದು, ಹಣಕಾಸಿನ ಪೂರೈಕೆ ಕೊರತೆಯಿಂದ ಕೈಗಾರಿಕೆಗಳು ಸಣ್ಣ-ಮಧ್ಯಮ ಕಂಪನಿಗಳು ಮುಚ್ಚಿ ಲಕ್ಷಾಂತರ ಉದ್ಯೋಗಗಳ ನಾಶ - ತುರ್ತು ಪರಿಹಾರವನ್ನು ಪೂರ್ಣವಾಗಿ ನಿರ್ಲಕ್ಷಿಸಿದ್ದಕ್ಕೆ ಬುಶ್ ತೀವ್ರ ಟೀಕೆಗೊಳಗಾಗಿದ್ದಾರೆ. ಅಮೆರಿಕದ ಪಾರ್ಲಿಮೆಂಟು ಸಹ ಅವರ ಯೋಜನೆಯನ್ನು ಒಂದು ಬಾರಿ ತಿರಸ್ಕರಿಸಿತ್ತು. ಬುಶ್ ತಮ್ಮೆಲ್ಲಾ ಪ್ರಭಾವ (ಮತ್ತು ಕೊಳಕು ತಂತ್ರ) ಬಳಸಿ ಅದನ್ನು ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿಸಿದರು. ಆದ್ದರಿಂದಲೇ ಏಳುನೂರು ಶತಕೋಟಿ ಡಾಲರು ಈಗ ಬಹಳ 'ಕುಪ್ರಸಿದ್ಧ' ಸಂಖ್ಯೆ.

ಏಳುನೂರು ಶತಕೋಟಿ ಡಾಲರು ಅಂದರೆ ಎಷ್ಟು ಎಂದು ಊಹಿಸುವುದೂ ಕಷ್ಟ. ಅದರಲ್ಲಿ ಏನೆಲ್ಲಾ ಮಾಡಬಹುದು ಎಂದು ವಿವರಿಸಿದಾಗ ಮಾತ್ರ ಅದು ಎಷ್ಟು ಎಂದು ಊಹಿಸಬಹುದು. ಆರ್ಥಿಕ ತಿಮಿಂಗಿಲಗಳ ರಕ್ಷಣೆಗೆ ಬದಲಾಗಿ ಏನೇನನ್ನೂ ಮಾಡಬಹುದು ಎಂಬ ಬಗ್ಗೆ ವಿವರಣೆಯಿಂದ ಬುಶ್ ದಿವಾಳಿಕೋರ ನೀತಿಗೆ ಬದಲಿಗೆ ಪ್ರಚಾರ-ಪ್ರಕ್ಷೋಭೆ ಆರಂಭವಾಗಿದೆ.

ಇಂತಹ ಒಂದು 'ಬದಲಿ ಬೇಲ್ ಔಟ್ ಯೋಜನೆ' ಇಲ್ಲಿದೆ.

ಒಟ್ಟು 700 ಶತಕೋಟಿ ಡಾಲರುಗಳ ಬೇಲ್ ಔಟ್ ಬಜೆಟ್‌ನಲ್ಲಿ ಇವೆಲ್ಲಾ ಮಾಡಬಹುದು

- 38 ಶತ ಕೋಟಿ ಡಾಲರು (ಶ.ಕೋ.ಡಾ.)ಗಳಲ್ಲಿ ಈ ವರ್ಷ ಉದ್ಯೋಗ ಕಳೆದುಕೊಂಡ ಏಳು ಲಕ್ಷ ಅಮೆರಿಕನ್ನರಿಗೆ ತಲಾ 50 ಸಾವಿರ ಡಾಲರು ಕೊಡಬಹುದು
- 109 ಶ.ಕೋ.ಡಾ. ಗಳಲ್ಲಿ ಆರೋಗ್ಯ ವಿಮೆ ಇಲ್ಲದಿರುವ 4.6 ಕೋಟಿ ಅಮೆರಿಕನ್ನರಿಗೆ ಆರೋಗ್ಯ ಸೇವೆ ಒದಗಿಸಬಹುದು
- 36 ಶ.ಕೋ.ಡಾ. ಗಳಲ್ಲಿ ಅಮೆರಿಕದ 33 ಸಾವಿರ ದುಸ್ಥಿತಿಯಲ್ಲಿರುವ ಸ್ಕೂಲುಗಳನ್ನು ಪುನ: ಕಟ್ಟಬಹುದು
- 3 ಶ.ಕೋ.ಡಾ. ಗಳಲ್ಲಿ ಉದ್ಯೋಗ ಸ್ಥಳಗಳಲ್ಲಿ ಸುರಕ್ಷಿತತೆ 10 ಪಟ್ಟು ಹೆಚ್ಚಿಸಬಹುದು
- 138 ಶ.ಕೋ.ಡಾ. ಗಳಲ್ಲಿ ಅಮೆರಿಕದ 10 ಲಕ್ಷ ಮನೆ ಇಲ್ಲದವರಿಗೆ ಮನೆ ಕೊಡಬಹುದು
- 64 ಶ.ಕೋ.ಡಾ. ಗಳಲ್ಲಿ ಆಫ್ರಿಕಾದ ಪ್ರತಿಯೊಬ್ಬನಿಗೆ 10 ಪೌಂಡ್ ಅಕ್ಕಿ ಹಂಚಬಹುದು
- 74 ಶ.ಕೋ.ಡಾ. ಗಳಲ್ಲಿ 30 ಲಕ್ಷ ಕಾಲೇಜು ವಿದ್ಯಾರ್ಥಿಗಳಿಗೆ 4-ವರ್ಷಗಳ ಸ್ಕಾಲರ್ ಶಿಪ್ ಕೊಡಬಹುದು
- 5 ಶ.ಕೋ.ಡಾ. ಗಳಲ್ಲಿ ಬಡ ಮತ್ತು ಹಿರಿಯ ನಾಗರಿಕರಿಗೆ ಚಳಿಗಾಲದ ಹೀಟಿಂಗ್ ಬಿಲ್ ಸಬ್ಸಿಡಿಯನ್ನು ಇಮ್ಮಡಿ ಮಾಡಬಹುದು
- 49 ಶ.ಕೋ.ಡಾ. ಗಳಲ್ಲಿ ಬಜೆಟ್ ಕೊರತೆಯಿಂದ ತಮ್ಮ ಕಲ್ಯಾಣ ಯೋಜನೆಗಳಲ್ಲಿ ಕಡಿತ ಮಾಡಿರುವ 29 ರಾಜ್ಯಗಳ ಬಜೆಟ್ ಕೊರತೆ ಅಳಿಸಬಹುದು
- 162 ಶ.ಕೋ.ಡಾ. ಗಳಲ್ಲಿ ಅಮೆರಿಕದ ದುಸ್ಥಿತಿಯಲ್ಲಿರುವ 77 ಸಾವಿರ ಸೇತುವೆಗಳಲ್ಲಿ ಶೆ.90ನ್ನು ಸುಸ್ಥಿತಿಗೆ ಮರಳಿಸಬಹುದು ಮತ್ತು ಆ ಮೂಲಕ ಲಕ್ಷಾಂತರ ಉದ್ಯೋಗ ಸೃಷ್ಟಿಸಬಹುದು

ಈ ಕ್ರಮಗಳ ಅಮೆರಿಕದ ಹೆಚ್ಚಿನ ಜನವಿಭಾಗಗಳನ್ನು ಅವರ ದುಸ್ಥಿತಿಯಿಂದ 'ಬೇಲ್ ಔಟ್' ಮಾಡುವುದಲ್ಲದೆ ಆರ್ಥಿಕವನ್ನು ಪುನಶ್ಚೇತನಗೊಳಿಸುವುದು.

ಈ 700 ಶ.ಕೋ.ಡಾ. ಹಣ ಸಂಗ್ರಹಿಸಲು ಅಮೆರಿಕದ 30 ಲಕ್ಷ (ಶೇ.1) ಅತಿ ಶ್ರೀಮಂತರ ಮೇಲೆ ಒಂದು ಬಾರಿಯ ಶೇ. 0.2 ತೆರಿಗೆ ಹಾಕಿದರೂ ಸಾಕು.

■ ಶರತ್

ಬಾಗೇಪಲ್ಲಿಯಲ್ಲಿ ನಡೆಯುತ್ತಿರುವ ಕೃಷಿ ಕೂಲಿಕಾರರ 4ನೇ ರಾಜ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ಆ ವರ್ಗದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯತ್ತ ಒಂದು ನೋಟ



ಸಮಾಜ, ಸರ್ಕಾರಗಳಿಂದ ಕಡೆಗಣಿಸಲ್ಪಟ್ಟ

ಕೃಷಿ ಕೂಲಿಕಾರರು

ನಿತ್ಯಾನಂದಸ್ವಾಮಿ

ಅವರು ಯಾರು? ಅವರು ಕೂಲಿ ಮಾಡೋರು, ಹಮಾಲಿ ಮಾಡೋರು, ಅವರು ಬದುಕಿದ್ರೇನು-ಸತ್ರೇನು? ಅವರೂ ಊಟ ಮಾಡ್ಬೇಕಾ? ಅವರೂ ಬಟ್ಟೆ ತೊಡ್ಬೇಕಾ? ಅವರಿಗೂ ಮನೆ ಇರ್ಬೇಕಾ? ಅವರ ಮಕ್ಳೂ ಶಾಲೆ ಕಲಿಬೇಕಾ?

'ಕಾಯಕವೇ ಕೈಲಾಸ' ಎಂದು ಘೋಷಿಸಿಕೊಂಡಿರುವ ಈ ನಾಡಿನಲ್ಲಿ ಕಾಯಕ ಜೀವಿಗಳಾದ ಇವರು ಸಮಾಜದ ಕಟ್ಟಕಡೆಯವರು. ಅವರು 'ರಟ್ಟೆಯ ಬಿಟ್ಟರೆ ಬೇರೆ ಆಸ್ತಿ ಇಲ್ಲ'ದವರು. ದಿನದ ಊಟಕ್ಕಾಗಿ ದೇಹದಲ್ಲಿರುವ ಶಕ್ತಿಯನ್ನೇ ಮಾರಾಟ ಮಾಡುವವರು ಮತ್ತು ಇದಕ್ಕಾಗಿ ಊರೂರು ತಿರುಗುವವರು ಸಮಾಜ ಇವರನ್ನು ಕೆಳಜಾತಿಯವರೆಂದು, ಅಸ್ಪೃಶ್ಯರೆಂದು ಬೊಟ್ಟು ಮಾಡುತ್ತಾ ಪಶುಗಳಿಗಿಂತ ಕೀಳಾಗಿ ಕಾಣುತ್ತಾ ಬಂದಿದೆ. ಹಣ ಬಲ, ಜಾತಿ ಬಲ ಇಲ್ಲದ ಈ ಜನಗಳಿಗೆ ಕನಿಷ್ಠ ಕಾನೂನು ಬಲವನ್ನು ಒದಗಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಇದುವರೆಗೂ ಸಾಧ್ಯವಾಗಿಲ್ಲ. ಕರ್ನಾಟಕದ ಒಟ್ಟು ಜನಸಂಖ್ಯೆಯ ಶೇ.25 ರಷ್ಟಿರುವ ಈ ಸಮುದಾಯದ ಬದುಕು ಹಸನಾಗದೆ ಕರ್ನಾಟಕಕ್ಕೆ ಅಂಟಿಕೊಂಡಿರುವ 'ಹಿಂದುಳಿಯುವಿಕೆ'ಯ ಶಾಪ ತೊಲಗದು.

ಕೂಲಿಕಾರರು ಸೋಮಾರಿಗಳೇ?

ಹಳ್ಳಿಗಳಲ್ಲಿ ಇಂದು ಕೃಷಿ ಕೆಲಸಗಳಿಗೆ ಕೃಷಿಕೂಲಿಕಾರರೇ ಸಿಗುವುದಿಲ್ಲ ಎಂಬ ಮಾತು ಎಲ್ಲ ಕಡೆ ಕೇಳಿ ಬರುತ್ತಿದೆ. ಕೂಲಿಕಾರರು ಈಗ ಸೋಮಾರಿಗಳಾಗಿದ್ದಾರೆ ಎಂಬ ಆರೋಪವನ್ನೂ ಮಾಡಲಾಗುತ್ತಿದೆ. ಈ ಆರೋಪ, ಆಕ್ಷೇಪಗಳು ಏಕಪಕ್ಷೀಯವಾಗಿವೆ. ಇಂದು ಬಿತ್ತುವುದು, ನಾಟಿ ಮಾಡುವುದು, ಕಳೆ ಕೀಳುವುದು, ಗೊಬ್ಬರ ಹಾಕುವುದ, ಕ್ರಿಮಿನಾಶಕ ಸಿಂಪಡಿಸುವುದು, ಕಟಾವು ಮಾಡುವುದು ಮೊದಲಾದ ಕೃಷಿ ಕೆಲಸಗಳಿಗೆ ಕೃಷಿ ಕೂಲಿಕಾರರು ಲಭ್ಯವಾಗದಿರುವುದು ಕೃಷಿ ರಂಗದ ಬಿಕ್ಕಟ್ಟಿನ ಭಾಗವೇ ಆಗಿದೆ.



ಕಳೆದ ಸುಮಾರು 2 ದಶಕಗಳಿಂದ ನಮ್ಮ ದೇಶದ ಕೃಷಿ ರಂಗಕ್ಕೆ ಆವರಿಸಿಕೊಂಡಿರುವ, ಹಿಂದೆಂದೂ ಕಂಡರಿಯದ ಬಿಕ್ಕಟ್ಟು ಈ ಅವಧಿಯಲ್ಲಿ ಯಾವುದೇ ಪರಿಹಾರ ಕಾಣದೆ ಮತ್ತಷ್ಟು ಆಳವಾಗುತ್ತಾ ಹೋಗುತ್ತಿರುವುದನ್ನು ಕಾಣುತ್ತಿದ್ದೇವೆ. 1997ರಿಂದ 2006ರ ನಡುವಿನ ಅವಧಿಯಲ್ಲಿ ದೇಶದಲ್ಲಿ 1,66,304 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದನ್ನು ಗಮನಿಸಿದಾಗ ನಮ್ಮ ಕೃಷಿರಂಗ ಎದುರಿಸುತ್ತಿರುವ ಬಿಕ್ಕಟ್ಟು ಎಷ್ಟು ಭೀಕರವಾಗಿದೆ ಎಂದು ಅರ್ಥವಾಗುತ್ತದೆ.

ಕರ್ನಾಟಕದಲ್ಲಿಯೂ ಈ ಅವಧಿಯಲ್ಲಿ 20 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರ ಆತ್ಮಹತ್ಯೆಗಳು ಹೆಚ್ಚುತ್ತಿರುವ ಮಹಾರಾಷ್ಟ್ರ, ಮಧ್ಯಪ್ರದೇಶ, ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಕರ್ನಾಟಕ 3ನೇ ಸ್ಥಾನದಲ್ಲಿದೆ.

ಈ ಅಂಕಿ ಅಂಶಗಳ ಜೊತೆಯಲ್ಲಿ ಗಮನಿಸಬೇಕಾದ ಇನ್ನೊಂದು ಅಂಕಿ ಅಂಶವೇನೆಂದರೆ, ಕಳೆದ ಹತ್ತು ವರ್ಷಗಳಲ್ಲಿ, ಪ್ರತಿವರ್ಷ ಸರಾಸರಿ 33 ಲಕ್ಷ ರೈತರು ತಮ್ಮ ಕೃಷಿ ಭೂಮಿಯನ್ನು ಮಾರಿಕೊಂಡು ನಿರ್ಗತಿಕರಾಗುತ್ತಿದ್ದಾರೆ. ನಮ್ಮ ದೇಶದ ರೈತರಲ್ಲಿ ಶೇ.60 ರಷ್ಟು ಜನ ಒಂದು ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಹೊಂದಿದವರಾಗಿದ್ದಾರೆ. ಕರ್ನಾಟಕದ 71 ಲಕ್ಷ ಭೂ ಹಿಡುವಳಿದಾರರ ಪೈಕಿ 33 ಲಕ್ಷ ಹಿಡುವಳಿದಾರರು ಒಂದು ಎಕರೆ ಕಡಿಮೆ ಭೂಮಿ ಹೊಂದಿದವರು. ಇವರೇ ಭೂಮಿ ಕಳೆದುಕೊಂಡು ಬೀದಿ ಪಾಲಾಗುತ್ತಿರುವ ರೈತರು. ದೇಶದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಇಂದು ತಮ್ಮ ಭೂಮಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇನ್ನೂ ಮಧ್ಯಮ ಮತ್ತು ದೊಡ್ಡ ರೈತರೂ ಸಹ ತಮ್ಮ ಭೂಮಿಯನ್ನು ಇಡಿಯಾಗಿ ಕೃಷಿಗೆ ಒಳಪಡಿಸುತ್ತಿಲ್ಲ. ಬಹಳಷ್ಟು ಭೂಮಿಯನ್ನು ಅವರು ಬೀಳು ಬಿಡುತ್ತಿದ್ದಾರೆ. ಕೃಷಿಗೆ ತೊಡಗಿಸಿದ ಹಣ ಮರಳಿ ಬರದಿರುವುದೇ ಇದಕ್ಕೆ ಕಾರಣವಾಗಿದೆ. ಕೃಷಿ ಎಂಬುದು ಇಂದು ಲಾಭದಾಯಕ ಉದ್ಯೋಗವಾಗಿ ಉಳಿದಿಲ್ಲ. ಕೃಷಿ ಖರ್ಚು ವೆಚ್ಚಗಳು ಸಿಕ್ಕಾಪಟ್ಟೆ ಹೆಚ್ಚಾಗಿವೆ. ಬೀಜ, ಗೊಬ್ಬರ, ಕ್ರಿಮಿನಾಶಕಗಳಿಗೆ ಸಿಗುತ್ತಿದ್ದ ಸಬ್ಸಿಡಿಗಳು ನಿಂತುಹೋಗಿವೆ. ರಿಯಾಯ್ತಿ ಬಡ್ಡಿದರಗಳಲ್ಲಿ ಸಾಂಸ್ಥಿಕ ಸಾಲ ಸಿಗದಂತಾಗಿದೆ. ದುಬಾರಿ ಬಡ್ಡಿದರಗಳಲ್ಲಿ ಖಾಸಗಿ ಸಾಲ ಮಾಡಿ ಬೆಳೆದ ಪೈರು ನೈಸರ್ಗಿಕ ವಿಕೋಪಕ್ಕೆ ಬಲಿಯಾಗಿ ರೈತ ಹಾನಿಗೊಳಗಾದಾಗ ಸರಿಯಾದ ಪರಿಹಾರವೂ ದೊರೆಯುವುದಿಲ್ಲ. ಸಾಲ ಸೋಲ ಮಾಡಿ ಬೆಳೆದ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಯೋಗ್ಯ ಬೆಲೆಯೂ ಸಿಗುವುದಿಲ್ಲ. ಮಾಡಿದ ಸಾಲವನ್ನು ಹಿಂತಿರುಗಿಸಲು ರೈತ ತನ್ನ ಭೂಮಿಯನ್ನೇ ಮಾರಾಟ ಮಾಡುವ ಬಲವಂತಕ್ಕೆ ಒಳಗಾಗುತ್ತಾನೆ ಇಲ್ಲವೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ದೇಶದ ಕೃಷಿ ರಂಗದ ಚರಿತ್ರೆಯಲ್ಲೇ ಅತ್ಯಂತ ಭೀಕರವಾಗಿರುವ ಈ ಬಿಕ್ಕಟ್ಟಿನಿಂದ ಅತಿ ಹೆಚ್ಚು ಸಂಕಷ್ಟಕ್ಕೀಡಾದವರು ಸಣ್ಣ ರೈತರು ಮತ್ತು ಕೃಷಿ ಕೂಲಿಕಾರರು. ಕಳೆದ 10 ವರ್ಷಗಳ ಅವಧಿಯಲ್ಲಿ ದೇಶದ ಬೇರೆ ಬೇರೆ ಭಾಗಗಳಲ್ಲಿ 20 ಸಾವಿರಕ್ಕೂ ಹೆಚ್ಚು ಹಸಿವಿನ ಸಾವುಗಳು ಸಂಭವಿಸಿವೆ. ಊಟಕ್ಕಿಲ್ಲದೆ ಸತ್ತವರು ಅಥವಾ ಹಸಿವು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ಈ ಜನ ಬಹುತೇಕವಾಗಿ ಬಡ ರೈತರು ಹಾಗೂ ಭೂ ಹೀನ ಕೃಷಿ ಕೂಲಿಕಾರರು ಕರ್ನಾಟಕದಲ್ಲಿ ಹಸಿವಿನ ಸಾವುಗಳು ವರದಿಯಾಗಿವೆ.

ಬೆಲೆ ಏರಿಕೆಯ ಹೊರೆ

ಅಗತ್ಯ ವಸ್ತುಗಳ ಬೆಲೆ ಏರಿಕೆ ಕೃಷಿ ಕೂಲಿಕಾರರ ಬದುಕನ್ನು ಕಿತ್ತು ತಿನ್ನುತ್ತಿದೆ. ಕಳೆದ ನಾಲ್ಕೈದು ವರ್ಷಗಳಿಂದ ಏರುತ್ತಾ ಬಂದಿರುವ ಬೆಲೆಗಳು ಈಗ ಗಗನಕ್ಕೆ ಮುಟ್ಟಿವೆ. ಎಲ್ಲವನ್ನು ಕೊಂಡುಕೊಂಡೇ ಜೀವನ ಸಾಗಿಸಬೇಕಾಗಿರುವ ಕೂಲಿಕಾರರು ಬೆಲೆ ಏರಿಕೆಯಿಂದಾಗಿ ಅತಿ ಹೆಚ್ಚು ಸಂಕಷ್ಟಕ್ಕೀಡಾಗಿದ್ದಾರೆ. ಹೊಟ್ಟೆ ಬಟ್ಟೆಗಳ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದೇ ಅವರಿಗೆ ಅಸಾಧ್ಯವಾಗಿದೆ. ರೈತರಿಗೆ ಹೇಗೆ ಕೃಷಿ ಖರ್ಚು ವೆಚ್ಚಗಳು ಹೆಚ್ಚಾಗಿವೆಯೋ ಹಾಗೆಯೇ ಕೂಲಿಕಾರರಿಗೆ ಜೀವನ ನಿರ್ವಹಣಾ ವೆಚ್ಚಗಳು ದುಬಾರಿಯಾಗಿವೆ. ಆರ್ಥಿಕ ಅಡಚಣೆ ಎದುರಾದಾಗ ಕೂಲಿಕಾರರಿಗೆ ಯಾರೂ ಸಾಲ ಕೊಡಲೂ ಸಹ ಮುಂದೆ ಬರುವುದಿಲ್ಲ. ಕೂಲಿಕಾರರಿಗೆ ವರ್ಷವಿಡೀ ಕೆಲಸ ಒದಗಿಸಲು ರೈತರಿಗೂ ಸಾಧ್ಯವಾಗುವುದಿಲ್ಲ. ಕೆಲಸ ಒದಗಿಸಿದಾಗಲೂ ಕೂಲಿಕಾರರಿಗೆ ಇಂದಿನ ಬೆಲೆ ಏರಿಕೆಗೆ ಅನುಗುಣವಾಗಿ ಹೆಚ್ಚಿಗೆ ಕೂಲಿ (ಮಜೂರಿ) ನೀಡುವುದೂ ರೈತರಿಗೆ ಸಾಧ್ಯವಾಗುವುದಿಲ್ಲ. ಹೀಗೆ ಕೂಲಿಕಾರರು ಅನಿವಾರ್ಯವಾಗಿ ತಮ್ಮ ಗ್ರಾಮಗಳಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ನಗರಗಳ ಆಸುಪಾಸಿನಲ್ಲಿರುವ ಗ್ರಾಮಗಳಿಂದ ಪ್ರತಿದಿನ ಬೆಳಗ್ಗೆ ನಗರಗಳಿಗೆ ಹೋಗಿ ನಿರ್ದಿಷ್ಟ ಗಂಟೆಗಳ ಕಾಲ ಅಲ್ಲಿ ಕೆಲಸ ಮಾಡಿ ಸಂಜೆಗೆ ತಮ್ಮ ಗ್ರಾಮಗಳಿಗೆ ವಾಪಸ್ ಬರುವವರ ಸಂಖ್ಯೆಯೂ ಗಣನೀಯವಾಗಿದೆ. ಬಸ್‌ಪಾಸ್, ರೈಲ್ವೆ ಪಾಸ್ ಮಾಡಿಸಿಕೊಂಡು ನಗರಗಳಿಗೆ ಹೋಗುವ ಈ ಕೂಲಿಕಾರರು ಅಲ್ಲಿ ಎಲ್ಲ ರೀತಿಯ ಕೂಲಿ ಕೆಲಸ, ಕಟ್ಟಡ ಕೆಲಸ, ರಸ್ತೆ ಕೆಲಸ ಮಾಡಿಕೊಂಡು ದಿನಕ್ಕೆ ರೂ.100 ರಿಂದ 150ರವರೆಗೂ ಸಂಪಾದಿಸುತ್ತಾರೆ.



ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿ ರೈತರಿಗೆ ಅನುಭವ ಇರುವ ಕೃಷಿ ಕಾರ್ಮಿಕರ ಕೊರತೆ ಅನುಭವಕ್ಕೆ ಬರತೊಡಗಿದೆ. ರೈತರೂ ಕೂಲಿಕಾರರಿಗೆ ಬೆಲೆ ಏರಿಕೆಯನ್ನು ಸರಿದೂಗಿಸಲು ಸಾಧ್ಯವಾಗುವಂತೆ ಕೂಲಿಯನ್ನು ಹೆಚ್ಚಿಸಲು ಸಾಧ್ಯವಾದರೆ, ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಕೂಲಿಕಾರರಿಗೆ ಸಾಲವನ್ನು ಒದಗಿಸಲು ಸಾಧ್ಯವಾದರೆ, ತನ್ನ ಫಸಲಿಗೆ ಒಳ್ಳೆಯ ಬೆಲೆ ಸಿಕ್ಕಾಗ ಕೂಲಿಕಾರರಿಗೆ ಬೋನಸ್ ನೀಡಲು ಸಾಧ್ಯವಾದರೆ ಕೂಲಿಕಾರರು ಕೃಷಿ ಕೆಲಸಗಳನ್ನು ಬಿಟ್ಟು ನಗರಗಳಿಗೆ ಹೋಗುವ ಪರಿಸ್ಥಿತಿ ಇರುತ್ತಿರಲಿಲ್ಲ. ಆದರೆ ಕೃಷಿ ಬಿಕ್ಕಟ್ಟಿನ ವಿಷ ವರ್ತುಲದಲ್ಲಿ ಸಿಕ್ಕಿಹಾಕಿಕೊಂಡಿರುವ ರೈತರಿಗೆ ಇಂದು ಕೂಲಿಕಾರರ ನ್ಯಾಯಬದ್ಧವಾದ ನಿರೀಕ್ಷೆಗಳನ್ನು ಪೂರೈಸಲು ಸಾಧ್ಯವಾಗದಂತಾಗಿದೆ.

ದೇಶದಲ್ಲಿಂದು ಹಣದುಬ್ಬರ ಶೇ.12 ರಷ್ಟು ದಾಟಿದೆ. ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ಕಂಡರಿಯದ ಬೆಲೆ ಏರಿಕೆಯನ್ನು ನಾವಿಂದು ಕಾಣುತ್ತಿದ್ದೇವೆ. ಉತ್ತರ ಕರ್ನಾಟಕದ ರೈತ ಹಾಗೂ ಕೃಷಿ ಕೂಲಿಕಾರರ ಮುಖ್ಯ ಆಹಾರ ಆಗಿರುವ ಜೋಳದ ದರ ಕೆ.ಜಿ.ಗೆ 10-11ರೂ. ಇದ್ದದ್ದು 20-22ರೂ. ಆಗಿದ್ದು ಇದೇ ಅವಧಿಯಲ್ಲಿ.


ನಮ್ಮ ದೇಶದಲ್ಲಿ ವಿಮಾನ ಪ್ರಯಾಣ, ಕಾರು, ಟಿ.ವಿ. ಸೆಲ್‌ಫೋನ್, ಕಂಪ್ಯೂಟರ್‌ಗಳ ಬೆಲೆಗಳು ಕಡಿಮೆಯಾಗುತ್ತಿವೆ. ಆದರೆ ದಿನಬಳಕೆಯ ವಸ್ತುಗಳ, ಆಹಾರಧಾನ್ಯಗಳು, ದಿನಸಿ ಸಾಂಬಾರು ಪದಾರ್ಥಗಳ ಬೆಲೆಗಳು ಗಗನಕ್ಕೇರುತ್ತಿವೆ. ಅಗತ್ಯ ವಸ್ತುಗಳನ್ನು ಕೈಗೆ ಸಿಲುಕದಂತೆ ಮಾಡುತ್ತಿರುವ ಈ ಬೆಲೆ ಏರಿಕೆಯಿಂದ ಅತಿ ಹೆಚ್ಚು ಬಾಧೆಗೊಳಗಾಗುತ್ತಿರುವವರು ಖಚಿತ ಆದಾಯವಿಲ್ಲದ ಕೃಷಿ ಕೂಲಿಕಾರರು ಮತ್ತು ಅಸಂಘಟಿತ ವಲಯದ ಕಾರ್ಮಿಕರು.


ನೈಜ ಕೂಲಿಯ ಕುಸಿತ

ಅಗತ್ಯ ವಸ್ತುಗಳ ಬೆಲೆಗಳು ಏರುತ್ತಲೇ ಇರುತ್ತವೆ. ಆದರೆ ಕೃಷಿ ಕೂಲಿಕಾರರ ಕೂಲಿ (ಮಜೂರಿ) ಮಾತ್ರ ಬೆಲೆ ಏರಿಕೆಗೆ ಅನುಗುಣವಾಗಿ ಏರುವುದಿಲ್ಲ. ಬೆಲೆ ಏರಿಕೆಯನ್ನು ಸರಿದೂಗಲು ತುಟ್ಟಿಭತ್ಯೆಯಂತಹ ಸೌಲಭ್ಯ ಅವರಿಗೆ ಸಿಗುವುದಿಲ್ಲ. ಸರ್ಕಾರ ಕೃಷಿ ಕೂಲಿಕಾರರಿಗಾಗಿ ನಿಗದಿಪಡಿಸುವ ಕನಿಷ್ಠ ಕೂಲಿಯಲ್ಲಿ ತುಟ್ಟಿಭತ್ಯೆಯೂ ಸೇರಿರುತ್ತದೆ ಎಂಬುದು ನಿಜವಾದರೂ ಸರ್ಕಾರ

ಪುಟ 13 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ
ನವೆಂಬರ್ 09, 2008





ಸಾಮ್ರಾಜ್ಯಶಾಹಿ ಮತ್ತುಕೋಮುವಾದ ನೀತಿಗಳು ಸಾಂಸ್ಕೃತಿಕ ಸೆರಗಿಡಿದು ಜನರ ಬದುಕಿನೊಳಗೆ ನುಗ್ಗುತ್ತಿವೆ. ಆರ್ಥಿಕ ಬಿಕ್ಕಟ್ಟಿನ ಧಾಳಿಗೆ ಸಡ್ಡು ಹೊಡೆದು ಸಮರ-ಧೀರ ಚಳುವಳಿ ಕಟ್ಟುವುದರಿಂದ ದಿಕ್ ತಪ್ಪಿಸಲು ಭಾವನಾತ್ಮಕ ಹುನ್ನಾರಗಳು ಕಾರ್ಯಪ್ರವೃತ್ತವಾಗಿದೆ.

'ಎಲ್ರಿಗೂ ಹೇಳ್ರಿ ಸೌಹಾರ್ದ ದೀಪಾವಳಿ ಆಚರಿಸೋಣ'

ರೈತರ ಆತ್ಮಹತ್ಯೆಯು ಸರಣಿ ಮುಂದುವರಿದಂತೆ ನನ್ನ ಜಗಳ ಸಮುದಾಯ, ಸಂಗಾತಿಗಳೊಂದಿಗೂ ಮುಂದುವರೆದಿತ್ತು. ಆತ್ಮಹತ್ಯೆಯಲ್ಲ ಸಂಘರ್ಷ ಎಂಬ ಘೋಷಣೆ ಹೊತ್ತು ಬೀದಿ ನಾಟಕದೊಂದಿಗೆ ಗ್ರಾಮಗಳಿಗೆ ನುಗ್ಗುವ ಕೆಲಸ ಸಾಂಸ್ಕೃತಿಕ ಸಂಘಟನೆಗಳದ್ದೇ ತಾನೆ. ತನ್ಮೂಲಕ ನೇಗಿಲಯೋಗಿ ಕಾಯಕಜೀವಿಯ ಬದುಕಿಗೊಂದು ಭರವಸೆಯ ಕಿರಣ ಬೆಳಗಿದಂತಲ್ಲವೇ? ಕಾಲದ ಕರೆಗೆ ಓಗೊಟ್ಟು ಜನತೆ ಕೊಟ್ಟ ಅರಿವಿನ ನೀರು ಪುನ: ಕೆರೆಗೇ ಎರೆಯಬೇಕಾದದ್ದು ಪ್ರಜ್ಞಾವಂತರೆಲ್ಲರ ಹೊಣೆ. ಸಾಮ್ರಾಜ್ಯಶಾಹಿ ಮತ್ತುಕೋಮುವಾದ ನೀತಿಗಳು ಸಾಂಸ್ಕೃತಿಕ ಸೆರಗಿಡಿದು ಜನರ ಬದುಕಿನೊಳಗೆ ನುಗ್ಗುತ್ತಿವೆ. ಆರ್ಥಿಕ ಬಿಕ್ಕಟ್ಟಿನ ಧಾಳಿಗೆ ಸಡ್ಡು ಹೊಡೆದು ಸಮರ-ಧೀರ ಚಳುವಳಿ ಕಟ್ಟುವುದರಿಂದ ದಿಕ್ ತಪ್ಪಿಸಲು ಭಾವನಾತ್ಮಕ ಹುನ್ನಾರಗಳು ಕಾರ್ಯಪ್ರವೃತ್ತವಾಗಿದೆ. ಮನ-ಮನೆಗಳಲ್ಲಿ ದಿನ ಬದುಕಿನಲ್ಲಿ ಕುತಂತ್ರದ ಸುಳಿಗಳು ಒಳನುಸುಳಿವೆ. ಜನಮಾನಸದ ಧೀಶಕ್ತಿಯನ್ನು ಕುಗ್ಗಿಸುತ್ತಿವೆ. ಇದಕ್ಕೆ ಎದುರಾಗಿ ಜನಸಮೂಹವನ್ನು ಹೋರಾಟದ ಪ್ರವೃತ್ತಿಯತ್ತ ಎಳೆ ತರಬೇಕಾದ, ಮನನ ಮಾಡಿಸಬೇಕಾದ ಜವಾಬ್ದಾರಿ ಸಾಂಸ್ಕೃತಿ ಸಂಘಟನೆಗಳು ಹೆಚ್ಚು ಸಮರ್ಥವಾಗಿ ನಿಭಾಯಿಸಬಲ್ಲವು.

ಸೌಹಾರ್ದತೆಯತ್ತ ಹಬ್ಬ


ಅದರಲ್ಲೂ ಮುಖ್ಯವಾಗಿ ಕೋಮುವಾದಿಗಳು ಎಲ್ಲ ರೀತಿಯ ಕ್ರೌರ್ಯ ಮೆರೆಯುತ್ತಿರುವ ಈ ಸಂದರ್ಭದಲ್ಲಿ ಸಮುದಾಯ ಸಂಗಾತಿಗಳ ಹೆಗಲ ಮೇಲಿನ ಹೊಣೆ ಹೆಚ್ಚಿದೆ. ತುಂಬ ಖುಷಿಯಾಗುವ ಸಂಗತಿಯೆಂದರೆ ಸಮುದಾಯ ಈ ಬಾರಿ ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯ ಯೋಜನೆಗಳು ಹೊಂದಿರುವುದು. ಪ್ರಸಕ್ತ ವಿದ್ಯಮಾನಗಳಿಗೆ ಸ್ಪಂದಿಸುತ್ತಿರುವುದು, ಕೋಮುವಾದ-ಮೂಲಭೂತವಾದದ ಕರಾಳ ಮುಖ ಬಯಲುಗೊಳಿಸಲು ಹಾಡು-ನಾಟಕ-ವಿಚಾರಸಂಕಿರಣ ಅಂತೆಲ್ಲ ಬಹು ಆಯಾಮದ ಕಾರ್ಯಕ್ರಮಗಳನ್ನು ಸಂಘಟಿಸುವುದರೊಂದಿಗೆ ಸೌಹಾರ್ದ ಹಬ್ಬಗಳ ಆಚರಣೆಗೂ ಕರೆಕೊಟ್ಟಿರುವುದೊಂದು ವಿಶೇಷ.

ಖುಷಿಯಿಂದ ಹೂಂಗುಟ್ಟಿದೆ

ಸಮುದಾಯದ ಶ್ರೀಶೈಲ ದೂರವಾಣಿಯಿಂದ ಮಾತಾಡಿದರು. "ಸೌಹಾರ್ದ ದೀಪಾವಳಿ ಆಚರಿಸೋಣ. ಎಲ್ರಿಗ್ಣೂ ಹೇಳ್ರಿ" ಖುಷಿಯಿಂದ ಹುಂಗುಟ್ಟಿದೆ. ಸಿಸ್ಟರ್ ಲಿಂಡಾ ಮತ್ತು ಫಾದರ್ ವಿಕ್ಟರ್ ತಮ್ಮ ಚರ್ಚಿನ ಗೋಡೆಗಳುದ್ದಕ್ಕೂ ದೀಪ ಬೆಳಗಿಸಿ ನಮ್ಮೊಂದಿಗೆ ರಸ್ತೆಗಿಳಿದರು. ಮೆಹೆರಾಜ ಮತ್ತು ಗೌಸ್‌ಭಾಯಿ ತಲೆಗೆ ಟೋಪಿಯಿಟ್ಟು ಕೈಯಲ್ಲಿ ಪಣತಿ ಹಿಡಿದರು. ಜೈನ್ ಸಮುದಾಯದ ಸೋದರ ಶಾ ಅವರೂ ನಗುತ ಪಾಲ್ಗೊಂಡರು. ನೌಕರ ಒಕ್ಕೂಟದ ಪ್ರಕಾಶ, ಶರಣಗೌಡ, ಅಣ್ಣಾರಾಯ, ಕೋದಂಡರಾಮ ಪಣತಿಗೆ ಬತ್ತಿಯಿಟ್ಟು ದೀಪ ಹೊತ್ತಿಸಿ ಶುಭ ಕೋರಿದರು. ಚಂದಮ್ಮಯಲ್ಲಮ್ಮದೀಪವನ್ನು ಸಿಸ್ಟರ್ ಲಿಂಡಾ ಕೈಗಿತ್ತರು. ಶಂಕ್ರಯ್ಯ, ಅಶೋಕ ಸಿಹಿ ಹಂಚುತ ಸಂಭ್ರಮಿಸಿದರು. ಕೆ.ಲಿಂಗಪ್ಪ ಒಂದು ಸೌಹಾರ್ದ ಹಾಡಿಗೆ ನೆನಪು ಮಾಡಿದರು. ಚೇತನ, ಭಾವನಾ, ಅಮೃತ, ಇಂದುಮತಿ, ಭುವನೇಶ್ವರಿ, ಶಾಂತಾ ತಮ್ಮ ಮನೆಯಲ್ಲಿ ಬೆಳಕ ಹಬ್ಬ ಆಚರಿಸಿದಂತೇ ಉಲ್ಲಾಸದಿಂದ ಪಾಲ್ಗೊಂಡರು. ಕೈಯಿಂದ ಕೈಗೆ ಬೆಳಕ ದೀಪಗಳು ಓಡಾಡಿದವು. ಟಿ.ವಿ. ಗೆಳೆಯರು ಏನಿದರ ಮಹತ್ವ? ಪ್ರಶ್ನೆ ಕೇಳಿ ವಿಕ್ಟರ್‌ಗೆ ಮಾತಾಡೆಂದರು. "ಹಬ್ಬಗಳು ಜನ ಶಾಂತಿ-ನೆಮ್ಮದಿಗಾಗಿ ಆಚರಿಸುವಂತಾಗಬೇಕು. ಯಾವುದೇ ಧರ್ಮದ ಹಬ್ಬಗಳು ಹೀಗೆ ಎಲ್ಲರೂ ಒಟ್ಟಾಗಿ ಆಚರಿಸುವ ಮೂಲಕ ಮಾನವೀಯತೆಯ ಹೂ ಅರಳಿಸಿದಂತೆ ಈ ಬೆಳಕಿನ ಹಬ್ಬ ಕಾರ್ಗತ್ತಲು ಅಳಿಸಿ ಜ್ಞಾನಜ್ಯೋತಿ ಬೆಳಗುವಂತೆ ಮಾಡಲಿ..." ಎದೆ ತುಂಬಿ ಮಾತಾಡಿದರು.

"ಕೋಮುವಾದಿಗಳು ಹಬ್ಬಗಳನ್ನು ಮತ್ತಿತರ ಧಾರ್ಮಿಕ ಆಚರಣೆಗಳನ್ನು ದ್ವೇಷ ಸಂಸ್ಕೃತಿ ಬೆಳೆಸಲು ದುರ್ಬಳಕೆ ಮಾಡಿಕೊಳ್ಳುತ್ತಿವೆ. ಜನಪದರ ಜೀವಪರ ನಂಬಿಕೆಗಳಿಗೂ ಧಕ್ಕೆ ತರುವಂಥ ಅಪಾಯಕಾರಿ ಚಟುವಟಿಕೆ ಕೋಮುವಾದಿ ಮತ್ತು ಮೂಲಭೂತವಾದಿಗಳು ನಡೆಸುತ್ತಿದ್ದಾರೆ. ಎಲ್ಲ ಧರ್ಮ ಮತ್ತು ವಿಚಾರವಾದಿಗಳೆಲ್ಲ ಒಗ್ಗೂಡಿ ಸೌಹಾರ್ದ ದೀಪಾವಳಿ ಆಚರಿಸುತ್ತಿರುವುದರ ಉದ್ದೇಶವೇ ಭಾವೈಕ್ಯ ನಾಡು ಕಟ್ಟುವುದಾಗಿದೆ. ಸಾಮರಸ್ಯದ ಸಂಸ್ಕೃತಿ ಬೆಳೆಸುವುದಾಗಿದೆ" ಕಾಶಿನಾಥ ಅಂಬಲಗಿಯವರು ಅಕ್ಷರಶಃ ಮನದ ಮಾತನ್ನು ಭಾವುಕರಾಗಿ ಮಂಡಿಸಿದರು.

ದೀಪಾವಳಿ ಹಬ್ಬದಲ್ಲಿ ಮುಸ್ಲಿಂ ಬಂಧುಗಳು



ನಿಮ್ಮೆದೆಯಲ್ಲಿ ಬೆಳಕು ಮೂಡಲಿ

ನಾವು ಅಂಬೇಡ್ಕರ್ ಪುತ್ಥಳಿಯ ಮುಂದೆ ನಿಂತಿದ್ದೆವು. ಎಲ್ಲ ಸಮುದಾಯದ ಜನ ಒಟ್ಟಾಗಿ ಬೆಳಕ ಹಣತೆ ಎತ್ತಿ ಹಿಡಿದಿದ್ದರು. "ಜಾತ್ಯಾತೀತತೆ ಮತ್ತು ಪರಧರ್ಮ ಸಹಿಷ್ಣುತೆ ನಮ್ಮ ಸಂವಿಧಾನ ಮೂಲ ಅಡಿಪಾಯ. ಇದಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳಿ" ಎಂದೆಚ್ಚರಿಸುವಂತೆ ಅಂಬೇಡ್ಕರ್ ನಿಂತಿರುವರೇ? ಹೌದು. ಆ ಮುಖದ ಭಾವ ಹಾಗೇ ಇತ್ತು. ಪಕ್ಕದಲ್ಲಿರುವ ಬಸವಣ್ಣದ ಮೂರ್ತಿಯತ್ತ ಹೊರಳಿದೆವು. "ವರ್ಗ, ವರ್ಣ, ಲಿಂಗ ಮತ್ತು ಜಾತಿ ತಾರತಮ್ಯ ವ್ಯವಸ್ಥೆ ಮುರಿದು ಶೋಷಣಾರಹಿತ ಸಮಾಜ ಕಟ್ಟುವ ಬೆಳಕ ಹೊತ್ತಿಸಿ." ಬಸವಣ್ಣದ ಪ್ರಶಾಂತ ಕಂಗಳ ಭಾಷೆಯಾಗಿತ್ತು. ಅರೆಬಿರಿದ ಕಂಗಳ ಬುದ್ಧನ ಮುಂದೆಯೂ ಅಂಗೈಯಲ್ಲಿ ಬೆಳಕ್ಹಿಡಿದು ನಿಂತೆವು. "ಹಿಂದುತ್ವ ಹಿಮ್ಮೆಟ್ಟಿಸಿ, ಪ್ರಜ್ಞಾ, ಕರುಣೆ, ಶೀಲಗಳೆಂಬ ಬೆಳಕು ನಿಮ್ಮೆದೆಯಲ್ಲಿ ಮೊದಲ ಬೆಳಗಲಿ" ಬುದ್ಧನ ಶಾಂತವಾಣಿಯೊಂದು ತಂಗಾಳಿಯಲಿ ತೇಲಿ, ಬೆಳಕ ಪ್ರಭೆಗೆ ಮೆರುಗು ತಂದಿತು. ಸೌಹಾರ್ದ ಸಂಸ್ಕೃತಿ ಕಟ್ಟಿ ಬೆಳೆಸುವುದೊಂದು ಬುದ್ಧನಂಥ ತಪಸ್ಸು. ನಿರಂತರ ತಪಸ್ಸು. ಗುರುದ್ವಾರದತ್ತ ಹೆಜ್ಜೆ ಹಾಕುವಾಗಲೂ ಬುದ್ಧನ ಅರೆಬಿರಿದ ಕಂಗಳು ಕಾಡುತ್ತಲೇ ಇದ್ದವು. ಗುರುದ್ವಾರದಿಂದ ಸಿದ್ದಿಪಾಶಾದರ್ಗಾದತ್ತ ನಮ್ಮ ಪಯಣ. ಮುಸ್ಲಿಂ ಬಾಂಧವರು ಮುತುವರ್ಜಿಯಿಂದ ಬರಮಾಡಿಕೊಂಡರು. ಸಿಹಿ ತಿಂದು ಖುಷಿ ವ್ಯಕ್ತಪಡಿಸಿದರು. ಚರ್ಚಿನಲ್ಲಿ ವಿನೂತನ ಸ್ವಾಗತವಿತ್ತು. ಕಲ್ಬುರ್ಗಿಯ ಸೌಹಾರ್ದ ಕೊಂಡಿಯಾದ ಶರಣಬಸಪ್ಪ ಗುಡಿಗೆ ಬಂದೆವು. ಭಕ್ತಾದಿಗಳು ಸೌಹಾರ್ದ ದೀಪಾವಳಿ ಆಚರಣೆಯ ವೈಖರಿಗೆ ಬೆರಗಾದರು. ಹೌದು, ಹೀಗಾಗಬೇಕು. ನಮಗೂ ಹೇಳ್ರಿ ಅಂದರು. ಅಲ್ಲೊಂದು ಹಾಡು "ಜ್ಯೋತಿ ಬೆಳಗುತದೋ ಜಗಾಜಗ" ಪುಟ್ಟ ಭಾಷಣ. ಶರಣದ ಅಂಗಳದ ತುಂಬ ಬೆಳಕಿತ್ತು. ಈ ಅಂಗಳದ ಬೆಳಕಲ್ಲೇ ದರ್ಗಾ ಉರುಸಿಗೆ ಗಂಧ ಹೋಗುತ್ತದೆ. ದರ್ಗಾದಿಂದ ನೈವೇದ್ಯ ಗಾಡಿಗೆ ಬರುತ್ತದೆ. ಈ ಸೌಹಾರ್ದ ಪರಂಪರೆಯ ಮುಂದುವರಿಕೆಯಾಗಿ ನಮ್ಮೆಲ್ಲರ ಕೈಯಲ್ಲಿ ಜ್ಞಾನದ ಪಣತೆಯಿತ್ತು. ಆ ಬೆಳಕ ಪ್ರಭಾವಳಿಯಲ್ಲಿ ನಮ್ಮೆಲ್ಲರ ಹೃದಯ ತೊಳಗಿ ಬೆಳಗುತ್ತಿತ್ತು.

ಮೃತ ಹಮಾಲಿ ಕಾರ್ಮಿಕ ಕುಟುಂಬಕ್ಕೆ ಪರಿಹಾರ ಹಣ ವಿತರಣೆ

ಅಂಕೋಲ ತಾಲ್ಲೂಕಿನ ಬೇಲೇಕೇರಿ ಬಂದರು ಪ್ರದೇಶದಲ್ಲಿ ಅಪಘಾತದಲ್ಲಿ ಮೃತಪಟ್ಟ ಹಮಾಲಿ ಕಾರ್ಮಿಕ ಹೂವಪ್ಪ ಗೌಡನ ಕುಟುಂಬಕ್ಕೆ 75 ಸಾವಿರ ರೂ.ಗಳ ಧನಸಹಾಯವನ್ನು ಅಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿತರಿಸಲಾಯಿತು. ಬೇಲೇಕೇರಿ ಬಂದರು ಕಾರ್ಮಿಕರ ಸಂಘ ಪರಿಹಾರ ವಿತರಣಾ ಕಾರ್ಯಕ್ರಮವನ್ನು ಸೀಬರ್ಡ್ ಕಾಲೋನಿಯಲ್ಲಿ ಸಂಘಟಿಸಿತ್ತು.

ಭಾರತೀಯ ಜೀವ ವಿಮಾ ನಿಗಮದ ಜನಶ್ರೀ ಭೀಮಾ ಯೋಜನೆಯ ಅಡಿಯಲ್ಲಿ ಮಂಜೂರಾದ ಈ ಹಣವನ್ನು ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ (ಸಿಐಟಿಯು) ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ ಮೃತ ಕಾರ್ಮಿಕರ ಕುಟುಂಬಕ್ಕೆ ವಿತರಿಸಿದರು. ನಂತರ ಮಾತನಾಡಿ ಅವರು ರಾಜ್ಯದಲ್ಲಿ ನಿತ್ಯ ಕೂಲಿಗಾಗಿ ಕಷ್ಟಪಡುತ್ತಿರುವ ಐದು ಲಕ್ಷ ಹಮಾಲಿ ಕಾರ್ಮಿಕರಿಗಾಗಿಯೇ ರಾಜ್ಯ ಸರ್ಕಾರ ಪ್ರತ್ಯೇಕ ಕಲ್ಯಾಣ ಮಂಡಳಿ ರಚಿಸಬೇಕೆಂದು ಆಗ್ರಹಪಡಿಸಿದರು ಮತ್ತು ಹಮಾಲಿ ಕಾರ್ಮಿಕರು ಈ ಸಂಬಂಧ ಬಲವಾದ ಹೋರಾಟ ನಡೆಸಬೇಕು ಅದಕ್ಕಾಗಿ ಹಮಾಲಿ ಕಾರ್ಮಿಕರ ಸಂಘವನ್ನು ಬಲಪಡಿಸಬೇಕು ಎಂದು ಕರೆ ನೀಡಿದರು.

ಮುಖ್ಯಅತಿಥಿಗಳಾಗಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಮಾತನಾಡಿ ಬೇಲೇಕೇರಿ ಬಂದರು ಪ್ರದೇಶದಲ್ಲಿ ಸೀಬರ್ಡ್ ಕಾಲೋನಿಯಲ್ಲಿ ವಾಸವಿರುವ ಕುಟುಂಬಗಳು ಕುಡಿಯುವ ನೀರು, ಕೂಲಿ ಸಮಸ್ಯೆ ಎದುಸುತ್ತಿದ್ದಾರೆ. ಅಲ್ಲದೇ ಸೀಬರ್ಡ್‌ರವರು ಜನವಸತಿ ಪ್ರದೇಶಗಳಲ್ಲಿ ತಂತಿ ಬೇಲಿ ಹಾಕುತ್ತಿರುವುದರಿಂದ ಅವರ ನಿತ್ಯ ಬದುಕೇ ದುಸ್ತರವಾಗಿದೆ. ಈ ಬಗ್ಗೆ ಇಲ್ಲಿನ ನಾಗರೀಕರು ಎಚ್ಚೆತ್ತು ಜಿಲ್ಲಾಡಳಿತದ ಮೇಲೆ ಪರಿಹಾರಕ್ಕಾಗಿ ಒತ್ತಡ ಹಾಕಬೇಕಿದೆ ಎಂದರು. ಸಂಘದ ಕಾರ್ಯದರ್ಶಿ ನಾಗೇಶಗೌಡ ಮಾತನಾಡಿದರು. ಸಮಾರಂಭದಲ್ಲಿ ಶಿರಸಿ ಹಮಾಲಿ ಕಾರ್ಮಿಕ ಸಂಘದ ಕಾರ್ಯದರ್ಶಿ ವೆಂಕಟೇಶ ನಾಯ್ಕ, ಸಂಘದ ಅಧ್ಯಕ್ಷ ದಿನೇಶ್‌ಗೌಡ, ಸಂಘಟನಾ ಕಾರ್ಯದರ್ಶಿ ಹೂವಪ್ಪ ಗೌಡ, ಗಿರೀಶಗೌಡ, ಉಲ್ಲಾಸ(ಪಾಪು) ನಾಯ್ಕ, ಉಪಾಧ್ಯಕ್ಷೆ ಶಾಂತಿ ನಾಯ್ಕ ಮತ್ತಿತರು ಭಾಗವಹಿಸಿದ್ದರು. ಖಜಾಂಚಿ ಭರತ ಗೌಡ ಸ್ವಾಗತಿಸಿದರು. ದಿನೇಶ್‌ಗೌಡ ವಂದನಾರ್ಪಣೆ ಮಾಡಿದರು.

ಮನುಷ್ಯ ನಾಗರಿಕತೆಯನ್ನು ಸಾಮಾಜಿಕ ವ್ಯವಸ್ಥೆಯನ್ನೇ ಹೊಸ ಎತ್ತರಕ್ಕೇರಿಸಿದ ಮಹಾನ್ ಅಕ್ಟೋಬರ್ ಕ್ರಾಂತಿಗೆ ಜಗತ್ತಿನಲ್ಲಿ ಸರಿಸಾಟಿ ಎಲ್ಲಿದೆ?

ಸರಿಸಾಟಿ ಎಲ್ಲಿದೆ ಮಹಾನ್ ಅಕ್ಟೋಬರ್ ಕ್ರಾಂತಿಗೆ ?

ಆರ್.ರಾಮಕೃಷ್ಣ

ಸಮಾಜದಲ್ಲಿ ಹಸಿರು ಕ್ರಾಂತಿ, ಶ್ವೇತ(ಬಿಳಿ) ಕ್ರಾಂತಿ ಇತ್ಯಾದಿ ಯಾವುದ್ಯಾವುದೋ ಕ್ರಾಂತಿಯ ಬಗೆಗೆ, ಸೋಪು, ಸಿಗೆಕಾಯಿಗಳ ಜಾಹಿರಾತುಗಳಲ್ಲಿ ಕೂಡ ಕ್ರಾಂತಿ, ಕ್ರಾಂತಿ ಎನ್ನುವ ಕೂಗೆಬ್ಬಿಸುವುದನ್ನು ಆಗಾಗ ನಾವು ಕೇಳಬೇಕಾಗಿದೆ.

ರಾಜಕೀಯ ಭಾಷೆಯಲ್ಲಿ 'ಕ್ರಾಂತಿ'ಎಂದರೆ ರಾಜಕೀಯ - ಅರ್ಥಿಕ - ಸಾಮಾಜಿಕ ವ್ಯವಸ್ಥೆಯೊಂದರ ಮೂಲಭೂತ ಬದಲಾವಣೆ ಅಂತ ಸ್ಥೂಲವಾಗಿ ಹೇಳಬಹುದು.

ಮನುಕುಲದ ಚರಿತ್ರೆಯಲ್ಲಿ ಇದುವರೆಗೆ ನಡೆದ ಕ್ರಾಂತಿಗಳೆಷ್ಟೋ. ಆದರೆ ಆ ಎಲ್ಲ ಕ್ರಾಂತಿಗಳಲ್ಲಿ ಅತ್ಯಂತ ಮಹತ್ವದ ಕ್ರಾಂತಿ ಮನುಕುಲ ಎಂದೂ ಮರೆಯಲಾರದಂತಹ ಅಗಾಧ ಪ್ರಾಮುಖ್ಯತೆ ಪಡೆದ ಕ್ರಾಂತಿ ಎಂದರೆ 1917ರ ನವೆಂಬರ್ 7ರ ಚಾರಿತ್ರಕ ಅಕ್ಟೋಬರ್ ಕ್ರಾಂತಿ (ಜಗತ್ತಿನ ಪರಿಗಣನೆಯಲ್ಲಿ ಅದು ನವೆಂಬರ್ ತಿಂಗಳಾದರೆ ರಷ್ಯನ್ ಕ್ಯಾಲೆಂಡರ್‌ನ ಪ್ರಕಾರ ಅದು ಅಕ್ಟೋಬರ್ ತಿಂಗಳು)

1800ರಲ್ಲಿ ನಡೆದ ಫ್ರೆಂಚ್ ಕ್ರಾಂತಿಯನ್ನು ಇಡೀ ಜಗತ್ತಿನ ಬೆಳವಣಿಗೆಯ ಮೇಲೆ ಪ್ರಭಾವ ಬೀರಿದ ಮಹಾನ್ ಕ್ರಾಂತಿ ಎನ್ನಲಾಗುತ್ತದೆ. ಅದು ನಿಜವೇ. ಫ್ರಾನ್ಸ್ ಕ್ರಾಂತಿ ಮನುಕುಲದ ಹೆಜ್ಜೆ ಗುರುತುಗಳಲ್ಲಿ ಒಂದು ಮಹತ್ವದ ಘಟನಾವಳಿ ಎಂದರೆ ಉತ್ಪ್ರೇಕ್ಷೆಯಾಗಲಾರದು. ಆದರೂ ರಷ್ಯದ ಅಕ್ಟೋಬರ್ ಕ್ರಾಂತಿಯ ಚಾರಿತ್ರಿಕ ಮಹತ್ವವು ಅದಕ್ಕಿಂತ ಎಷ್ಟೋ ಮಿಗಿಲಾದುದು.

ವರ್ಗ ಸಂಘರ್ಷಗಳ ಕತೆಯೇ ಇತಿಹಾಸ

ಆದಿ ಮಾನವನ ಸ್ಥಿತಿಯ ನಂತರದ ನಾಗರಿಕತೆಗಳ ಆರಂಭ, ವಿಕಾಸ, ಬೆಳವಣಿಗೆ ಬದಲಾವಣೆಗಳನ್ನು ಅವಲೋಕಿಸಿದರೆ ಜಗತ್ತಿನ ಒಂದೊಂದು ಭಾಗದಲ್ಲಿ ಒಂದೊಡು ರೀತಿಯ ಚರಿತ್ರೆ, ಸಮಾಜ, ಸಂಸ್ಕೃತಿ, ಜೀವನ ಪದ್ಧತಿ ಇರುವಂತೆ ಕಂಡರೂ ಅದರ ಸಾರ ಮಾತ್ರ ಒಂದೇ. ಅದು ದುಡಿಯುವ ವರ್ಗ ಮತ್ತು ದುಡಿಸಿಕೊಳ್ಳುವ ವರ್ಗ, ಆಳುವ ವರ್ಗ - ಆಳಿಸಿಕೊಳ್ಳುವ ವರ್ಗವೆಂಬ ವಿಭಜನೆ ಮತ್ತು ಆಳುವ ವರ್ಗಗಳಿಂದ ದುಡಿಯುವ ವರ್ಗದ ನಿರ್ದಯ ಸುಲಿಗೆ. ದುಡಿಯುವ ವರ್ಗವು ತನ್ನ ಮೇಲೆ ಹೇರಿರುವ ಶೋಷಕ ವ್ಯವಸ್ಥೆಯ ವಿರುದ್ಧ, ನಿರ್ದಯ ಸುಲಿಗೆಯ ವಿರುದ್ಧ ನಿರಂತರ ಸಂಘರ್ಷ ನಡೆಸುತ್ತಲೇ ಬಂದಿದೆ.

ಇಂತಹ ಸುಲಿಗೆಯು ಒಂದೊಂದು ದೇಶದಲ್ಲಿ ಒಂದೊಂದು ಸ್ವರೂಪದಲ್ಲಿರಬಹುದು. ಕೈಕಾಲುಗಳಿಗೆ ಸರಪಳಿ ತೊಡಿಸಿಕೊಂಡು ಮಾಲೀಕನಿಗಾಗಿ ದುಡಿಯಬೇಕಾದ ಗುಲಾಮಗಿರಿಯಿಂದ, ಭೂಮಿಯ ಆಂದರೆ ಭೂಮಾಲಿಕನ ತೊತ್ತಾಗಿ ದುಡಿಯಬೇಕಾದ ಊಳಿಗಮಾನ್ಯ ವ್ಯವಸ್ಥೆ, ಈ ಉಳಿಗ ಮಾನ್ಯ ವ್ಯವಸ್ಥೆ ಗರ್ಭವನ್ನು ಸೀಳಿ ಬೆಳೆದು ಬಂದ ಬಂಡವಾಳಶಾಹಿ ವ್ಯವಸ್ಥೆ. ಎಲ್ಲದರಲ್ಲೂ ದುಡಿಯುವ ವರ್ಗಕ್ಕೆ ದುಡಿಸಿಕೊಳ್ಳುವ ವರ್ಗಕ್ಕಾಗಿ ದುಡಿಯುವುದೇ ಗತಿ. (ದುಡಿಸಿಕೊಳ್ಳುವ ವರ್ಗವನ್ನು ಅದರ ಸ್ಥಾನದಿಂದ ಕಿತ್ತೆಸೆದು, ದುಡಿಯುವ ವರ್ಗ ತನಗಾಗಿ ದುಡಿಯುವಂತಹ ವ್ಯವಸ್ಥೆಯೊದನ್ನು ತಂದದ್ದೆ ಅಕ್ಟೋಬರ್ ಕ್ರಾಂತಿಯ ಹೆಚ್ಚುಗಾರಿಕೆ.)



ಬಂದೇ ಬಂದು ಆ ದಿನ. ಅಂದು ಕ್ರೆಮ್ಲಿನ್‌ನಲ್ಲಿ ಸೇರಿದ್ದ ಅಪಾರ ಜನಸ್ತೋಮ

ಭಾರತದಲ್ಲಿ ಈ ಶೋಷಣೆಯು ಯುರೋಪ್‌ಗಿಂತಲೂ ಭಿನ್ನಸ್ವರೂಪವಿದ್ದು. ಭಾರತದಲ್ಲಿ ಗುಲಾಮಗಿರಿ ಇತ್ತು ಎಂಬುದು ಚರ್ಚಾಸ್ಪದ ವಿಚಾರವಾಗಬಹುದು. ಆದರೆ ಪಾಳೆಗಾರಿ ವ್ಯವಸ್ಥೆಯೊಂದಿಗೆ ಬೆಸೆದುಕೊಂಡು, ದುಡಿಯುವ ವರ್ಗವನ್ನು ಸಾಮಾಜಿಕವಾಗಿ ಅಪಮಾನಿಸುತ್ತಾ ಆರ್ಥಿಕವಾಗಿ ಶೋಷಿಸುವ ವ್ಯವಸ್ಥೆ ಭಾರತದ ಒಂದು ವಿಶಿಷ್ಟ ಲಕ್ಷಣವಾಗಿತ್ತು. ಎಂದರೆ ಹೆಚ್ಚಿನ ತಕರಾರೇನೂ ಇಲ್ಲ.

ಫ್ರಾನ್ಸ್ ಕ್ರಾಂತಿಯ ತಿರುಳು

ಫ್ರಾನ್ಸ್ ಕ್ರಾಂತಿ ಎಂದರೆ ಸಮಾಜದ ಮೇಲಿನ ತಮ್ಮ ಹಿಡಿತ ಮುಂದುವರಿಸಬೇಕೆನ್ನುವ ಊಳಿಗಮಾನ್ಯ ಅಥವಾ ಪಾಳೇಯಗಾರಿ ಶಕ್ತಿಗಳಿಗೂ ಹೊಸದಾಗಿ ಉದಯವಾದ ಬಂಡವಾಳಗಾರ ವರ್ಗಕ್ಕೂ ನಡುವಿನ ಸಂಘರ್ಷದ ಪ್ರತೀಕ. ಫ್ರಾನ್ಸ್ ಕ್ರಾಂತಿಯಲ್ಲಿ ಗೆದ್ದದ್ದು ಬಂಂವಾಳಶಾಹಿ ವರ್ಗ.

ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಎಂಬ ಘೋಷಣೆಗಳ ಫ್ರಾನ್ಸ್ ಕ್ರಾಂತಿ ದುಡಿಯುವ ಜನರಿಗೆ ಹಲವಾರು ರಿಯಾಯಿತಿ, ಹಕ್ಕುಗಳನ್ನು ಒದಗಿಸಿಕೊಟ್ಟ ಒಂದು ಮುನ್ನೆಡೆಯಾದರೂ ಆಳುವ ವರ್ಗ, ಆಳಿಸಿಕೊಳ್ಳುವ ವರ್ಗಗಳನ್ನು ವರ್ಗ ಎಂಬ ವ್ಯತ್ಯಾಸಗಳನ್ನು ಆಳಿಸಿ ಹಾಕುವ ಕ್ರಾಂತಿಯಾಗಿರಲಿಲ್ಲ ಫ್ರೆಂಚ್ ಕ್ರಾಂತಿ.


ಹಿಂದೆಂದೂ ಕಂಡಿರಲಿಲ್ಲ

ಮನುಷ್ಯನಿಂದ ಮನುಷ್ಯನ ಎಲ್ಲ ಬಗೆಯ ಶೋಷಣೆಗಳಿಂದ ಮುಕ್ತಗೊಳಿಸುವ ಮಹಾನ್ ಆಶಯಗಳಿಂದ , ಸಿದ್ಧಾಂತದಿಂದ ಪ್ರೇರಿತವಾದದ್ದೇ ರಷ್ಯದ ಅಕ್ಟೋಬರ್ ಕ್ರಾಂತಿ. ಇಂತಹದ್ದೊಂದು ಕ್ರಾಂತಿಯನ್ನು ಮನುಕುಲ ಹಿಂದೆಂದೂ ಕಂಡಿರಲಿಲ್ಲ.

1870ರಲ್ಲಿ 'ಪ್ಯಾರಿಸ್ ಕಮ್ಯೂನ್' ಎಂದು ಹೆಸರಾದ ಕ್ರಾಂತಿಯೊಂದು ಫ್ರಾನ್ಸ್‌ನಲ್ಲಿ ಕಾರ್ಮಿಕರ ವರ್ಗದ ನಾಯಕತ್ವದಲ್ಲಿ ನಡೆದರೂ ಸಹ ಆ ಕ್ರಾಂತಿಯು ಕೇವಲ 90ದಿನಗಳವರೆಗೆ ಮಾತ್ರ ಬಾಳಿತು. ಕಾರ್ಮಿಕರ ವರ್ಗದೊಂದಿಗೆ ರೈತರು ಸೇರಿದಂತೆ ಇತರ ಶೋಷಿತ ವರ್ಗಗಳ ಗಾಢ ಸಖ್ಯತೆ ಇಲ್ಲದ ಪರಿಸ್ಥಿಯಲ್ಲಿ ಈ ಕ್ರಾಂತಿಯನ್ನು ದಕ್ಕಿಸಿ ಕೊಳ್ಳುವುದು ಕಾರ್ಮಿಕ ವರ್ಗಕ್ಕೆ ಆಗಲಿಲ್ಲ.

ಪ್ಯಾರಿಸ್ ಕಮ್ಯೂನ್‌ನ ಪಾಠ

ಚಾರಿತ್ರಕ ಪ್ಯಾರಿಸ್ ಕಮ್ಯೂನ್ ಅನುಭವವನ್ನೂ, ಹಾಗೂ ಜಗತ್ತಿನ ವಿವಿಧ ದೇಶಗಳ ಕ್ರಾಂತಿಯನ್ನು ಅಲ್ಲದೆ ಮಾರ್ಕ್ಸ್‌ವಾದೆದ ಆಧಾರದಲ್ಲಿ ಸಮಾಜದ ಬೆಳವಣಿಗೆ ಬದಲಾವಣೆಯನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ನಡೆಸಲಾದದ್ದು ಅಕ್ಟೋಬರ್‌ನ ಮಹಾನ್ ಕ್ರಾಂತಿ.



ಮಹಾನ್ ಕ್ರಾಂತಿಕಾರಿ ಮಾರ್ಕ್ಸ್‌ವಾದಿ ಲೆನಿನ್ ಈ ಕ್ರಾಂತಿಯ ನೇತಾರ.

ನಮ್ಮ ಹೈಸ್ಕೂಲ್ ಪಠ್ಯಗಳನ್ನು ತಿರುವಿ ಹಾಕಿದರೆ ರಷ್ಯಾದ ದೊರೆ 'ಜಾರ್ ಆಳ್ವಿಕೆಯ ದಮನಕಾರಿ ಮತ್ತು ಕ್ರೂರ ರೀತಿಯದಾಗಿತ್ತು, ರೈತರ ಸ್ಥಿತಿ ಶೋಚನೀಯವಾಗಿತ್ತು' ಎನ್ನುತ್ತದೆ. ಆದರಿಂದಾಗಿ ಅಲ್ಲಿ ಕಮ್ಯುನಿಸ್ಟ್ ಕ್ರಾಂತಿ ಸಂಭವಿಸಿತು ಎಂಬಂತೆ ಪಠ್ಯದಲ್ಲಿ ನಿರೂಪಿಸಲಾಗಿದೆ.

ರಷ್ಯಾದ ಜಾರ್ ಮಾತ್ರ ದಮನಕಾರಿಯಾಗಿರಲಿಲ್ಲ. ಜಗತ್ತಿನಲ್ಲೆಲ್ಲ ಪಾಳೆಯಗಾರಿ ರಾಜ, ಮಹಾರಾಜರು, ಚಕ್ರವರ್ತಿ, ಸುಲ್ತಾನ-ನವಾಬರೆಲ್ಲರೂ ದಮನಕಾರಿಗಳೇ ಆಗಿದ್ದರು. ಪ್ರಮಾಣದಲ್ಲಿ ಏನಾದರೂ ವ್ಯತ್ಯಾಸವಿದ್ದಿತೆ ವಿನಃ ಶೋಷಣೆಯಿಂದ ಮುಕ್ತವಾದ ರಾಜಪ್ರಭುತ್ವ ಜಗತ್ತಿನಲ್ಲೆಲ್ಲೂ ಇರಲಿಲ್ಲ. ಕೈಗಾರಿಕಾ ಕ್ರಾಂತಿಯೊಂದಿಗೆ ಬೆಳೆದುಬಂದ ಕಾರ್ಮಿಕ ವರ್ಗವು ಬಂಡವಾಳಶಾಹಿಗಳ ನಿರ್ದಯ ಶೋಷಣೆಗೆ ಗುರಿಯಾಗಿತ್ತು.

ರಷ್ಯಾದ ಅಕ್ಟೋಬರ್ ಕ್ರಾಂತಿಯು ಕೇವಲ ರಷ್ಯಾದ ಜಾರ್‌ಗಳ ದಮನದ ವಿರುದ್ಧದ ಸಾಂದರ್ಭಿಕ ಪ್ರತಿಕ್ರಿಯೆಯಾಗಿರಲಿಲ್ಲ, ಅದೊಂದು ಆಕಸ್ಮಿಕವಾಗಿರಲಿಲ್ಲ. ಪಿತೂರಿ, ಸಂಚಂತೂ ಅಲ್ಲವೇ ಅಲ್ಲ. ಅದೊಂದು ಚಾರಿತ್ರಕ ಅನಿವಾರ್ಯತೆ ಆಗಿತ್ತು. ಮನುಕುಲದ ನಾಗರಿಕತೆಯ ವಿಕಾಸದಲ್ಲಿ ಒಂದು ಮಹಾನ್ ಹೆಜ್ಜೆಯಾಗಿತ್ತು. ಒಂದು ದೊಡ್ಡ ನೆಗೆತವಾಗಿತ್ತು. ಅದೊಂದು ಸಮಾಜದ ಬೆಳವಣಿಗೆಯ ಅನಿವಾರ್ಯವಾಗಿತ್ತು.

ಕಾರ್ಲ್ ಮಾರ್ಕ್ಸ್ ಮೊದಲಿಗೆ ಊಹಿಸಿದ್ದು ಸಮಾಜವಾದಿ ಕ್ರಾಂತಿಯು ಯಾವುದೋ ಒಂದು ದೇಶದಲ್ಲಿ ನೆಡಯುವುದಲ್ಲ ಅದು ಅತ್ಯುನ್ನತ ಕೈಗಾರಿಕಾ ಬೆಳವಣಿಗೆ ಸಾಧಿಸಿದ್ದ ದೇಶಗಳಲ್ಲಿ ಸಂಭವಿಸುತ್ತದೆ. ಜಾಗತಿಕವಾಗಿ ಒಮ್ಮೆಗೆ ಸಮಾಜವಾದಿ ಕ್ರಾಂತಿ ಸಂಭವಿಸುತ್ತದೆ ಎಂಬುದಾಗಿತ್ತು. ಆದರೆ ಹಾಗಾಗಲಿಲ್ಲ.


ದುರ್ಬಲ ಕೊಂಡಿಯನ್ನು ತುಂಡರಿಸಬಹುದು

ಸಾಮ್ರಾಜ್ಯಶಾಹಿಯ ಬೆಳವಣಿಗೆ ಹಾಗೂ ಜಾಗತಿಕ ಪರಿಸ್ಥಿತಿಯನ್ನು ಆಳವಾಗಿ ಅಭ್ಯಸಿಸಿದ ಲೆನಿನ್ ಸಾಮ್ರಾಜ್ಯಶಾಹಿಯ ಸರಪಳಿಯನ್ನು ಅದು ಅತ್ಯಂತ ದುರ್ಬಲವಾಗಿರುವ ಕಡೆ ತುಂಡರಿಸಬಹುದೆಂದು ಪ್ರತಿಪಾದಿಸಿದರು. ಇದು ಮಾರ್ಕ್ಸ್‌ರವರ ಸಿದ್ಧಾಂತಕ್ಕೆ ವಿರುದ್ಧವಾಗದೇ ಮಾರ್ಕ್ಸ್‌ವಾದವನ್ನು ವಿಸ್ತರಿಸಿದ, ಬೆಳೆಸಿದ, ಶ್ರೀಮಂತಗೊಳಿಸಿದ ಒಂದು ಸಿದ್ಧಾಂತವಾಗಿತ್ತು. ಸ್ವತಃ ಮಾರ್ಕ್ಸ್‌ರವರು ಕೂಡ ತಮ್ಮ ಜೀವಿತದ ಕೊನೆಯ ಘಟ್ಟದಲ್ಲಿ ಸಮಾಜವಾದಿ ಕ್ರಾಂತಿಯ ಸಂಭವನೀಯ ದೇಶವಾಗಿ ರಷ್ಯಾವನ್ನು ಪರಿಗಣಿಸಿದರು. ಅದರ ಬೆನ್ನ ಹಿಂದೆ ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕ್ರಾಂತಿಕಾರಿ ಚಳವಳಿಯ ಉತ್ಕರ್ಷ ಹಾಗೂ ಸಮಾಜವಾದಿ ಕ್ರಾಂತಿಗಳ ಸರಣಿಯನ್ನು ನೀರಿಕ್ಷಿಸಲಾಗಿತ್ತು. ಸ್ವತಃ ಲೆನಿನ್‌ರವರು ಸಹ ಹಾಗೇಯೇ ಅಂದಾಜಿಸಿದ್ದರು.

ಆದರೆ ಅದು ಹಾಗಾಗಲಿಲ್ಲ. ರಷ್ಯಾ ಕ್ರಾಂತಿಯ ನಂತರ 1949ರಲ್ಲಿ ಚೀನಾ ಜನತಾ ಪ್ರಜಾಪ್ರಭುತ್ವ ಕ್ರಾಂತಿಯಾಗುವರೆಗೂ ರಷ್ಯಾ ಏಂಕಾಂಗಿಯಾಗಿತ್ತು. 1920ರ ದಶಕದಲ್ಲಿ ಜರ್ಮನಿ ಕ್ರಾಂತಿಕಾರಿ ಚಳವಳಿಯನ್ನು ಅಲ್ಲಿನ ಆಳುವ ವರ್ಗಗಳು ಕ್ರೂರವಾಗಿ ದಮನ ಮಾಡಿದವು. ತನ್ನನ್ನೂ ಸುತ್ತುವರೆದು ಹೊಸಕಿ ಹಾಕಬೇಕೆನ್ನುವ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ದೇಶಗಳ ದಾಳಿಗಳನ್ನು ಅದು ಎದುರಿಸಬೇಕಾಯಿತು.

ಈ ನಡುವೆ ಏನೆಲ್ಲಾ ಸವಾಲುಗಳನ್ನು ಅದು ಎದುರಿಸಬೇಕಾಯಿತು. ರಷ್ಯಾದ ಮೇಲೆ ಹಿಟ್ಲರ್‌ನ

ಪುಟ 1[illegible]



ಬಂಡವಾಳಶಾಹಿಗಳನ್ನು ಹೊರದಬ್ಬುತ್ತಿರುವ ಲೆನಿನ್

ಅಮೆರಿಕಾಕ್ಕೆ ಕ್ಯಾನ್ಸರ್....

ಪುಟ 8ರಿಂದ


ವ್ಯವಹಾರಗಳಿಗೆ ಪ್ರೋತ್ಸಾಹ ನೀಡಲಾಯಿತಲ್ಲದೆ ರಿಯಲ್ ಎಸ್ಟೇಟ್ ಮೇಲೆ ಹೇರಳ ಸಾಲ ನೀಡಲಾಯಿತು.

ಉದಾರೀಕರಣ ನೀತಿಗಳಿಂದಾಗಿ, ದೈತ್ಯ ಖಾಸಗಿ ಕಂಪನಿಗಳನ್ನು ಉತ್ತೇಜಿಸಿದ ಅಮೇರಿಕಾ ತನ್ನ ದೇಶದ ಸಾಮಾನ್ಯ ಜನರ ಆದಾಯಕ್ಕೆ ಕನ್ನ ಹಾಕಿತು. ಆದರಿಂದಾಗಿ ಆಂತರಿಕ ಮಾರುಕಟ್ಟೆ ಕುಸಿತಗೊಂಡಿತು. ಅದೇ ಸಂದರ್ಭದಲ್ಲಿ ರಿಯಲ್ ಎಸ್ಟೇಟ್ ಮಾರುಕಟ್ಟೆಯನ್ನು ಉತ್ತೇಜಿಸಲು ಕಡಿಮೆ ಬಡ್ಡಿಯಲ್ಲಿ ಗೃಹಸಾಲ ನೀಡಲಾಯಿತು. ಆದರೆ ಆದಾಯ ಕುಸಿತದಿಂದಾಗಿ ಅಲ್ಲಿನ ಜನರು ಸಾಲ ಮಾಡಿ ಕೊಂಡುಕೊಂಡ ತಮ್ಮ ಮನೆಯ ಸಾಲವನ್ನು ಹಿಂತಿರುಗಿಸಲಾರದಾದರು. ಇದರಿಂದಾಗಿ ರಿಯಲ್ ಎಸ್ಟೇಟ್ ಮೇಲೆ ಸಾಲ ನೀಡಿದ ಹೂಡಿಕೆ ಕಂಪನಿಗಳು (investment company) ಮನೆಗಳನ್ನು ಕಟ್ಟಡಗಳನ್ನು ಏಲಂ ಮಾಡಿದವು. ಆದರೆ ಬಹುತೇಕ ಎಲ್ಲಾ ಜನರ ಆದಾಯ ಕುಸಿತಗೊಂಡಿರುವುದರಿಂದ ಕಟ್ಟಡವನ್ನಾಗಲೀ, ಭೂಮಿಯನ್ನಾಗಲೀ ಕೊಳ್ಳುವವರೇ ಇಲ್ಲವಾದರು. ಇದರಿಂದ ರಿಯಲ್ ಎಸ್ಟೇಟ್ (ಭೂಮಿ, ಮನೆ, ಕಟ್ಟಡ ಇತ್ಯಾದಿ) ಮೇಲೆ ಸಾಲ ನೀಡಿದ ಹೂಡಿಕೆ ಕಂಪನಿಗಳು ದಿವಾಳಿಯಾದವು. ಹಾಗೆಯೇ ಹೂಡಿಕೆ ಕಂಪನಿಗಳಿಗೆ ಸಾಲ ನೀಡಿದ ವಾಣಿಜ್ಯ ಬ್ಯಾಂಕುಗಳೂ ಮುಗ್ಗಟ್ಟು ಎದುರಿಸಿದವು.

ಇದರಿಂದ ಹಣಕಾಸು ಸಂಸ್ಥೆಗಳ ಮೇಲೆ ನಂಬಿಕೆ ಕಳೆದುಕೊಂಡ ಜನರು ಅಲ್ಲಿದ್ದ ಹಣವನ್ನು ತೆಗೆದುಕೊಳ್ಳಲಾರಂಭಿಸಿದರು. ಈ ವಿಷವರ್ತುಲದಲ್ಲಿ ಅಮೇರಿಕಾ ಒದ್ದಾಡುತ್ತಿದೆ.

ವಿಶ್ವವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ನಂತರ ಇಡೀ ವಿಶ್ವವೇ ಸಣ್ಣ ಹಳ್ಳಿಯಾಗುತ್ತಿರುವ ಸಂದರ್ಭದಲ್ಲಿ ಶ್ರೀಮಂತ ರಾಷ್ಟ್ರಗಳು ತಮ್ಮ ಆರ್ಥಿಕ ನೀತಿಗಳಿಂದ 3ನೇ ಜಗತ್ತಿನ ರಾಷ್ಟ್ರಗಳ ಶೋಷಣೆಯನ್ನು ಹಣಕಾಸು ವಹಿವಾಟಿನ ಮೂಲಕ ನಡೆಸಿದರು. ಹೇರಳ ಲಾಭ ಗಳಿಸುವ ಉದ್ದೇಶದಿಂದ ಮೂರನೇ ಜಗತ್ತಿನ ದೇಶಗಳ ಶೇರು ಮಾರುಕಟ್ಟೆಗಳಲ್ಲಿ ಬಂಡವಾಳ ಹೂಡಲಾರಂಭಿಸಿದರು. ಆದ್ದರಿಂದಲೇ ಭಾರತದಲ್ಲಿ ಶೇರು ಮಾರುಕಟ್ಟೆಗಳಲ್ಲಿ ಸೂಚ್ಯಾಂಕ ಒಮ್ಮಿಂದೊಮ್ಮೆಲೆ ಮೇಲಕ್ಕೆ ಹೋಯಿತು. ಇದೀಗ ಅಮೇರಿಕಾದ ಆರ್ಥಿಕ ಕುಸಿತದಿಂದ ಭಾರತದ ಶೇರು ಮಾರುಕಟ್ಟೆಯೂ ಕುಸಿದು, 3 ವರ್ಷಗಳ ಹಿಂದಿನ ಮಟ್ಟಕ್ಕೆ ಕುಸಿದಿದೆ.

ವಾಣಿಜ್ಯ ಬ್ಯಾಂಕುಗಳು ರಿಜರ್ವ್ ಬ್ಯಾಂಕ್‌ನಲ್ಲಿ ಇಟ್ಟಿದ್ದ ನಗದು ಮೀಸಲಾತಿ ಹಣ (ಸಿಆರ್‌ಆರ್) ಶೇಕಡಾ 2 ರಷ್ಟು ಕಡಿಮೆ ಮಾಡಿದ್ದರಿಂದ 1,87,000 ಕೋಟಿ ರೂ.ಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸುವ ಮೂಲಕ ಹಾಗೂ ಬ್ಯಾಂಕು, ವಿಮಾ ಸಂಸ್ಥೆಗಳಿಗೆ ಶೇರುಗಳನ್ನು ಕೊಳ್ಳಲು ಸೂಚಿಸುವುದರ ಮೂಲಕ ಶೇರು ಮಾರುಕಟ್ಟೆಯನ್ನು ಸದ್ಯಕ್ಕೆ ತಹಬಂದಿಗೆ ತರಲಾಗಿದ್ದರೂ ಮುಂದೆ ಏನಾಗುತ್ತದೆ ಎಂಬುದನ್ನು ಈಗಲೇ ಹೇಳಲಾಗದು.




ನಮ್ಮ ದೇಶದ ಮೇಲೆ ಪರಿಣಾಮ

ಶೇರು ಮಾರುಕಟ್ಟೆಯ ಮೇಲೆ ಆದ ಪರಿಣಾಮವನ್ನು ಮೇಲೆ ವಿವರಿಸಲಾಗಿದೆ. ಶೇರುಗಳಲ್ಲಿ, ಮ್ಯೂಚುವಲ್ ಫಂಡ್‌ನಲ್ಲಿ ಹಣ ತೊಡಗಿಸಿದ ಮಧ್ಯಮ ವರ್ಗದ ಜನರು ಹಾಗೂ ನಿವೃತ್ತ ನೌಕರರು ಒಂದೇ ಸಮನೆ ಶೇರು ದರ ಕುಸಿಯುತ್ತಿರುವುದನ್ನು ಕಂಡು ನಲುಗಿದ್ದಾರೆ. ರಫ್ತು ಆಧಾರಿತ ವಹಿವಾಟುಗಳು ಕುಂಠಿತಗೊಂಡಿದೆ. ರೆಡಿಮೇಡ್ ವಸ್ತುಗಳು ಭಾರತದಿಂದ ಅದರಲ್ಲೂ ಬೆಂಗಳೂರಿನಿಂದ ಹೇರಳವಾಗಿ ಅಮೇರಿಕಾಕ್ಕೆ ಹೋಗುತ್ತಿತ್ತು. ಈಗ ಅಲ್ಲಿನ ನೌಕರರು ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಐಟಿ ಕಂಪನಿಗಳು ಹೊಸತಾಗಿ ನೌಕರರನ್ನು ನೇಮಕ ಮಾಡಿಕೊಳ್ಳುತ್ತಿಲ್ಲ. ಹಾಲಿ ನೌಕರರಿಗೆ ಹೆಚ್ಚು ಕೆಲಸ ನೀಡುತ್ತಲಿದ್ದು, ಕ್ಷುಲ್ಲಕ ಕಾರಣಗಳಿಗೆ ಕೆಲಸದಿಂದ ತೆಗೆದುಹಾಕುವ ಪದ್ಧತಿ ಹೆಚ್ಚಾಗುತ್ತಿದೆ. ಯಾವ ಕಂಪನಿಗಳೂ ಅವುಗಳ ಲಾಭಕ್ಕೆ ಸಂಚಕಾರ ತಂದುಕೊಳ್ಳಲು ತಯಾರಿಲ್ಲ. ಬದಲಾಗಿ ನೌಕರರನ್ನು ಬಲಿ ತೆಗೆದುಕೊಳ್ಳುತ್ತಿವೆ.

ಕೆಲವೊಂದು ಬ್ಯಾಂಕುಗಳು, ಹೂಡಿಕೆ ಕಂಪನಿಗಳು ಮುಚ್ಚಿರುವುದರಿಂದ ಭಾರತದಲ್ಲಿರುವ ಅವುಗಳ ಶಾಖೆಗಳು ಮುಚ್ಚಿವೆ. ಇದಕ್ಕೂ ಮಿಗಿಲಾಗಿ ಭಾರತದ ರಿಯಲ್ ಎಸ್ಟೇಟ್‌ನಲ್ಲಿ ಹಣ ತೊಡಗಿಸಿದ್ದ ವಿದೇಶಿ ಕಂಪನಿಗಳು ಹಿಂದಕ್ಕೆ ಸರಿಯುತ್ತಿವೆ. ಇದರಿಂದ ರಿಯಲ್ ಎಸ್ಟೇಟ್ ಉದ್ದಿಮೆ ಕುಸಿಯತೊಡಗಿದೆ.

ರಿಯಲ್ ಎಸ್ಟೇಟ್ ಉದ್ದಿಮೆಯ ಕುಸಿತ ರಾಜ್ಯದ ಆರ್ಥಿಕತೆಯ ಮೇಲೂ ಪರಿಣಾಮ ಬೀರತೊಡಗಿದೆ. ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾದ ಎಂ.ಆರ್. ಶ್ರೀನಿವಾಸಮೂರ್ತಿರವರು 'ಜಾಗತಿಕ-ಹಣಕಾಸು ಬಿಕ್ಕಟ್ಟು ರಾಜ್ಯದ ಆದಾಯವನ್ನು ಕುಗ್ಗಿಸುತ್ತದೆ' ಎಂದು ಹೇಳಿದ್ದಾರೆ. ರಿಯಲ್ ಎಸ್ಟೇಟ್ ವಹಿವಾಟಿನ ಕುಸಿತದಿಂದಾಗಿ ಭೂಮಿ, ಮನೆ, ಸಂಕೀರ್ಣಗಳ ಮಾರಾಟ ಅಥವಾ ನೋಂದಣಿ ಕುಸಿತಗೊಂಡಿದೆ. ಇದರಿಂದಾಗಿ ಸರ್ಕಾರಕ್ಕೆ ಬರಬೇಕಾದ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕದ ಆದಾಯ ಕಡಿಮೆ ಆಗಿದೆ. ಇದು ರಾಜ್ಯದ ಬಜೆಟ್ ಮೇಲೂ ಪರಿಣಾಮ ಬೀರಲಿದೆ ಎಂದು ಶ್ರೀನಿವಾಸಮೂರ್ತಿ ತಿಳಿಸಿದ್ದಾರೆ.



ಎಡಪಕ್ಷಗಳ ಮಹತ್ವದ ಪಾತ್ರ

ಅಮೇರಿಕಾದ ಆರ್ಥಿಕ ಕುಸಿತವನ್ನು ತಜ್ಞರು 1930ರ ತೀವ್ರ ಬಿಕ್ಕಟ್ಟಿಗೆ ಹೋಲಿಸುತ್ತಿದ್ದಾರೆ. ಆದರೆ 41/2 ವರ್ಷಗಳ ಕಾಲ ಕೇಂದ್ರ ಯುಪಿಎ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಿದ ಎಡಪಕ್ಷಗಳು ಉದಾರೀಕರಣದ ಬಹಳಷ್ಟು ನೀತಿಗಳು ಜಾರಿಗೆ ಬರದಂತೆ ತಡೆದವು. ಆದ್ದರಿಂದ ಆರ್ಥಿಕ ಕುಸಿತದ ತೀವ್ರತೆ ಭಾರತದ ಮೇಲೆ ಕಡಿಮೆ. ಉದಾಹರಣೆಗೆ ಬ್ಯಾಂಕಿಂಗ್ ರೆಗ್ಯೂಲೇಶನ್ ಕಾಯಿದೆಗೆ ತಿದ್ದುಪಡಿ ತಂದು ವಿದೇಶಿ ಬಂಡವಾಳವನ್ನು ಶೇ.74ಕ್ಕೆ ಏರಿಸಬೇಕೆಂದು ಕೇಂದ್ರ ಸರ್ಕಾರ ಬಯಸಿತ್ತು. ಬ್ಯಾಂಕಿಂಗ್ ಕಂಪನಿಗಳ ಷೇರುಗಳಲ್ಲಿ ಮತದಾನದ ಹಕ್ಕನ್ನು ಶೇ.10ಕ್ಕಿಂತ ಹೆಚ್ಚು ಮಾಡಲು ಪ್ರಯತ್ನ ನಡೆಸಿತ್ತು. ಎಡಪಕ್ಷಗಳ ತೀವ್ರ ವಿರೋಧದಿಂದ ಇದು ಸಾಧ್ಯವಾಗಿರಲಿಲ್ಲ. ಇದರಿಂದಾಗಿ ಬ್ಯಾಂಕಿಂಗ್ ಕಂಪನಿಗಳ ಆಡಳಿತವನ್ನು ಪೂರ್ಣವಾಗಿ ಕೈಗೆ ತೆಗೆದುಕೊಳ್ಳಲು ವಿದೇಶಿ ಕಂಪನಿಗಳಿಗೆ ಸಾಧ್ಯವಾಗಿಲ್ಲ.

ಜೊತೆಯಲ್ಲಿ ಪೆನ್ಷನ್ ಫಂಡ್‌ನಲ್ಲಿದ್ದ 2,40,000 ಕೋಟಿ ರೂ. ಹಣವನ್ನು ಮ್ಯುಚೂವಲ್ ಫಂಡ್‌ಗೆ ವರ್ಗಾಯಿಸದಂತೆ ತಡೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದವು. ಎಡಪಕ್ಷಗಳು ಬೆಂಬಲ ಹಿಂತೆಗೆದುಕೊಂಡ ನಂತರ ಮಾತ್ರವೇ ಕೇಂದ್ರ ಸರ್ಕಾರವು ಅದನ್ನು ವಿವಿಧ ಕಂಪನಿಗಳಿಗೆ ನೀಡಿದೆ.

ಹಾಗೆಯೇ ವಿಮಾ ಕ್ಷೇತ್ರದಲ್ಲಿ ವಿದೇಶಿ ಬಂಡವಾಳವನ್ನು ಅಲ್ಲಿನ ನೌಕರರ ಸಂಘಟನೆ ವಿರೋಧಿಸಿದುದು ಮಾತ್ರವಲ್ಲದೆ ಎಡಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ಶೇ.26ರಷ್ಟು ವಿದೇಶಿ ಬಂಡವಾಳಕ್ಕೆ ಇದ್ದ ಅವಕಾಶವನ್ನು ಶೇ.49ಕ್ಕೆ ಏರಿಸಬೇಕೆಂದು ಕೇಂದ್ರದ ಮನಮೋಹನ್‌ಸಿಂಗ್ ಸರ್ಕಾರ ಬಯಸಿತ್ತು. ಆದರೆ ಎಡಪಕ್ಷಗಳ ವಿರೋಧದಿಂದಾಗಿ ಸಾಧ್ಯವಾಗಿರಲಿಲ್ಲ. ಅಕ್ಟೋಬರ್ 30ರಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ವಿದೇಶಿ ಬಂಡವಾಳವನ್ನು ಶೇ.49ಕ್ಕೆ ಏರಿಸುವ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಯುಪಿಎ ಸರ್ಕಾರ ನಿರ್ಧರಿಸಿದೆ. ಅಮೇರಿಕಾದ ಪ್ರತಿಷ್ಠಿತ ವಿಮಾ ಕಂಪನಿಯಾದ ಎಐಜಿ ಬಿಕ್ಕಟ್ಟಿನಲ್ಲಿರುವುದನ್ನು ತಿಳಿದೂ ಕೇಂದ್ರ ಸರ್ಕಾರ ಈ ಮಸೂದೆಯನ್ನು ಜಾರಿಗೆ ತರಲು ಹೊರಟಿದೆ. ನಮ್ಮ ದೇಶದ ವಿಮಾ ಕಂಪನಿಗಳಲ್ಲಿ ವಿದೇಶಿ ಬಂಡವಾಳ ಹೆಚ್ಚಾದಲ್ಲಿ ವಿದೇಶದಲ್ಲಿ ನಡೆಯುವ ಆರ್ಥಿಕ ಕುಸಿತದ ಭಾರ ಭಾರತೀಯರ ಮೇಲೆ ಬೀಳುತ್ತದೆ. ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುವಂತಾಗಿದೆ, ಮನಮೋಹನ್ ಸಿಂಗ್‌ರ ಪರಿಸ್ಥಿತಿ. ಸರ್ಕಾರದ ಈ ನಿಲುವನ್ನು ಸಂಸತ್ತಿನಲ್ಲಿ ವಿರೋಧಿಸುವುದಾಗಿ ಎಡಪಕ್ಷಗಳು ಹೇಳಿವೆ.

ಮರಳಿ ಕಾರ್ಲ್‌ಮಾರ್ಕ್ಸ್‌ನತ್ತ

1848 ರಲ್ಲಿ ಕಮ್ಯೂನಿಸ್ಟ್ ಘೋಷಣೆಯನ್ನು ಬರೆದ ಕಾರ್ಲ್‌ಮಾರ್ಕ್ಸ್ ಮತ್ತು ಫೆಡರಿಕ್ ಎಂಗೆಲ್ಸ್ ಅಂದಿನ ಕಾಲದ ಶೋಷಣಾ ಸಮಾಜಕ್ಕೆ ದಾರಿ ದೀವಿಗೆಯಾದರು. ಅವರ ಆ ಘೋಷಣೆ ಮತ್ತು ಅವರ ಇನ್ನಿತರ ಕೃತಿಗಳು ಇಂದಿಗೂ ಪ್ರಸ್ತುತ.

ಬಂಡವಾಳವಾದವು ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ರಚಿಸಿದ 'ದಾಸ್ ಕ್ಯಾಪಿಟಲ್' ಕೃತಿಗೆ ಜಗತ್ತಿನಾದ್ಯಂತ ಬೇಡಿಕೆ ಹೆಚ್ಚಾಗಿದೆಯೆಂದು ಮಾಧ್ಯಮಗಳು ವರದಿ ಮಾಡಿವೆ (ದಿ ಹಿಂದೂ - 22/10/08) ಜರ್ಮನಿಯಲ್ಲಿನ ಪ್ರಕಟಣಾ ಸಂಸ್ಥೆಯು ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರ ಕೃತಿಗಳ ಮಾರಾಟ 3 ಪಟ್ಟು ಹೆಚ್ಚಾಗಿದೆಯೆಂದು ವರದಿ ಮಾಡಿದೆ.

ಜರ್ಮನಿಯ ಚಿತ್ರ ನಿರ್ಮಾಪಕ ಅಲೆಗ್ಸಾಂಡರ್ ಕ್ಲುಗೆ 'ದಾಸ್ ಕ್ಯಾಪಿಟಲ್' ನ್ನು ಚಲನ ಚಿತ್ರ ಮಾಡಲು ಮುಂದೆ ಬಂದಿದ್ದಾರೆಂದು ವರದಿಯಾಗಿದೆ. ಇನ್ನೂ ಆಶ್ಚರ್ಯದ ಸಂಗತಿ ಎಂದರೆ ಫ್ರಾನ್ಸ್ ಅಧ್ಯಕ್ಷ ನಿಕೋಲಸ್ ಸರ್ಕೋಜಿ, ಜರ್ಮನಿಯ ಆರ್ಥಿಕ ಸಚಿವ ಪೀರ್, ಸ್ಟೀನ್‌ಬ್ರು ದಾಸ್ ಕ್ಯಾಪಿಟಲ್ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದ್ದು ಪೋಪ್ ಕೂಡಾ ಪ್ರದರ್ಶಿಸಿದ್ದಾರೆ.

ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರ ಚಿಂತನೆಗಳು ಶೋಷಣೆಗೆ ಒಳಗಾದ ಜನರ ಮನ ಮುಟ್ಟಲಿ ಶೋಷಣೆಯ ವಿರುದ್ಧದ ಹೋರಾಟ ಇನ್ನಷ್ಟು ಆಳಗೊಳ್ಳಲಿ.

ಕಡೆಗಣಿಸಲ್ಪಟ್ಟ ಕೃಷಿ ಕೂಲಿಕಾರರು.......

ಪುಟ 9 ರಿಂದ

ನಿಗದಿಪಡಿಸುವ ಕನಿಷ್ಠ ಕೂಲಿ ಜಾರಿಯಾಗದೆ ಕೇವಲ ಕಾಗದದಲ್ಲಿ ಉಳಿಯುತ್ತದೆ.

ಕೃಷಿ ಕೂಲಿಕಾರರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ಅವರ ನೈಜ ಕೂಲಿಯ ಕುಸಿತಕ್ಕೆ ಕಾರಣವಾಗುತ್ತದೆ. 1991 ಮತ್ತು 2001 ರ ನಡುವಿನ 10 ವರ್ಷಗಳಲ್ಲಿ ಅಖಿಲ ಭಾರತ ಮಟ್ಟದಲ್ಲಿ ಕೃಷಿ ಕೂಲಿಕಾರರ ಸಂಖ್ಯೆ ಸುಮಾರು 7.5 ಕೋಟಿಯಿಂದ 11 ಕೋಟಿಗೆ ಏರಿದೆ. ಈಗ ಅದು 12 ಕೋಟಿ ಆಗಿರಬಹುದು. 1991ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ 49.5 ಲಕ್ಷ ಕೃಷಿ ಕೂಲಿಕಾರರಿದ್ದರು. 2001 ಜನಗಣತಿಯಲ್ಲಿ ಈ ಸಂಖ್ಯೆ 62 ಲಕ್ಷಕ್ಕೆ ಏರಿದೆ. ಈಗ ಅದು ಸುಮಾರು 1 ಕೋಟಿ ಆಗಿರಬಹುದು.

ಕೃಷಿ ಕೂಲಿಕಾರರ ಸಂಖ್ಯೆ ಇಷ್ಟೊಂದು ಪ್ರಮಾಣದಲ್ಲಿ ಹೆಚ್ಚಾಗುತ್ತಿರುವುದು ಆರೋಗ್ಯಕರ ಬೆಳವಣಿಗೆಯಲ್ಲ. ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚಾದಷ್ಟು ಕೃಷಿಯ ಮೇಲಿನ ಅವಲಂಬನೆ ಹೆಚ್ಚಾಗುತ್ತದೆ. ಬಡತನ ಹೆಚ್ಚಾಗುತ್ತದೆ. ಕೃಷಿಕೂಲಿಕಾರರ ಆದಾಯ ಕುಸಿಯುತ್ತದೆ.

ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚಾಗುವುದಕ್ಕೆ ಕೃಷಿರಂಗದ ಬಿಕ್ಕಟ್ಟೇ ಪ್ರಧಾನ ಕಾರಣವಾಗಿದೆ. ಪ್ರತಿ ವರ್ಷ ದೊಡ್ಡ ಸಂಖ್ಯೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಭೂಮಿ ಕಳೆದುಕೊಂಡು ಕೂಲಿಕಾರರಾಗುತ್ತಿದ್ದಾರೆ. ಪರಂಪರಾಗತ ಗ್ರಾಮೀಣ ಕಸಬುಗಳಿಗೆ ಪ್ರೋತ್ಸಾಹ ಇಲ್ಲದಂತಾಗಿ ಗ್ರಾಮೀಣ ಕುಶಲಕರ್ಮಿಗಳು ಹೊಟ್ಟೆ ಪಾಡಿಗಾಗಿ ಕೂಲಿ ಕೆಲಸಕ್ಕೆ ಮುಂದಾಗುತ್ತಾರೆ. ನಗರಗಳಲ್ಲಿ ಹೆಚ್ಚೆಚ್ಚು ಕಾರ್ಖಾನೆಗಳು ಮುಚ್ಚಿಹೋಗುತ್ತಿದ್ದು, ಮುಚ್ಚಿದ ಕಾರ್ಖಾನೆಗಳ ಕಾರ್ಮಿಕರಲ್ಲಿ ಒಂದು ವಿಭಾಗ ತಮ್ಮ ಗ್ರಾಮಗಳಿಗೆ ಹಿಂತಿರುಗಿ ಕೃಷಿ ಕೂಲಿಕಾರರಾಗಿ ದುಡಿಯುತ್ತಾರೆ. ಸರ್ಕಾರಿ ಭೂಮಿ, ಅರಣ್ಯ ಭೂಮಿಯಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿ ಬದುಕುತ್ತಿದ್ದ ಆದಿವಾಸಿಗಳನ್ನು ಮತತು ಇತರ ಬಡವರನ್ನು ಒಕ್ಕಲೆಬ್ಬಿಸಲಾಗುತ್ತಿರುವುದರಿಂದ ಅವರೂ ಸಹ ಕೃಷಿ ಕೂಲಿಕಾರರ ಸಮೂಹವನ್ನು ಸೇರಿಕೊಳ್ಳುತ್ತಿದ್ದಾರೆ.

ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಅವರಿಗೆ ಕೆಲಸ ದೊರೆಯುವ ದಿನಗಳು ಕಡಿಮೆಯಾಗುತ್ತವೆ. ಕೃಷಿಯಲ್ಲಿ ಬಂಡವಾಳಶಾಹಿ ಬೆಳವಣಿಗೆಯಿಂದಾಗಿ ಹೆಚ್ಚುತ್ತಿರುವ ಯಾಂತ್ರೀಕರಣ, ಬಿತ್ತುವ, ನಾಟಿ ಮಾಡುವ, ಕಟಾವು ಮಾಡುವ ಯಂತ್ರಗಳ ಬಳಕೆಯಿಂದಾಗಿ ಕೃಷಿ ಕೂಲಿಕಾರರಿಗೆ ಕೆಲಸ ದೊರೆಯುವುದು ಕಡಿಮೆಯಾಗುತ್ತದೆ. ನೀರಾವರಿ ವಿಸ್ತರಣೆ ಆಗದಿರುವುದರಿಂದ ಕೃಷಿ ಕೂಲಿಕಾರರಿಗೆ ಕೃಷಿಯಲ್ಲಿ ಕೆಲಸದ ಅವಕಾಶಗಳು ವಿಸ್ತರಣೆ ಆಗುತ್ತಿಲ್ಲ. ಆಹಾರ ಧಾನ್ಯಗಳನ್ನು ಬೆಳೆಯುವ ಬದಲಾಗಿ ರೈತರು ಆರ್ಥಿಕ ಬೆಳೆಗಳನ್ನು ಬೆಳೆಯಲು ಆದ್ಯತೆ ನೀಡುತ್ತಿರುವುದರಿಂದಲೂ ಕೃಷಿ ಕೂಲಿಕಾರರಿಗೆ ಉದ್ಯೋಗದ ಅವಕಾಶಗಳು ಕಮ್ಮಿಯಾಗುತ್ತಿವೆ. ಕೃಷಿ ಒಂದು ಲಾಭದಾಯಕ ಉದ್ಯೋಗವಾಗಿ ಉಳಿಯದೆ ಇರುವುದರಿಂದ, ರೈತರು ಕೃಷಿ ಮಾಡುವುದನ್ನೇ ಕೈಬಿಡುತ್ತಿರುವುದು ಹೆಚ್ಚುತ್ತಿರುವ ಕೃಷಿ ಕೂಲಿಕಾರರ ನಿರುದ್ಯೋಗಕ್ಕೆ ಒಂದು ಪ್ರಮುಖ ಕಾರಣವಾಗುತ್ತಿದೆ.

ಹಿಂದೆ, ವರ್ಷದಲ್ಲಿ 100 ರಿಂದ 120 ದಿನಗಳವರೆಗೂ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕೂಲಿಕಾರರಿಗೆ ಕೆಲಸ ಸಿಗುತ್ತಿತ್ತು. ಈಗ ಅದರ ಅರ್ಧದಷ್ಟು ದಿನಗಳಿಗೂ ಕೂಲಿಕಾರರಿಗೆ ಕೃಷಿಯಲ್ಲಿ ಕೆಲಸ ಸಿಗುವುದಿಲ್ಲ. ಹೀಗಾಗಿ ಕೂಲಿಕಾರರ ಆದಾಯ ಕುಸಿದು ಅವರ ಕೊಂಡುಕೊಳ್ಳುವ ಸಾಮರ್ಥ್ಯ ಗಣನೀಯವಾಗಿ ಇಳಿಮುಖವಾಗುತ್ತಿದೆ.

ಕರ್ನಾಟಕ ಸರ್ಕಾರ ಇತ್ತೀಚೆಗೆ (30-07-2007) ಅಧಿಸೂಚನೆಯನ್ನು ಹೊರಡಿಸಿ ಕೃಷಿ ಕೂಲಿಕಾರರ ಕನಿಷ್ಠ ದಿನಗೂಲಿಯನ್ನು ರೂ.100ಕ್ಕೆ ಹೆಚ್ಚಿಸಿದೆ. ಈ ಬೇಡಿಕೆಗಾಗಿ ನಮ್ಮ ಸಂಘವು ಚಳುವಳಿ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು. ಸಸಿ ಕೀಳುವುದು, ಅಗೆಯುವುದು, ಉಳುವುದು, ಬದು ಕಟ್ಟುವುದು, ಭೂಮಿ ಸಮ ಮಾಡುವುದು, ಪಾತಿ ಮಾಡುವುದು, ಕುಂಟೆ ಹೊಡೆಯುವುದು, ಗೊಬ್ಬರ ಹಾಕುವುದು, ಒತ್ತುವುದು, ನಾಟಿ ಮಾಡುವುದು, ನೀರು ಹಾಯಿಸುವುದು, ಕೊಯ್ಯುವುದು, ಬಡಿಯುವುದು, ತೂರುವುದು, ತೆಂಗು-ಅಡಿಕೆ ಕೀಳುವುದು, ತೆಂಗು-ಅಡಿಕೆ ಸುಲಿಯುವುದು ಮೊದಲಾದ 8 ಗಂಟೆಗಳ ಕೆಲಸಕ್ಕೆ ರೂ.100 ದಿನಗೂಲಿ ನೀಡಬೇಕೆಂದೂ ಬೆಲೆ ಸೂಚ್ಯಂಕದ 2967 ಅಂಶಗಳಿಗಿಂತ ಮೇಲಿನ ಪ್ರತಿ ಅಂಶಕ್ಕೂ 3 ಪೈಸೆಯಂತೆ ತುಟ್ಟಿ ಭತ್ಯೆ ನೀಡತಕ್ಕದ್ದು ಎಂದು ಘೋಷಿಸಲಾಗಿದೆ. ಮಹಿಳಾ ಕಾರ್ಮಿಕರಿಗೆ ಪುರುಷ ಕಾರ್ಮಿಕರಷ್ಟೇ ವೇತನ ಸಂದಾಯ ಮಾಡಬೇಕೆಂದು ನಿರ್ದೇಶಿಸಲಾಗಿದೆ. ಇದೊಂದು ಸ್ವಾಗತಾರ್ಹ ಕ್ರಮವೇ ಆಗಿದ್ದರೂ ಸರ್ಕಾರ ಇದನ್ನು ಜಾರಿಗೊಳಿಸಲು ಯಾವುದೇ ದೃಢವಾದ ಕ್ರಮವನ್ನು ಕೈಗೊಳ್ಳದಿರುವುದು ಆಕ್ಷೇಪಾರ್ಹವಾಗಿದೆ. ಹೀಗಾಗಿ ಸರ್ಕಾರ ನಿಗದಿಪಡಿಸಿದ ಕೂಲಿ ಬಹುತೇಕವಾಗಿ ಕಾಗದದಲ್ಲಿ ಮಾತ್ರ ಉಳಿದು ಬಿಡುತ್ತದೆ. ಸರ್ಕಾರವೇ ನಡೆಸುತ್ತಿರುವ ತೋಟಗಳಲ್ಲಿ ಈ ಕನಿಷ್ಠ ಕೂಲಿಯನ್ನು ಜಾರಿಗೊಳಿಸಲು ಸರ್ಕಾರ ಆಸಕ್ತಿ ತೋರುವುದಿಲ್ಲ. ಕೃಷಿ ಕೂಲಿಕಾರರ ಅಸಹಾಯಕತೆ ಮತ್ತು ಸರ್ಕಾರದ ನಿರ್ಲಕ್ಷ ಧೋರಣೆಯ ಲಾಭ ಪಡೆದು ಶ್ರೀಮಂತ ರೈತರೂ ಸಹ, ಅನುಕೂಲ ಪರಿಸ್ಥಿತಿ ಇದ್ದಾಗಲೂ ಕೃಷಿ ಕೂಲಿಕಾರರಿಗೆ



ನ್ಯಾಯವಾದ ಕೂಲಿಯನ್ನು ನೀಡುವುದಿಲ್ಲ.

ಹೆಚ್ಚುತ್ತಿರುವ ವಲಸೆ

ರಾಜ್ಯದಲ್ಲಿ ಕೃಷಿ ಕೂಲಿಕಾರರಿಗೆ ಉದ್ಯೋಗದ ಅವಕಾಶಗಳು ಕಡಿಮೆಯಾಗುತ್ತಿದ್ದಂತೆ, ಅವರ ಆದಾಯ ಕುಸಿಯುತ್ತಾ ಹೋಗುತ್ತಿದ್ದಂತೆ, ಹೊಟ್ಟೆಪಾಡಿಗಾಗಿ ಕೆಲಸ ಹುಡುಕಿಕೊಂಡು ನಗರ ಪ್ರದೇಶಗಳಿಗೆ ಹಾಗೂ ಹೊರ ರಾಜ್ಯಗಳಿಗೆ ವಲಸೆ ಹೋಗುವುದು ಹೆಚ್ಚಾಗಿದೆ. 2001ರ ಜನಗಣತಿ ಮೂಲ ಪ್ರಕಾರ 19,77,215 ಜನ ಕರ್ನಾಟಕದಿಂದ ಬೇರೆ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ. ಇವೆರಲ್ಲರೂ ಕೃಷಿ ಕೂಲಿಕಾರರು ಎಂದು ಹೇಳಲಾಗದು. ಆದರೆ ಅವರಲ್ಲಿ ಒಂದು ದೊಡ್ಡ ವಿಭಾಗ ಕೆಲಸ ಹುಡುಕಿಕೊಂಡು ಹೋಗಿರುವ, ಇಲ್ಲಿ ಯಾವುದೇ ಆಸ್ತಿ ಇಲ್ಲದ ಬಡವರೇ ಆಗಿರುತ್ತಾರೆ. ಬೇರೆ ರಾಜ್ಯಗಳಿಗೆ ವಲಸೆ ಹೋದ ನಮ್ಮ ಜನ ಅಲ್ಲಿ ಹಲವು ರೀತಿಯ ಸಂಕಷ್ಟಗಳಿಗೆ ಒಳಗಾಗುತ್ತಾರೆ. ಮಹಾರಾಷ್ಟ್ರದಲ್ಲಿ ಮೇಲಿಂದ ಮೇಲೆ ಭಾಷಾಂಧರ ಬೆದರಿಕೆಗೆ ಒಳಗಾಗುತ್ತಿರುತ್ತಾರೆ. ಗೋವಾದಲ್ಲಿಯೂ ಒಮ್ಮೆ ತೀವ್ರ ದೌರ್ಜನ್ಯಕ್ಕೆ ಒಳಗಾಗಿದ್ದರು. ಗುಜರಾತ್‌ನಲ್ಲಿ ಹಿಂದೂ ಮತಾಂಧರು ಮಾಡಿದ ಜನಾಂಗೀಯ ಹತ್ಯೆಯಲ್ಲಿ 'ಗುಲ್ಬರ್ಗಾ ಕಾಲೋನಿ' ತೀವ್ರ ದಾಳಿಗೆ ತುತ್ತಾಗಿತ್ತು. ಕರ್ನಾಟಕದಲ್ಲೇ ಅವರಿಗೆ ಉದ್ಯೋಗದ ಅವಕಾಶಗಳು ದೊರೆಯುತ್ತಿದ್ದರೆ ಅವರು ಬೇರೆ ರಾಜ್ಯಗಳಿಗೆ ಹೋಗಿ ಅನಾಹುತಕ್ಕೀಡಾಗುವ ಪರಿಸ್ಥಿತಿ ತಪ್ಪುತ್ತಿತ್ತು. ಅದೇ ರೀತಿ ಬೇರೆ ರಾಜ್ಯಗಳಿಂದಲೂ ಹೊಟ್ಟೆಪಾಡಿಗಾಗಿ ಜನ ಕರ್ನಾಟಕಕ್ಕೂ ಬರುತ್ತಾರೆ. ಉದಾಹರಣೆಗೆ, ತಮಿಳುನಾಡಿನಿಂದ ಕೂಲಿಕಾರರು ಬೆಂಗಳೂರು, ಮೈಸೂರು, ಮಂಡ್ಯ, ಕೋಲಾರ ಮೊದಲಾದ ನಗರಗಳಿಗೆ ವಲಸೆ ಬರುತ್ತಾರೆ. ಕನ್ನಡ ಭಾಷಾಂಧರು ಆಗಾಗ ಅವರ ಮೇಲೆ ದೌರ್ಜನ್ಯ ಮಾಡುತ್ತಿರುತ್ತಾರೆ. ಇಂತಹ ಭಾಷಾಂಧತೆಯನ್ನು ಖಂಡಿಸಬೇಕಾಗಿದೆ ಮತ್ತು ಬೇರೆ ರಾಜ್ಯಗಳಿಂದ ಬಂದಿರುವ ಕೂಲಿಕಾರರ ಜೊತೆಯಲ್ಲಿ ಸೌಹಾರ್ದ ಸಂಬಂಧವನ್ನು ಬೆಳೆಸಿಕೊಳ್ಳಬೇಕಾಗಿದೆ.

ಆದರೆ, ಇಂದು ಕೃಷಿ ರಂಗದ ಬಿಕ್ಕಟ್ಟು ತೀವ್ರಗೊಳ್ಳುತ್ತಾ ಹೋಗುತ್ತಿರುವುದರಿಂದ ಕೂಲಿಕಾರರು ಗ್ರಾಮೀಣ ಪ್ರದೇಶಗಳಿಂದ ವಲಸೆ ಹೋಗುವುದು ಹೆಚ್ಚಾಗುತ್ತಿದೆ. ಈ ಹಿಂದೆ, ಬರಗಾಲ ಬಿದ್ದಾಗ ಕೂಲಿಕಾರರು, ಬಡ ರೈತರು ವಲಸೆ ಹೋಗುತ್ತಿದ್ದರು. ಸುಗ್ಗಿಯ ಸಮಯದಲ್ಲಿ ಒಣ ಬೇಸಾಯ ಪ್ರದೇಶದ ಕೂಲಿಕಾರರು ನೀರಾವರಿ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದರು. ಘಟ್ಟ ಪ್ರದೇಶದ ಕಾಫಿ ತೋಟಗಳಲ್ಲಿ ಕಾಫಿ, ಹಣ್ಣು ಬಿಡಿಸುವ ಸಮಯದಲ್ಲಿ ಬಯಲುಸೀಮೆಯ ಕೂಲಿಕಾರರು ವಲಸೆ ಹೋಗುತ್ತಿದ್ದರು. ಆದರೆ ಈಗ ಹೆಂಡರು ಮಕ್ಕಳನ್ನು ಕಟ್ಟಿಕೊಂಡು ಕೂಲಿಕಾರರು ಕಾಯಂ ಆಗಿ ವಲಸೆ ಹೋಗುತ್ತಾರೆ. ತಮ್ಮ ಮನೆಗಳಲ್ಲಿ ವೃದ್ಧರನ್ನು ಮಾತ್ರ ಬಿಟ್ಟು ಹೋಗುತ್ತಾರೆ. ಹೀಗೆ ಮನೆಗಳಲ್ಲಿ ಬಿಟ್ಟು ಹೋದ ವೃದ್ಧರು ಅನೇಕ ಸಲ ಅನಾರೋಗ್ಯಕ್ಕೆ ತುತ್ತಾಗಿ, ಉಪಚಾರ ದೊರೆಯದೆ ಸಾವನ್ನಪ್ಪುತ್ತಿರುತ್ತಾರೆ.

ಕೆಲಸ ಹುಡುಕಿಕೊಂಡು ನಗರ ಪ್ರದೇಶಗಳಿಗೆ ವಲಸೆ ಬರುವ ಕೂಲಿಕಾರರು ರಸ್ತೆ ಬದಿಗಳಲ್ಲಿ, ಚರಂಡಿಗಳ ಪಕ್ಕದಲ್ಲಿ ಅಥವಾ ಕೊಳಚೆ ಪ್ರದೇಶಗಳಲ್ಲಿ ಸಣ್ಣ ಸಣ್ಣ ಗುಡಿಸಲುಗಳನ್ನು ಕಟ್ಟಿಕೊಂಡು ಅತ್ಯಂತ ಅನಾರೋಗ್ಯಕರ ಪರಿಸರದಲ್ಲಿ ದಿನಕಳೆಯುತ್ತಾರೆ. ಇಂತಹ ಗುಡಿಸಲುಗಳು ಆಗಾಗ ಬೆಂಕಿ ಅನಾಹುತಗಳಿಗೆ ಬಲಿಯಾಗುತ್ತವೆ. ಮಳೆ ಗಾಳಿಗೆ ಈ ಗುಡಿಸಲುಗಳ ಮೇಲೆ ಮರಗಳು ಬಿದ್ದು ಜೀವ ಹಾನಿಗೆ ಕಾರಣವಾಗುತ್ತವೆ.

ನಗರಗಳಲ್ಲಿಯೂ ಕಟ್ಟಡ, ರಸ್ತೆ, ನಿರ್ಮಾಣವಾದಂತಹ ಕೆಲಸಗಳಲ್ಲಿ ದೈತ್ಯ ಯಂತ್ರಗಳ ಬಳಕೆ ಹೆಚ್ಚುತ್ತಿರುವುದರಿಂದ ಕೂಲಿಕಾರರಿಗೆ ಉದ್ಯೋಗದ ಅವಕಾಶಗಳು ಕಮ್ಮಿಯಾಗುತ್ತಿವೆ. ಕಂಟ್ರಾಕ್ಟರುಗಳು ಇವರ ಅಸಹಾಯಕತೆಯ ಲಾಭ ಪಡೆಯುತ್ತಾರೆ. ಆದಷ್ಟು ಕಡಿಮೆ ಕೂಲಿ ಕೊಟ್ಟು ಹಗಲು-ರಾತ್ರಿ ದುಡಿಸುತ್ತಾರೆ. ದೊಡ್ಡ ದೊಡ್ಡ ಕಟ್ಟಡಗಳು ಕಟ್ಟುವ ಹಂತದಲ್ಲೇ ಕುಸಿದು ಬಿದ್ದು ಕೂಲಿಕಾರರ ಪ್ರಾಣವನ್ನು ಬಲಿತೆಗೆದುಕೊಳ್ಳುತ್ತವೆ. ಮಣ್ಣನ್ನು ಅಗೆಯುವಾಗ ಭೂ ಕುಸಿತ ಉಂಟಾಗಿ ಕೂಲಿಕಾರರು ಜೀವಂತ ಸಮಾಧಿಯಾಗುತ್ತಾರೆ. ಅಪಘಾತಗಳು ಸಂಭವಿಸಿದಾಗ ಚಿಕಿತ್ಸೆ ವ್ಯವಸ್ಥೆ ಮಾಡಲು ಕಂಟ್ರಾಕ್ಟರುಗಳು ವ್ಯವಸ್ಥೆ ಮಾಡುವುದಿಲ್ಲ. ಪರಿಹಾರವನ್ನು ಕೊಡುವುದಿಲ್ಲ. ತಿಂಗಳುಗಟ್ಟಲೆ ದುಡಿಸಿ ನಿಗದಿತ ಸಂಬಳವನ್ನು ಕೊಡದೆ ಕೈಕೊಟ್ಟ ಪ್ರಸಂಗಗಳೂ ಕೂಡಾ ಸಂಭವಿಸುತ್ತವೆ. ವಲಸೆ ಬರುವ ಮಹಿಳಾ ಕೂಲಿಕಾರರ ಪರಿಸ್ಥಿತಿ ಇನ್ನೂ ಹೆಚ್ಚು ಚಿಂತಾಜನಕವಾಗಿರುತ್ತದೆ. ಹೊಟ್ಟೆ ಪಾಡಿಗಾಗಿ ಎಲ್ಲ ರೀತಿಯ ಹಿಂಸೆಯನ್ನು ಅನುಭವಿಸ ಬೇಕಾಗುತ್ತದೆ. ತಂದೆತಾಯಿ ಯರನ್ನು ಹಿಂಬಾಲಿಸಿ ಬರುವ ಅವರ ಮಕ್ಕಳು ಸಹ ಬಾಲ ಕಾರ್ಮಿಕರಾಗಿ ದುಡಿಯಬೇಕಾಗುತ್ತದೆ. ವಿದ್ಯಾಭ್ಯಾಸದಿಂದ ವಂಚಿತರಾಗುವ ಅವರ ಭವಿಷ್ಯ ಸಹಜವಾಗಿಯೇ ಕರಾಳವಾಗುತ್ತದೆ.

ಸಮರ್ಪಕವಾಗಿ ಜಾರಿಯಾಗದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

ನಮ್ಮ ಹಳ್ಳಿಗಳ ಆಸುಪಾಸಿನಲ್ಲಿ ಕೂಲಿಕಾರರಿಗೆ

ಪುಟ 14ಕ್ಕೆ

ಬಾಗೇಪಲ್ಲಿಯಲ್ಲಿ ರಾಜ್ಯ ಸಮ್ಮೇಳನ

ತೀವ್ರ ಸಂಕಷ್ಟಗಳಿಗೆ ಒಳಗಾಗಿರುವ ಕೃಷಿ ಕೂಲಿಕಾರರ ಸಮುದಾಯವನ್ನು ಸಂಘಟಿಸಿ, ಹೋರಾಟ ಮಾಡಲು 1982 ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಕ್ಕೆ ಈಗ 25 ವರ್ಷ. ಸಂಘದ ಬೆಳ್ಳಿ ಹಬ್ಬದ ಅಂಗವಾಗಿ ಅಖಿಲ ಭಾರತ ಮಟ್ಟದ 3 ಜಾಥಾಗಳನ್ನು ಹೊರಡಿಸಲಾಗುತ್ತಿದ್ದು ದಕ್ಷಿಣ ಜಾಥಾ ಇದೇ ನವೆಂಬರ್ 27-28 ರಂದು ಕರ್ನಾಟಕದಲ್ಲಿ ಸಂಚಿಸಲಿದೆ. ಜಾಥಾ ಸ್ವಾಗತಿಸಿ ಮಂಡ್ಯ, ಬೆಂಗಳೂರು ಮತ್ತು ಬಾಗೇಪಲ್ಲಿಯಲ್ಲಿ ಬೃಹತ್ ಸಾರ್ವಜನಿಕ ಸಭೆಗಳನ್ನು ನಡೆಸಲು ನಿರ್ಧರಿಸಲಾಗಿದೆ.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಕ್ಕೆ ಸೇರ್ಪಡೆಯಾಗಿರುವ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 4ನೇ ರಾಜ್ಯ ಸಮ್ಮೇಳನವು ಇದೇ ನವೆಂಬರ್ 2 ರಿಂದ 4 ರವರೆಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ನಡೆಯಲಿದೆ. ಸಮ್ಮೇಳನವು ರಾಜ್ಯದ ಕೃಷಿ ಕೂಲಿಕಾರರ ಜ್ವಲಂತ ಸಮಸ್ಯೆಗಳನ್ನು ಚರ್ಚಿಸಲಿದೆ. ಮುಂದೆ ನಡೆಸಬೇಕಾದ ಸಮರಶೀಲ ಹೋರಾಟಗಳನ್ನು ಮುನ್ನಡೆಸಲು ಹೊಸ ನಾಯಕತ್ವವನ್ನು ಆಯ್ಕೆ ಮಾಡಲಿದೆ.

ಶರತ್‌ಚಂದ್ರ

ಅಮೆರಿಕದ ದಾಳಿ ವಿರುದ್ಧ ಸಿರಿಯನ್ನರ ತೀವ್ರ ಪ್ರತಿಭಟನೆ

ಅಮೆರಿಕ ಸಿರಿಯಾದ ಪೂರ್ವ ಪ್ರದೇಶಗಳ ಮೇಲೆ ಮಾಡಿದ ವಿಮಾನದಾಳಿಯ ವಿರುದ್ಧ ಸಾವಿರಾರು ಸಿರಿಯನ್ನರು ಬೀದಿಗಿಳಿದು ತೀವ್ರ ಪ್ರತಿಭಟನೆ ಮಾಡಿದರು. ವಿದೇಶೀ ಜೆಹಾದಿಗಳು ಸಿರಿಯಾ ಮೂಲಕ ಇರಾಕ್ ಗೆ ಹೋಗುವುದನ್ನು ತಪ್ಪಿಸಲು ಈ ಕಾರ್ಯಾಚರಣೆ ನಡೆಯಿತು ಎಂಬುದು ಅಮೆರಿಕನ್ ಅಂಬೋಣ. ಇದು ನಿಶ್ಶಸ್ತ್ರ ನಾಗರಿಕರ ಮೇಲೆ ಬರ್ಬರ ದಾಳಿ. ಎಂಟು ಸಿರಿಯನ್ ನಾಗರಿಕರು ಈ ದಾಳಿಯಲ್ಲಿ ಸತ್ತಿದ್ದಾರೆ. ಎಂಬುದು ಸಿರಿಯನ್ ಜನರ ಅಭಿಪ್ರಾಯ. ಸಿರಿಯನ್ ಪ್ರದರ್ಶನಕಾರರು ಅಮೆರಿಕನ್ ರಾಯಭಾರ ಕಚೇರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು. ಪೋಲಿಸರು ಪ್ರದರ್ಶನಕಾರರು ರಾಯಭಾರ ಕಚೇರಿ ಹತ್ತಿರ ಹೋಗದಂತೆ ತಡೆದರು. ಸಿರಿಯನ್ ಸರ್ಕಾರ ಸಹ ತೀವ್ರ ಪ್ರತಿಭಟನೆ ಮಾಡಿದೆ. ಅಮೆರಿಕನ್-ವಿರೋಧಿ ಭಾವನೆ ಎಷ್ಟು ಜೋರಾಗಿದೆಯೆಂದರೆ ಅಮೆರಿಕನ್ ತನ್ನ ರಾಯಭಾರ ಕಚೇರಿ ಮುಚ್ಚಬೇಕಾಗಿ ಬಂದಿದೆ. ಅದು ಅನಿರ್ದಿಷ್ಟ ಕಾಲ ಮುಂದುವರೆಯಬಹುದು ಎಂದು ಅಮೆರಿಕ ಹೇಳಿದೆ. ಅಮೆರಿಕದ ಸಾಂಸ್ಕೃತಿಕ ಕೇಂದ್ರ ಮತ್ತು ಸ್ಕೂಲನ್ನೂ ಮುಚ್ಚಬೇಕಾಗಿ ಬಂದಿದೆ.



ಲೆಬನಾನ್ ನ 'ಹಿಜಬೊಲ್ಲಾ ಇಸ್ಲಾಮಿಕ್ ಗುಂಪಿಗೆ ಮತ್ತು ಇರಾಕ್ ಒಳಗೆ ಜೆಹಾದಿ ಹೋರಾಟಗಾರರು ಸಿರಿಯಾ ಮೂಲಕ 'ಕಳ್ಳ ಸಾಗಾಣಿಕೆ' ಮಾಡಲು ಸಿರಿಯಾ ಸಹಾಯ ಮಾಡುತ್ತದೆ. ಲೆಬನಾನ್ ಪ್ರದಾನಿ ಕೊಲೆಯಲ್ಲೂ ಸಿರಿಯಾದ ಕೈವಾಡ ಇದೆ. ಎಂದು ಅಮೆರಿಕದ ಆಪಾದನೆ. ಈ ಆಪಾದನೆ ಹುರುಳಿಲ್ಲದ್ದು. ಸಿರಿಯಾದಲ್ಲಿ ಹಸ್ತಕ್ಷೇಪ ನಡೆಸಲು ಇದು ಒಂದು ನೆಪ ಅಂತ ಸಿರಿಯಾ ಉತ್ತರ. 2004 ರಿಂದ ಸಿರಿಯಾ ಮೇಲೆ ಅಮೆರಿಕ ಆರ್ಥಿಕ ದಿಗ್ಬಂಧನ ಹೊರಿಸಿದೆ. ಈ ದಾಳಿಯಿಂದ ಸಿರಿಯಾ-ಅಮೆರಿಕ ನಡುವೆ ಸಂಬಂಧ ಇನ್ನಷ್ಟು ಹದಗೆಟ್ಟಿದೆ. ○

ಮೆಕ್ಸಿಕನ್ ತೈಲ ಖಾಸಗೀಕರಣಕ್ಕೆ ತೀವ್ರ ವಿರೋಧ

ಮೆಕ್ಸಿಕೊದ ಸರ್ಕಾರ ತೈಲ ಕೈಗಾರಿಕೆಯ ರೂಪುರೇಷೆ ಬದಲಿಸುವ 7 ಮಸೂದೆಗಳನ್ನು ಪಾರ್ಲಿಮೆಂಟಿನಲ್ಲಿ ಇಡುವ ಪ್ರಯತ್ನ ಮಾಡಿತು. ಈ ಮಸೂದೆಗಳ ನಿಜವಾದ ಉದ್ದೇಶ ಸರ್ಕಾರಿ-ಸ್ವಾಮ್ಯದಲ್ಲಿರುವ ತೈಲ ಕೈಗಾರಿಕೆಯನ್ನು ಹಿಂದಿನ ಬಾಗಿಲಿಂದ ಖಾಸಗೀಕರಣ ಗೊಳಿಸುವುದು. ಎಂದು ಮೆಕ್ಸಿಕೊದ ಎಡ ವಿರೋಧಿ ಪಾರ್ಲಿಮೆಂಟು ಸದಸ್ಯರ ಅಭಿಪ್ರಾಯ. ಅದನ್ನು ತಡೆಯಲು ಎಡ ಪಾರ್ಲಿಮೆಂಟು ಸದಸ್ಯರು ತೀವ್ರ ಪ್ರಯತ್ನ ನಡೆಸಿದರು.

1938 ರಲ್ಲಿ ರಾಷ್ಟ್ರೀಕರಣ ಮಾಡಲ್ಪಟ್ಟ ತೈಲ ಕೈಗಾರಿಕೆ ಮೆಕ್ಸಿಕೊದ ರಾಷ್ಟ್ರೀಯ ಸಾರ್ವಭೌಮತೆಯ ಪ್ರತೀಕ. ಅದನ್ನು ಖಾಸಗೀಕರಿಸಿ ವಿದೇಶೀ ಕಂಪನಿಗಳಿಗೆ ಒಪ್ಪಿಸಲು ಮೆಕ್ಸಿಕೊದಲ್ಲಿ ತೀವ್ರ ವಿರೋಧವಿದೆ. ಮೆಕ್ಸಿಕೊದ ಎಡ ಪಾರ್ಲಿಮೆಂಟು ಸದಸ್ಯರು ಈ ವಿರೊಧವನ್ನೇ ಪಾರ್ಲಿಮೆಂಟು ಒಳಗೆ ಹೋರಾಟಕ್ಕೆ ಒಯ್ದಿದ್ದಾರೆ.

ಕೃಷಿ ಕೂಲಿಕಾರರು.......

ಪುಟ 13 ರಿಂದ

ಸಾಕಷ್ಟು ಕೆಲಸ ಸಿಗುವಂತಾದರೆ ಅವರು ಸಂತೃಪ್ತರಂತೆ ಕುಟುಂಬ ಸಮೇತರಾಗಿ ವಲಸೆ ಹೋಗಬೇಕಾಗುತ್ತಿರಲಿಲ್ಲ. 2005ರಲ್ಲಿ ಸಂಸತ್ತಿನಲ್ಲಿ ಅಂಗೀಕರಿಸಲ್ಪಟ್ಟ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಎಲ್ಲಾ ಕಡೆ ಸಮರ್ಪಕವಾಗಿ ಜಾರಿಗೆ ಬಂದಿದ್ದರೆ ಕೂಲಿಕಾರರ ವಲಸೆ ಸಮಸ್ಯೆಗೆ ಸ್ವಲ್ಪವಾದರೂ ಪರಿಹಾರ ಸಿಕ್ಕಿರುತ್ತಿತ್ತು. ಎಡಪಕ್ಷಗಳ ಒತ್ತಡ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಅಖಿಲ ಭಾರತ ಕಿಸಾನ್ ಸಭಾ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯಂತಹ ಸಂಘಟನೆಗಳ ಹೋರಾಟಕ್ಕೆ ಮಣಿದು ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಈ ಕಾಯ್ದೆಯನ್ನು ಸಂಸತ್ತಿನಲ್ಲಿ ಪಾಸ್ ಮಾಡಿಸಿಕೊಂಡರೂ ಬಂಡವಾಳಶಾಹಿ ಭೂ ಮಾಲಕ ಶಕ್ತಿಗಳ ಒತ್ತಡಕ್ಕೆ ಒಳಗಾಗಿರುವ ಕೇಂದ್ರ ಕಾಂಗ್ರೆಸ್ ಸರ್ಕಾರ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಆಸಕ್ತಿ ತೋರುತ್ತಿಲ್ಲ. ಕರ್ನಾಟಕದಂತಹ ಬಿಜೆಪಿ ಸರ್ಕಾರಗಳಿರುವ ರಾಜ್ಯಗಳಂತೂ ರಾಜಕೀಯ ದುರುದ್ದೇಶದಿಂದಾಗಿ ಯೋಜನೆ ಜಾರಿಗಾಗಿ ಲಭ್ಯ ಇರುವ ಕೋಟಿಗಟ್ಟಲೆ ರೂಪಾಯಿಗಳ ಸದ್ಬಳಕೆಯಾಗುತ್ತಿಲ್ಲ.

ಈ ಯೋಜನೆಯು ಉದ್ಯೋಗವನ್ನು ಒಂದು ಹಕ್ಕಾಗಿ ಪಡೆಯುವತ್ತ ಒಂದು ಮಹತ್ವದ ಹೆಜ್ಜೆಯಾಗಿದೆ. ಇದರಿಂದ ಕೂಲಿಕಾರರಿಗೆ ಕಾನೂನಿನ ಬಲ ಸಿಕ್ಕಂತಾಗಿದೆ. ಸರ್ಕಾರ ಕೆಲಸ ಒದಗಿಸಲೇಬೇಕಾದ ಒತ್ತಡಕ್ಕೆ ಒಳಗಾಗುತ್ತದೆ. ಕೆಲಸ ಸಿಗದೆ ಕಂಗಾಲಾಗಿರುವ ಗ್ರಾಮೀಣ ಕೂಲಿಕಾರರಿಗೆ ಸ್ವಲ್ಪವಾದರೂ ಪರಿಹಾರ ಸಿಗಲಿದೆ. ನಗರ ಪ್ರದೇಶಗಳಿಗೆ ವಲಸೆಹೋಗುವುದು ಕೆಲ ಮಟ್ಟಿಗಾದರೂ ಕಡಿಮೆಯಾಗುತ್ತದೆ. ಗ್ರಾಮೀಣ ಮಹಿಳೆಯರನ್ನು ಸಶಕ್ತಗೊಳಿಸಲು ನೆರವಾಗಲಿದೆ. ಗ್ರಾಮೀಣ ಬಡವರ ಸಾಮೂಹಿಕ ಚೌಕಾಸಿಯ ಶಕ್ತಿ ವೃದ್ಧಿಯಾಗಲಿದೆ. ಕೂಲಿಕಾರರಲ್ಲಿ ವರ್ಗ ಪ್ರಜ್ಞೆ ಬೆಳೆಯುತ್ತದೆ. ಈ ಯೋಜನೆಯನ್ನು ವಿರೋಧಿಸುವ ಜಮೀನ್ದಾರರು, ಲೇವಾದೇವಿಗಾರರು, ರಾಜಕೀಯ ಪುಡಾರಿಗಳು ತಮ್ಮ ಮಿತ್ರರಲ್ಲ ಎಂಬುದನ್ನು ಅವರು ಮನವರಿಕೆ ಮಾಡಿಕೊಳ್ಳುವರು.

ಯೋಜನೆಯ ಜಾರಿಯಲ್ಲಿ ಆಳುವ ವರ್ಗಗಳ ಹಾಗೂ ಅಧಿಕಾರಿಗಳ ನಿರಾಸಕ್ತಿ, ಅಸಡ್ಡೆ, ಉದ್ದೇಶಪೂರ್ವಕ ಪಕ್ಷಪಾತ ಎದ್ದುಕಾಣುತ್ತದೆ. ಕೆಲಸ ಒದಗಿಸುವಲ್ಲಿ ವಿಳಂಬ ಅಂದಾಜು ಪತ್ರಿಕೆ ತಯಾರಿಕೆಯಲ್ಲಿ ವಿಳಂಬ, ಉದ್ಯೋಗ ಪಾಸ್‌ಪುಸ್ತಕ ನೀಡುವಲ್ಲಿ ಕೆಲಸ ಕೋರಿ ಅರ್ಜಿ ಸ್ವೀಕರಿಸುವಲ್ಲಿ ವಿಳಂಬ, ಇಂಜಿನಿಯರುಗಳ ಕಿರುಕುಳ, ಯಂತ್ರಗಳ ಬಳಕೆ, ಸುಳ್ಳುದಾಖಲೆಗಳ ಸೃಷ್ಟಿ, ಹೆಚ್ಚು ಕೆಲಸ ಮಾಡಬೇಕೆಂಬ ಒತ್ತಾಯ, ಮಹಿಳಾ ಕೂಲಿಕಾರರಿಗೆ ಪಕ್ಷಪಾತ, ಅಧಿಕಾರಿಗಳ ಅಲಭ್ಯತೆ, ಭೂ ಮಾಲೀಕರಿಂದ ವಿರೋಧ ಮೊದಲಾದ ಅಡೆತಡೆಗಳಿಂದಾಗಿ ಯೋಜನೆಯ ಲಾಭ ಕೂಲಿಕಾರರಿಗೆ ಸರಿಯಾಗಿ ಸಿಗದಂತಾಗಿದೆ.

ವರ್ಷ	ನೋಂದಾಯಿತ ಅರ್ಜಿಗಳ ಸಂಖ್ಯೆ	ಉದ್ಯೋಗಚೀಟಿ ವಿತರಿಸಿದ ಸಂಖ್ಯೆ	ಉದ್ಯೋಗ ನೀಡಿಕೆ	ಲಭ್ಯವಿದ್ದ ಮೊತ್ತ (ಲಕ್ಷ ರೂ.)	ವೆಚ್ಚ (ಲಕ್ಷ.ರೂ)
1. 2006-07(5 ಜಿಲ್ಲೆ)	801793	795600	545185	341133.36	25189.7
2. 2007-08(11 ಜಿಲ್ಲೆ)	1583802	1523091	549994	41925.47	23650.8
3. 2008-09 (29 ಜಿಲ್ಲೆ)	2605958	2135374	280176	48255.77	7258.4
ಒಟ್ಟು	4991553	4454065	1375355	124314.60	56098.9

ಯೋಜನೆಯನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಿ ಈಗಾಗಲೇ 8 ತಿಂಗಳು ಕಳೆದಿದ್ದರೂ ಬೆಂಗಳೂರು(ಗ್ರಾ), ಬೆಂಗಳೂರು(ನ), ವಿಜಾಪುರ, ಚಾಮರಾಜನಗರ, ದಕ್ಷಿಣ ಕನ್ನಡ, ಹಾವೇರಿ, ಮೈಸೂರು, ತುಮಕೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒದಗಿಸಲಾದ ಮೊತ್ತದಲ್ಲಿ ಒಂದು ರೂಪಾಯಿಯನ್ನೂ ಇದುವರೆಗೆ ಖರ್ಚು ಮಾಡಿಲ್ಲ. ರಾಜ್ಯಕ್ಕೆ ಕಳೆದ 3 ವರ್ಷಗಳಲ್ಲಿ ಒದಗಿಸಲಾದ ಒಟ್ಟು ಮೊತ್ತ 124315 ಲಕ್ಷ ರೂ.ಗಳಲ್ಲಿ ಇದುವರೆಗೆ ಕೇವಲ 56099 ಲಕ್ಷ ರೂ.ಗಳು ಮಾತ್ರ ವೆಚ್ಚವಾಗಿವೆ.

ಪಡಿತರ ಅವ್ಯವಸ್ಥೆ

ಕೃಷಿಯಲ್ಲಿ ಉದಾರೀಕರಣ ಧೋರಣೆಗಳ ಅನುಷ್ಠಾನದಿಂದಾಗಿ ಕಡಿಮೆಯಾಗುತ್ತಾ ಹೋಯಿತು ಮಾತ್ರವಲ್ಲ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಡಿಯಲ್ಲಿ ರೇಷನ್ ವಿತರಣೆ ಮಾಡಲುಬೇಕಾಗುವ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುವ ಪ್ರಕ್ರಿಯೆಯನ್ನೂ ಸರ್ಕಾರ ಕಡಿತ ಮಾಡಲು ಆರಂಭಿಸಿತು. 1990ರ ದಶಕದ ಆರಂಭದಲ್ಲೇ ಆಹಾರ ಸಬ್ಸಿಡಿ ಕಡಿತ ಮಾಡಲಾಯಿತು. ರೇಷನ್ ದರಗಳನ್ನು ಏರಿಸಲಾಯಿತು. ಆಹಾರ ಸಬ್ಸಿಡಿ ಬಡವರಿಗೆ ತಲುಪಬೇಕು ಎಂದು ಹೇಳಿಕೊಂಡು ರೇಷನ್ ವಿತರಣೆಯಲ್ಲಿ 'ಟಾರ್ಗೆಟ್' ಪದ್ಧತಿಯನ್ನು ಆರಂಭಿಸಲಾಯಿತು. ಬಡತನ ರೇಖೆ ಕೆಳಗೆ(ಬಿಪಿಎಲ್) ಇರುವವರು ಮತ್ತು ಬಡತನ ರೇಖೆ ಮೇಲೆ (ಎಪಿಎಲ್) ಇರುವವರು ಎಂದು ವಿಂಗಡನೆ ಮಾಡಲಾಯಿತು. ಈ ರೀತಿ ವಿಂಗಡನೆ ಮಾಡಲು ಅಸಂಬದ್ಧ ಮಾನದಂಡಗಳನ್ನು ರೂಪಿಸಲಾಯಿತು. ರೇಷನ್ ವ್ಯವಸ್ಥೆಯನ್ನು ಹಂತ ಹಂತವಾಗಿ ಕೈಬಿಡುವುದೇ 'ಟಾರ್ಗೆಟ್' ಪದ್ಧತಿಯ ಉದ್ದೇಶವಾಗಿದೆ. ಯಾವ ಯಾವ ದೇಶಗಳಲ್ಲಿ ಈ ಪದ್ಧತಿಯನ್ನು ಆರಂಭಿಸಲಾಗಿದೆಯೋ ಆ ದೇಶಗಳಲ್ಲಿ ರೇಷನ್ ವ್ಯವಸ್ಥೆಗಾಗಿ ಸರ್ಕಾರ ಆಹಾರ ಧಾನ್ಯಗಳನ್ನು ಕೊಂಡುಕೊಂಡು ದಾಸ್ತಾನು ಮಾಡುವುದನ್ನು ನಿಧಾನವಾಗಿ ನಿಲ್ಲಿಸಲಾಗುತ್ತಿದೆ. ಇದುವೇ ವಿಶ್ವಬ್ಯಾಂಕ್, ವಿಶ್ವ ವ್ಯಾಪಾರ ಸಂಘಟನೆಗಳ ಉದ್ದೇಶವಾಗಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವ ದರಗಳಿಂದ ಭಿನ್ನವಾದ ದರಗಳಲ್ಲಿ ಏನನ್ನು ಕೊಂಡುಕೊಳ್ಳಲು ಅಥವಾ ಮಾರಾಟ ಮಾಡಲು ಸರ್ಕಾರ ಮುಂದಾಗಬಾರದೆಂದೇ ಈ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಒತ್ತಡ ಹೇರುತ್ತಿವೆ.

ಈ ನಿರ್ದೇಶನಗಳಿಗೆ ಅನುಗುಣವಾಗಿ ಕರ್ನಾಟಕದಲ್ಲಿಯೂ ರೇಷನ್ ವ್ಯವಸ್ಥೆಯಲ್ಲಿ 'ಟಾರ್ಗೆಟ್' ಪದ್ಧತಿಯನ್ನು ಅಳವಡಿಸಿಲಾಯಿತು. ಮಾತ್ರವಲ್ಲದೆ ಬಿಪಿಎಲ್ ರೇಷನ್ ಕಾರ್ಡುಗಳನ್ನು ಗಣನೀಯ ಸಂಖ್ಯೆಯಲ್ಲಿ ಕಡಿತ ಮಾಡಲಾಯಿತು. ಹೊಸ ಸಮೀಕ್ಷೆಯ ಹೆಸರಿನಲ್ಲಿ ಕಾರ್ಡುಗಳ ವಿತರಣೆ ಇದುವರೆಗೂ ಪೂರ್ಣಗೊಳ್ಳಲಿಲ್ಲ. ಈ ನಡುವೆ ಹಳೆಯ ಪದ್ಧತಿಯನ್ನು ಬಿಟ್ಟು ಯುನಿಟ್ ಪದ್ಧತಿಯನ್ನು ಜಾರಿಗೆ ತರುವ ಮೂಲಕ ಒಂದು ಕುಟುಂಬದ ಒಬ್ಬ ಸದಸ್ಯನಿಗೆ ತಿಂಗಳಿಗೆ ಕೇವಲ 4 ಕೆ.ಜಿ.ಅಕ್ಕಿ ವಿತರಿಸಲಾರಂಭಿಸಲಾಯಿತು. ರೇಷನ್ ಪದ್ಧತಿಯಲ್ಲಿನ ಈ ಅವ್ಯವಸ್ಥೆಯಿಂದಾಗಿ ನಿಗದಿತ ಆದಾಯ ಇಲ್ಲದ ಕೃಷಿ ಕೂಲಿಕಾರರು ಹಾಗೂ ಅಸಂಘಟಿತ ವಲಯದ ದುಡಿಮೆಗಾರರು ತೀವ್ರ ಸಂಕಷ್ಟಕ್ಕೆ ಒಳಗಾಗುವಂತಾಯಿತು.

ಪರಿಸಾಟಿ ಎಲ್ಲಿದೆ ಅಕ್ಟೋಬರ್ ಕ್ರಾಂತಿಗೆ ?

ತ 11 ರಿಂದ

ಳಿ. ಆಂತರಿಕ ಸವಾಲುಗಳು... ಹೀಗೇ. ೀವಿಯಟ್ ರಷ್ಯಾ ಈ ಸವಾಲನ್ನು ದೃಢವಾಗಿ ುರಿಸಿತು.

ಸಿಸ್ಟರನ್ನು ಸದೆ ಬಡಿದದ್ದು

ಹಿಟ್ಲರ್ ನೇತೃತ್ವದ ಜರ್ಮನಿ, ಇಟಲಿ, ಜಪಾನ್ ಸಿಸ್ಟರು ಜಗತ್ತನ್ನೇ ಕಬಳಿಸುವ ಹುಚ್ಚು ಹಸದಲ್ಲಿ, ಜಗತ್ತಿನ ಸರ್ವನಾಶಕ್ಕೆ, ಭೀಕರ ನಾಶಕಾರಿ ಯುದ್ಧಕ್ಕೆ ಮುಂದಾದಾಗ ಘೋರ, ಾಚಿಕ ಫ್ಯಾಸಿಸ್ಟರನ್ನು ನಿರ್ಣಾಯಕವಾಗಿ ಲಿಸಿದ್ದು ಸೋವಿಯಟ್ ರಷ್ಯ. ಈ ಉದಾತ್ತ ಯಕ್ಕಾಗಿ ಪ್ರಾಣಕೊಟ್ಟ ರಷ್ಯನ್ನರ ಸಂಖ್ಯೆ 2 ೀಟಿ!!

ಎರಡನೆಯ ಮಹಾಯುದ್ಧ ನಡೆದ ಲಘಟ್ಟದಲ್ಲಿ ಕರ್ನಾಟಕ (ಆಗಿನ್ನೂ ಏಕೀಕರಣ ರಲ್ಲ ಆದರೂ) ದ ಒಟ್ಟು ಜನ ಸಂಖ್ಯೆ ಕೂಡ ಷ್ಟು ಇರಲಿಲ್ಲ ಅನ್ನುವುದನ್ನು ಕಲ್ಪಿಸಿಕೊಂಡರೆ ಮಾಜವಾದಿ ರಷ್ಯಾದ ಜನತೆಯ ತ್ಯಾಗ ಲಿದಾನದ ಅಗಾಧತೆ ಅರ್ಥವಾಗುತ್ತದೆ. ಕ್ಟೋಬರ್ ಕ್ರಾಂತಿ ರಷ್ಯನ್ನರಲ್ಲಿ ಮನುಕುಲದ ಣೆಗಾಗಿ ಅಂತ್ಯಂತ ಧೀಮಂತ ತ್ಯಾಗಕ್ಕೆ ುಂದಾಗುವ ಕೆಚ್ಚನ್ನು, ಬದ್ಧತೆಯನ್ನು ೂಡಿಸುವಲಿ ಯಶಸ್ವಿಯಾಗಿತ್ತು.

ಾಧ ಸಾಧನೆ - ಗಾಢ ಪ್ರಭಾವ

ರಷ್ಯಾದ ಅಕ್ಟೋಬರ್ ಕ್ರಾಂತಿ - ರಷ್ಯಾದಲ್ಲಿ ಧಿಸಿದ್ದು, ಆಮೂಲಕ ಜಗತ್ತಿನ ಮೇಲೆ ಬೀರಿದ ಭಾವ ಅಗಾಧವಾದದ್ದು.


ರಷ್ಯಾದಲ್ಲಿ ಎಲ್ಲರಿಗೂ ಶಿಕ್ಷಣ, ನಿರುದ್ಯೋಗದ ಂಪೂರ್ಣ ನಿವಾರಣೆ, ಜನರಿಗೆ ಉಚಿತ ರೋಗ್ಯದ ಸೌಕರ್ಯಗಳು, ಸರ್ವರಿಗೂ ವಸತಿ, ಹಿಳೆಯರಿಗೆ ಸಮಾಜದಲ್ಲಿ ಸಮಾನವಾದ ನಮಾನಗಳ ಹಕ್ಕುಗಳು, ಬಂಡವಾಳಶಾಹಿಯ ತ್ತು ಜಮೀನ್ದಾರರ ಕಪಿಮುಷ್ಠಿಯಿಂದ ಮುಕ್ತವಾದ ರ್ಮಿಕ - ರೈತರ ಬದುಕು, ದುಡಿಯುವ ಜನ ಾಗಗಳಿಗೆ ಕ್ರೀಡೆ, ಕಲೆ, ಸಂಸ್ಕೃತಿ ಮತ್ತಿತರ ುವಟಿಗಳಲ್ಲಿ ಭಾಗಿಯಾಗ ಬಹುದಾದಂತಹ ನ್ನತ ಮಟ್ಟದ ಜೀವನದ ಖಾತರಿ, ನಿವೃತಿ ೀತನ, ವೃದ್ಧಾಶ್ರಮಗಳು, ಓಹೋ.. ಜಗತ್ತು ಂದಿನವರೆಗೆ ಕಂಡು ಕೇಳರಿಯದ ಸೌಲಭ್ಯಗಳು ುಡಿಯುವ ಜನತೆಗೆ ಲಭಿಸಿದವು.

ಪರರಿಗಾಗಿ ದುಡಿತ, ಪರರ ಜೀತಗಳಲ್ಲೇ ದುಕು ಸವೆಸುತ್ತಿದ್ದ ದುಡಿಯುವ ಜನರಿಗೆ ಜವಾದ ಸ್ವಾತಂತ್ರ್ಯ, ಸಮಾನತೆಯನ್ನು, ನಿಜವಾದ ಜಾಪ್ರಭುತ್ವ - ಸಮಾಜವಾದಿ ಪ್ರಜಾಪ್ರಭುತ್ವವನ್ನು ನುಭವಿಸುವ, ಆಚರಿಸುವ ಅವಕಾಶ.

ಬಂಡವಾಳಶಾಹಿ ದೇಶಗಳಲ್ಲಿ ನಗರ ಪ್ರದೇಶಗಳ ಾಳಿಗೇರಿಗಳಲ್ಲಿ, ಹಂದಿ ಗೂಡುಗಳಂತಹ ನೆಗಳಲ್ಲಿ ವಾಸಿಸುತ್ತಾ, ದುಡಿಮೆಯ ಅವಧಿಯ ಕ್ಷವೇ ಇಲ್ಲದೆ, ಸ್ವಾಭಿಮಾನ, ಆತ್ಮಗೌರವಕ್ಕೆ ಬೆಲೆ ಲ್ಲದಂತೆ ಬದುಕು ಸವೆಸುವುದಕ್ಕಿಂತ ಇದು ಷ್ಟೊಂದು ಭಿನ್ನವಾದ ಬದುಕು !!! ಹಾಗಾಗಿಯೇ ದು ಇಡೀ ಜಗತ್ತಿನ ಕಾರ್ಮಿಕರ ವರ್ಗವನ್ನು, ುಡಿಯುವ ಜನರ ಗಮನವನ್ನು ತನ್ನತ್ತ ಸೆಳೆಯಿತು.

ಕಲ್ಯಾಣ ರಾಜ್ಯಗಳು- ಪಾರ್ಲಿಮೆಂಟರಿ ಪ್ರಜಾಪ್ರಭುತ್ವಗಳು

ಸಮಾಜವಾದದತ್ತ ಸೆಳೆಯಲ್ಪಡುತ್ತಿರುವ ಕಾರ್ಮಿಕ ವರ್ಗವನ್ನು ದುಡಿಯುವ ವರ್ಗವನ್ನು ನಿಬಾಯಿಸಲು ಸಮಾಧಾನಿಸಲು ಬಂಡವಾಳ ಶಾಹಿ ಸರ್ಕಾರಗಳೂ ಸಹ ಎಷ್ಟೇಷ್ಟೋ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡಬೇಕಾಗಿ ಬಂದಾಗ ಮೂಡಿ ಬಂದದ್ದೆ 'ಕಲ್ಯಾಣ ರಾಜ್ಯ'ಗಳ ಕಲ್ಪನೆ. ಅಲ್ಲಿಯವರೆಗೆ ಇದ್ದದ್ದು ಬರಿಯ 'ಪೋಲಿಸ್ ರಾಜ್ಯ' ಗಳಲ್ಲವೇ? ಜಗತ್ತಿನ ಹಲವು ದೇಶಗಳಲ್ಲಿ



ವಿಜಯೋತ್ಸವದ ಪರಿ

ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬರಲು ಆಳುವ ವರ್ಗಗಳು ಅವಕಾಶ ನೀಡಿರುವುದಾದರೂ ಯಾಕೆ? ಸಮಾಜವಾದಿ ಕ್ರಾಂತಿ 'ಸ್ಫೋಟಿಸುವ' ಭಯದಿಂದಲೇ ಅಲ್ಲವೇ ?

ಯಾವುದಿದೆ ಮತ್ತೊಂದು ?

ಈ ಪರಿಯಾಗಿ ಜನರ ಬದುಕಿನ ಮೇಲೆ ಪರಿಣಾಮ ಬೀರಿದ ಮತ್ತೊಂದು ಕ್ರಾಂತಿ ಯಾವುದಿದೆ ಜಗತ್ತಿನಲ್ಲಿ? ಬ್ರಿಟನ್ ದೇಶದಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ದೊರಕಿದ್ದು 1917ರ ರಷ್ಯಾ ಕ್ರಾಂತಿಯ 11ವರ್ಷಗಳ ನಂತರ.ಅಂದರೆ 1928ರಲ್ಲಿ ಅನ್ನುವುದನ್ನು ಮರೆತು ಬಿಡುವುದು ಸಾಧ್ಯವಿಲ್ಲ. ಅಮೇರಿಕಾದಲ್ಲಿ ಕರಿಯ - ಬಿಳಿಯರ ನಡುವೆ ತಾರತಮ್ಯಕ್ಕೆ ಮನ್ನಣೆ ನೀಡುವ ವ್ಯವಸ್ಥೆ 60ರ ದಶಕದವರೆಗೆ 'ಕಾನೂನುಬದ್ಧ' ವಾಗಿಯೇ ಜಾರಿಯಲ್ಲಿತ್ತು ಎಂಬುದನ್ನು ಬಂಡವಾಳಶಾಹಿ ವಕ್ತಾರರಿಗೆ ನೋವಾದರು ಸರಿ ನಾವು ನೆನಪಿಸಿಕೊಳ್ಳಲೇ ಬೇಕಾಗುತ್ತದೆ.

ರಷ್ಯಾದ ಕ್ರಾಂತಿ- ಮಾನವನ ನಾಗರೀಕತೆಯಲ್ಲಿ ಒಂದು ಹೊಸ ಘಟ್ಟದ ಆರಂಭ ಬಿಂದುವಾಯಿತು. ಮಾನವನಿಂದ ಮ್ಯಾನವನ ಶೋಷಣೆಯನ್ನು ನಿವಾರಿಸಲು ಸಾಧ್ಯವೆಂದು ತೋರಿಸಿದ್ದು ಮಾತ್ರವಲ್ಲ ಇದರ ಸಾಧನೆ. ದೇಶದಿಂದ ದೇಶಗಳ ಶೋಷಣೆ ಅಂದರೆಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಸಹ ನಿರ್ನಾಮ ಮಾಡಲು ಸಾಧ್ಯವೆಂಬ ಹೊಸ ಭರವಸೆಯನ್ನು ಇದು ಮೂಡಿಸಿತು. ಭಾರತದ ರಾಷ್ಟ್ರೀಯ ಆಂದೋಲನವು ಸೇರಿದಂತೆ ಸ್ವಾತಂತ್ರವಾಗಿ ಸೆಟೆದು ನಿಂತ ಎಷ್ಟೋ ದೇಶಗಳಿಗೆ ರಷ್ಯಾ ಕ್ರಾಂತಿಯು ಒಂದು ಸ್ಫೂರ್ತಿಯ ಸಂಕೇತವಾಯಿತು.

ಜಗತ್ತಿನ ಅತ್ಯಂತ ಜನಭರಿತ ಚೀನಾ, ಉತ್ತರ ಕೊರಿಯಾ, ವಿಯೆಟ್ನಂ, ಕ್ಯೂಬಾ ಮುಂತಾದ ದೇಶಗಳು ಅದೇ ಯಶಸ್ವಿ ಕ್ರಾಂತಿಗಳ ಹಾದಿ ಹಿಡಿದರೆ, ಅದಕ್ಕೆ ಸ್ಪೂರ್ತಿ ರಷ್ಯಾದ ಅಕ್ಟೋಬರ್ ಕ್ರಾಂತಿಯದೇ.

ಏಷ್ಯ, ಆಫ್ರೀಕ, ಲ್ಯಾಟಿನ್ ಅಮೇರಿಕಾ ಎಲ್ಲೆಲ್ಲೋ ಫ್ರಾನ್ಸ್, ಜರ್ಮನಿ, ಜಪಾನ್, ಇಂಗ್ಲೆಂಡ್, ಅಮೇರಿಕಾ ಮುಂತಾದ ಸಾಮ್ರಾಜ್ಯಶಾಹಿ ದೇಶಗಳ ವಸಹತುಗಳಲ್ಲಿ ಸ್ವಾತಂತ್ರ್ಯ ಚಳವಳಿ ಬಾರಿ ಚೈತನ್ಯ ಪಡೆದು ಬೆಳೆದು ಬಂದವು. 50,60,70ರ ದಶಕಗಳಲ್ಲಿ ಹತ್ತಾರು ದೇಶಗಳು ಸ್ವಾತಂತ್ರ್ಯವನ್ನು ಸಹ ಗಳಿಸಿಕೊಂಡವು.

ಒಂದು ಹಿಂದುಳಿದ ಅರೆಪಾಳೆಗಾರಿ ವ್ಯವಸ್ಥೆಯೊಂದಿಗೆ ಅಷ್ಟೇನೂ ಬೆಳವಣಿಗೆ ಹೊಂದದ ಬಂಡವಾಳಶಾಹಿ ರಾಷ್ಟ್ರವಾಗಿದ್ದ ರಷ್ಯಾ ದೇಶವು ಅಕ್ಟೋಬರ್ ಕ್ರಾಂತಿಯ ನಂತರ ಅಗಾದ ಪ್ರಗತಿ ಸಾಧಿಸಿತು.

ಬಂಡವಾಳಶಾಹಿಯು 300ವರ್ಷಗಳಲ್ಲಿ ಸಾಧಿಸಿದ್ದನ್ನು ಸಮಾಜವಾದಿ ರಷ್ಯಾ ಕೇವಲ 30 ವರ್ಷಗಳಲ್ಲಿ ಸಾಧಿಸಿತು. ಕೃಷಿ-ಕೈಗಾರಿಕೆಗಳಲ್ಲಿ ಪ್ರಗತಿಯ ದೈತ್ಯ ಹೆಜ್ಜೆಗಳನ್ನಿಟ್ಟಿತು.

ಜಗತ್ತಿನ ಮೊತ್ತ ಮೊದಲ ಕೃತಕ ಉಪಗ್ರಹವನ್ನು ಆಕಾಶಕ್ಕೆ ಹಾರಿಬಿಟ್ಟ ಮೊದಲ ರಾಷ್ಟ್ರವಾಗಿ ರಷ್ಯಾ ಹೊರಹೊಮ್ಮಿತು. ವಿಜ್ಞಾನ ತಂತ್ರಜ್ಞಾನದಲ್ಲಿ ಎಷ್ಟೋ ಹೊಸ ಹೊಸ ಅವಿಷ್ಕಾರಗಳು ನಡೆದವು. ಎರಡನೇ ಮಹಾಯುದ್ಧದಲ್ಲಿ ಕಟ್ಟ ಕಡೆಯ ಹಂತದಲ್ಲಿ ಅನಗತ್ಯವಾಗಿ ಅಣುಬಾಂಬುನ್ನು ಪ್ರಯೋಗಿಸಿ ಮುಗ್ಧ ನಾಗರೀಕರನ್ನು ಕೊಂದು ಜಗತ್ತಿಗೆ ಹೊಸ ಬೆದರಿಕೆ ಒಡ್ಡಿದ ದೈತ್ಯ ಅಮೇರಿಕಕ್ಕೆ ಪ್ರತಿ ಸವಾಲನ್ನು ಹಾಕಿ ಸೆಣೆಸುವಂತಹ ಸೂಪರ್ ಪವರ್ ಆಗಿ ರಷ್ಯಾ ಬೆಳವಣಿಗೆ ಹೊಂದಿದು ಕಡಿಮೆ ಸಾಧನೆಯೇನೂಅಲ್ಲ.

ಈಗ ಸಮಾಜವಾದಿ ರಷ್ಯಾ ಸೋವಿಯತ್ ಒಕ್ಕೂಟ ಇಲ್ಲದಿರುವುದು ಈ ಕಾಲಘಟ್ಟದಲ್ಲಿ ಅಮೇರಿಕ ಅಫಘಾನಿಸ್ತಾನವನ್ನು, ಇರಾಕನ್ನು ಆಕ್ರಮಿಸಿದ ಪರಿ ಕಂಡವರಿಗೆ, ಕಾರ್ಮಿಕ ವಿರೋಧಿ, ಜನ ವಿರೋಧಿ ಜಾಗತಿಕರಣ ನೀತಿಗಳನ್ನು ಜಗತ್ತಿನ ದೇಶಗಳ ಮೇಲೆ ಹೇರುತ್ತಿರುವ ಪರಿಯನ್ನು ಕಂಡವರು ಸೋವಿಯಟ್ ರಷ್ಯಾದ ಪ್ರತಿರೋಧ ಇಲ್ಲದೇ ಹೊಗಿದ್ದಲ್ಲಿ ಆಗ 50,60,70ರ ದಶಕದಲ್ಲಿ ಜಗತ್ತು ಏನಾಗಿ ಹೋಗಿತ್ತಿತ್ತು ಎಂದು ಸುಲಭವಾಗಿ ಊಹಿಸಿಕೊಳ್ಳಬಹುದಾಗಿದೆ.

ಈಗ ಸಮಾಜವಾದಿ ಸೋವಿಯಟ್ ರಷ್ಯಾ ಇಲ್ಲ. ಆದರೆ ರಷ್ಯಾದ ಅಕ್ಟೋಬರ್ ಕ್ರಾಂತಿಯು ಜಗತ್ತಿನ ಮೇಲೆ ಬೀರಿದ ಪ್ರಭಾವ ಅಷ್ಟು ಸುಲಭವಾಗಿ ಅಳಿಸಿ ಹೋಗವಂತಹುದಲ್ಲ. ರಷ್ಯಾದಲ್ಲಿ ಸಮಾಜವಾದಿ ಪ್ರಜಾಪ್ರಭುತ್ವವನ್ನು ಬಲಪಡಿಸಿಕೊಂಡು ಹೋಗುವಲ್ಲಿನ ಕೊರತೆ, ಮಾರ್ಕ್ಸ್‌ವಾದ, ಲೆನಿನ್‌ವಾದದ ಸೃಜನಶೀಲ ಅನ್ವಯಕ್ಕೆ ಬದಲಾಗಿ ಯಾಂತ್ರಿಕ ಅನ್ವಯ, ಮಾರ್ಕ್ಸ್‌ವಾದಿ, ಲೆನಿನ್ ತತ್ವಗಳನ್ನು ಕೈಬಿಟ್ಟ ವರ್ಗಚುತಿ ಇಂತಹ ಕಾರಾಣಗಳಿಗಾಗಿ ರಷ್ಯಾದ ಸಮಾಜವಾದಿ ವ್ಯವಸ್ಥೆ ಕುಸಿದು ಬಿತ್ತು.

ಆದರೂ ಅದು ಇಂದಿಗೂ ಮನುಕುಲ ಎದುರಿಸುತ್ತಿರುವ ಎಲ್ಲ ಬಗೆಯ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ಇರುವ ಪರಿಹಾರದ ಮಾರ್ಗವಾಗಿದೆ. ಮನುಕುಲದ ಭವಿಷ್ಯದ ಮುನ್ನೆಡೆಗೆ ಬೆಳಕು ತೋರುವ ದಾರಿದೀಪವಾಗಿದೆ. ನಾಗರೀಕತೆ, ಸಾಮಾಜಿಕ ವ್ಯವಸ್ಥೆಯ ಕಲ್ಪನೆಯನ್ನೇ ಒಂದು ಹೊಸ ಎತ್ತರಕ್ಕೆ ಏರಿಸಿದ ಒಂದು ಮಹಾನ್ ಘಟನಾವಳಿಯಾಗಿದೆ.

'ಕೋಮುವಾದ ಒಂದು ಪಿಡುಗು......

ಪುಟ 6 ರಿಂದ

ಮತಾಂತರವಾದಿಗಳೆಂದು ಗುಲ್ಲು ಮಾಡಲು ಏನು ನೀತಿ ನಡೆಗಳಿಗೆ ಅವರಿಗೆ. ಮತಾಂತರ ವ್ಯಕ್ತಿಯ ಸ್ವಾತಂತ್ರ್ಯ? - ಮಠಗಳಿಂದ ಅದನ್ನು ತಡೆಯಲು ಸಾಧ್ಯವಿಲ್ಲ. ಭಾರತದ ಪ್ರತಿಯೊಬ್ಬರಿಗೂ ಧರ್ಮಾಚರಣೆಯ ಹಕ್ಕಿದೆ.

ಮೊದಲು ಪೇಜಾವರದ ಪೀಠಾಧಿಪತಿಗಳು ಹೊಲೆಮಾದಿಗರೊಂದಿಗೆ ಸಹಬೋಜನ ಮಾಡಲಿ ನಂತರ ಮತಾಂತರದ ಬಗ್ಗೆ ಮಾತನಾಡಲಿ ಎಂದು ಸವಾಲು ಹಾಕಿದರು.

ಅತಿಥಿಯಾಗಿ ಮಾತನಾಡಿದ ಪ್ರೋ॥ ಆರ್.ಕೆ ಹುಡಿಗಿಯವರು ಈ ದೇಶದ ದಲಿತರನ್ನು ಒಡೆದು ಛಿದ್ರಾನು ಛೀದ್ರ ಮಾಡಿ ತಮ್ಮ ಜಾತಿಯವರ ಮೌಲ್ಯಗಳನ್ನು ಬಿತ್ತಿ ಬೆಳೆಯಲು ಕೋಮುವಾದಿಗಳು ಈ ರೀತಿಯ ಮತಾಂತರದ ಹೆಸರಿನಲ್ಲಿ ಹುಯಿಲೆಬ್ಬಿಸುತ್ತಿರುತ್ತಾರೆ. ಯಾಕೆಂದರೆ ಜಾತಿಗಳಿರದಿದ್ದರೆ ತಮಗೆ ಕೆಲಸವೇ ಇರುವುದಿಲ್ಲ ಎಂದು ಜಾತಿವಾದಿಗಳಿಗೆ ದಿಕ್ಕು ತಪ್ಪಿದಂತಾಗಿದೆ ಎಂದು ವ್ಯಂಗ್ಯ ಮಾಡಿದರು.

ಸಮುದಾಯದ ವಲಯ ಕಾರ್ಯದರ್ಶಿ ಶಂಕ್ರಯ್ಯ ಘಂಟಿ ಹಾಗೂ ಅಬ್ದುಲ್ ಖದೀರ ಉಪಸ್ಥಿತರಿದರು. ಸಮುದಾಯದ ಬೀದರನ ಅಧ್ಯಾಕ್ಷರಾದ ಶಂಭುಲಿಂಗ ವಾಲ್ದೊಡ್ಡಿಯವರು ಅಧ್ಯಾಕ್ಷತೆ ವಹಿಸಿದರು. ಸಮಾರಂಭದ ಮಧ್ಯೆ ದೇವದಾಸ ಚಿಮಕೋಡ ಹಾಗೂ ಗೆಳೆಯರು ಕ್ರಾಂತಿಗೀತೆಗಳನ್ನು ಹಾಡಿದರು.

ದಿ: 16.10.2008 ರಂದು ಸಮುದಾಯ ಬೀದರನ ಸರ್ವ ಸದಸ್ಯರ ಸಭೆ ನಡೆದು ಸಂಘಟನೆಯ ಹೊಸ ಪದಾಧಿಕಾರಿಗಳ ಆಯ್ಕೆ ಮಾಡಿದರು. ಗೌರವಾಧ್ಯಾಕ್ಷರಾಗಿ ಶಂಬುಲಿಂಗ ವಾಲ್ದೊಡ್ಡಿ, ಅಧ್ಯಾಕ್ಷರಾಗಿ ಶಿವರಾಜ ಕಾಡಾದೆ, ಉಪಾಧ್ಯಕ್ಷರಾಗಿ ಶ್ರೀಧರ ಮಾಳೆ, ಕಾರ್ಯದರ್ಶಿಯಾಗಿ ಬಸವರಾಜ ಮಯೂರ, ಸಂಘಟನಾ ಕಾರ್ಯದರ್ಶಿಯಾಗಿ ನಾಗೇಂದ್ರ ಸಿಂಗೋಡೆ, ಜಂಟಿ ಕಾರ್ಯದರ್ಶಿಯಾಗಿ ಮಹೇಶ ಧೂಪೆ ಹಾಗೂ ಪಾರ್ವತಿ ಜೆ.ಡಿ., ಖಜಾಂಚಿಯಾಗಿ ಮನೋಹರ, ಸದಸ್ಯರಾಗಿ ರಮೇಶ್ ವೈದ್ಯ, ಚಿನ್ನಮ್ಮ ಸಂತಪೂರ, ಮಹಾದೇವಿ ಸಂತಪೂರ, ಕಂಟೆಪ್ಪ ಪೂಜಾರ, ದೇವದಾಸ ಚಿಮಕೋಡ, ಯಶವಂತ ಕುಚಬಾಳ, ಏಸುದಾಸ ಅಲಿಯಂಬುರೆ, ವಿಜಯ ಕುಮಾರ ಸೋನಾರೆ, ರುಕ್ಮಿಣಿ ಜೀರಿಗೆ ಮತ್ತು ಶಿವಾಜಿ ಮಾನ್ವರ. ಇನ್ನು ಮೂರು ಜನರನ್ನು ಕೋ ಆಫ್ ಮಾಡಲು ತಿರ್ಮಾನಿಸಲಾಗಿದೆ. ರಾಜ್ಯಾಧ್ಯಕ್ಷರಾದ ಪ್ರೋ॥ ಆರ್.ಕೆ.ಹುಡುಗಿ ಹಾಗೂ ವಲಯ ಕಾರ್ಯದರ್ಶಿಯಾದ ಶಂಕ್ರಯ್ಯ ಆರ್.ಘಂಟಿ ಹಾಜರಿದ್ದಾರು.

ನಾಟಕ

ಯಾಕೆ ಕಳ್ಳತನ ಮಾಡಿದೆ ಎಂದು ಕೇಳಿದಿರಾ?

ನಾಟಕೋತ್ಸವದ ಕೊನೆಯ ನಾಟಕ 'ಕಳವು' ದಿ : 26-10-08 ರಂದು ಸಂಜೆ 7.00 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಯೋಗಗೊಂಡಿತು.

ಡಾ. ಕೆ.ವೈ.ನಾರಾಯಣಸ್ವಾಮಿ ರಚಿಸಿರುವ, ಪ್ರಮೋದ ಶಿಗ್ಗಾಂವ್ ನಿರ್ದೇಶನದ ಕಳವು ನಾಟಕ ಸ್ಪಂದನ ತಂಡದವರಿಂದ ಪ್ರದರ್ಶನಗೊಂಡಿತು. ಪ್ರಸ್ತುತ ವಿದ್ಯಮಾನದಲ್ಲಿ ಸೂಕ್ಷ್ಮ ಒಳನೋಟಗಳುಳ್ಳ ನಾಟಕವಾಗಿದೆ.

'ಕಳವು' ಎಂಬುದನ್ನು ಮಹಿಳಾ ಕುಟುಂಬದ ಮುಖಾಂತರ ಬಿಂಬಿಸಿ ಸಮಾಜವು ಕಳವನ್ನು ಯಾವ ದೃಷ್ಟಿಯಿಂದ ನೋಡುತ್ತದೆ ಎಂಬುದನ್ನು ಗ್ರಾಮೀಣ ಹಿನ್ನೆಲೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷ ವಾರಸುದಾರಿಕೆ ಇಲ್ಲದೆ ಇರುವ ಕುಟುಂಬದ ಚಿತ್ರಣವನ್ನು ಲೇಖಕ ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಶಾಸ್ತ್ರವನ್ನು ಕೇಳುವಾಗಲೂ ಸಹ ಪುರುಷ ಬೇಕು ಎನ್ನುವ ನಮ್ಮ ಸಮಾಜದಲ್ಲಿ ಪುರುಷ ಮೌಲ್ಯ ಅದೆಷ್ಟರಮಟ್ಟಿಗೆ ಬೇರೂರಿದೆ ಎಂಬುದನ್ನು ನಾಟಕಕಾರ ವ್ಯಕ್ತಪಡಿಸುತ್ತಾರೆ.

ಮಹಿಳಾ ಶೋಷಣೆಯ ನೆಲೆಗಟ್ಟನ್ನು ಅವರ ಆರ್ಥಿಕತೆಗೆ ಆಧಾರವಾಗಿದ್ದ ಎಮ್ಮೆಯ ಕಳ್ಳತನದ ಹಿನ್ನೆಲೆಯಲ್ಲಿ ಇಡೀ ಕುಟುಂಬವೇ ತಲ್ಲಣಗೊಂಡು ಹಪಾಹಪಿಸುವ ಹೆಣ್ಣುಗಳ ರೋಧನವನ್ನು ಲೇಖಕರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ನಾಟಕದಲ್ಲಿ ಆಯಾ ಪಾತ್ರಕ್ಕೆ ಪಾತ್ರಧಾರಿಗಳು ನ್ಯಾಯ ಒದಗಿಸಿದರೆ ಉಮಾಶ್ರೀಯವರು ರಂಗಮ್ಮನ ಪಾತ್ರದಲ್ಲಿ ಮಾತಾಡುವ, ನಡೆಯುವ ಶೈಲಿ, ಮನೆಯ ಆಸ್ತಿಯಾದ ಎಮ್ಮೆಗಾಗಿ ಪರದಾಡುವ ಅಭಿನಯದಿಂದ ಪ್ರೇಕ್ಷಕರ ಮನದಲ್ಲಿ ಉಳಿದುಬಿಡುತ್ತಾರೆ.

ಹೊಟ್ಟೆಪಾಡಿಗಾಗಿ ಮಾಡಿದ ಕಳ್ಳತನವನ್ನು ಕಳ್ಳನ ಪಾತ್ರದಾರಿಯು ಮುಖೇನ ನಾರಾಯಣಸ್ವಾಮಿ ನನ್ನನು ಯಾಕೆ ಕಳ್ಳತನ ಮಾಡಿದೆ ಎಂದು ಒಬ್ಬರಾದ್ರೂ ಕೇಳಿದಿರಾ? ಎಂದು ಇಡೀ ವ್ಯವಸ್ಥೆಯನ್ನು ಪ್ರಶ್ನಿಸುವಲ್ಲಿ ಲೇಖಕರ ಅಭಿವ್ಯಕ್ತಿ ಸಾಮರ್ಥ್ಯದ ಹೆಚ್ಚುಗಾರಿಕೆ ಇದೆ.

ಇಂದು ಎಷ್ಟೊಂದು ಕ್ಷೇತ್ರಗಳಲ್ಲಿ ಆಗುತ್ತಿರುವ ಹಗಲು ದರೋಡೆಗಳು, ಯುನಿವರ್ಸಿಟಿಯಲ್ಲಿ ನಡೆಯುವ ಪಿ.ಎಚ್.ಡಿ ದಂಧೆ, ರಾಜಕೀಯ ಪುಢಾರಿಗಳ ಬ್ಲಾಕ್‌ಮೇಲ್, ವೈಟ್‌ಕಾಲರ್‌ಗಳ ಕಳ್ಳತನ, ಜಾಗತೀಕರಣದ ನಯವಂಚನೆಗಳು ಕುಟುಂಬದಲ್ಲಿಯೇ ಆಸ್ತಿ, ಹಣಕ್ಕಾಗಿ ನಡೆಯುತ್ತಿರುವ ಕಳ್ಳತನಗಳು ಲೇಖಕರ ಕಣ್ಣಿಗೇಕೆ ಕಾಣಿಸಲಿಲ್ಲವೆ.

ಶ್ರೀ ಕೃಷ್ಣನ ಸಂದರ್ಭವೇ ಬೇರೆ. ಈ ನಾಟಕದ ಸಂದರ್ಭವೇ ಬೇರೆ. ಇಲ್ಲಿಯ ಕಳ್ಳತನವನ್ನು ಶ್ರೀ ಕೃಷ್ಣನಿಗೆ ಸಮೀಕರಿಸುವುದು. ಆತನನ್ನು ಕಳ್ಳರ ಗುರು ಎಂದು ಹಾಡಿರುವುದು ಸಮಂಜಸವೆನಿಸುವುದಿಲ್ಲ.

ಎಷ್ಟೋ ಹಣ ಮತ್ತು ಅಧಿಕಾರ ಇದ್ದವರು ಕಳ್ಳತನ ಮಾಡಿರುತ್ತಾರೆ. ಆದರೆ ಅದು ಅಕ್ಷಮ್ಯ ಅಪರಾಧ. ಆದರೆ ಈ ಕಥಾವಸ್ತುವಿನಲ್ಲಿರುವ ಕಳುವು ಕ್ಷಮ್ಯ. ಯಾಕೆಂದರೆ ಇಡೀ ಜಗತ್ತಿನಲ್ಲಿ



ಹಸಿವಿಗಾಗಿ ಬಡತನಕ್ಕಾಗಿ ದಾರುಣ ಸ್ಥಿತಿಗಾಗಿ ಮಾಡಿರುವ ಕಳ್ಳತನವೇ ಲೇಖಕರಿಗೆ ಸತ್ವವಾಗಿದೆ.

ಇದನ್ನೇ ಪ್ರಧಾನವಾಗಿ ಲೇಖಕ ಆಯ್ಕೆ ಮಾಡಿಕೊಂಡಿರುವುದರ ಸದುದ್ದೇಶ ಈ ಮೂಲಕ ಎಲ್ಲರ ಕಳ್ಳತನವನ್ನು ಬಯಲಿಗೆಳೆಯುವುದಾಗಿದೆ. ಕಳ್ಳತನ ಮಾಡಿ ಅಪರಾಧಿಗಳಾಗದಿರುವುದರ ಶಂಕೆಗೆ ನಾಟಕ ಅನುವು ಮಾಡಿಕೊಡುತ್ತದೆ.

ಒಬ್ಬ ಸಾಹಿತಿ ಇನ್ನೊಬ್ಬ ಸಾಹಿತಿಯ ಸಾಹಿತ್ಯ ಕದ್ದು ಹೆಸರು ಮಾಡಲು ಹೊರಟಿರುವ ಕಳವುಗಳನ್ನೆಲ್ಲಾ ಲೇಖಕರು ವಿಭಿನ್ನವಾಗಿ ಚಿತ್ರಿಸಬಹುದಿತ್ತು. ತಲೆ ಮೇಲೆ ಚಾಪೆ ಎಳೆಯುವ, ತಲೆಗೆ ಟೋಪಿ ಹಾಕುವ, ತಲೆಗೆ ಕರಿಬಟ್ಟೆ ಕಟ್ಟುವ ಅದೆಷ್ಟೋ ದುಡಿಯಲಾರದ ದಟ್ಟ ದರಿದ್ರ ವ್ಯಕ್ತಿತ್ವವನ್ನು ಸೊಗಸಾಗಿ ನಿರೂಪಿಸಬಹುದಾಗಿತ್ತು.

ನಾಟಕದ ಕ್ಲೈಮ್ಯಾಕ್ಸ್‌ನಲ್ಲಿ ತೀರ್ಪನ್ನು ಕೊಡುವುದರಲ್ಲಿ ಲೇಖಕ ವಿಫಲನಾಗುತ್ತಾನೆ. ಕಳ್ಳನನ್ನು ದೈಹಿಕವಾಗಿ ಹಿಂಸಿಸಿ, ಅವಮಾನಿಸಿ ಒಪ್ಪುವಂತೆ ಮಾಡಿ ಕಳ್ಳನಿಗೆ ಆಳಿಗೊಂದು ಕಲ್ಲೆಸೆಯುತ್ತಾರೆ. ಆಗ ನ್ಯಾಯ ಕೇಳುವವರೇ ಇದನ್ನು ಕಂಡು ಪಂಚಾಯತಿಯಿಂದ ಪಲಾಯನ ಮಾಡುತ್ತಾರೆ. ಐದುನೂರರ ನೋಟಿನಿಂದ ಎಲ್ಲರೂ ಒಂದಲ್ಲ ಒಂದು ರೀತಿಯಿಂದ ಕಳ್ಳರು ಎಂದು ಬಿಂಬಿಸುವುದು ಸರಿಯಲ್ಲ. ಲೇಖಕರು ಇಡೀ ವ್ಯವಸ್ಥೆಯಲ್ಲಿ ಒಬ್ಬ ಪ್ರಾಮಾಣಿಕ ವ್ಯಕ್ತಿತ್ವವನ್ನು ಗುರುತಿಸದೇ ಹೋಗುತ್ತಾರೆ.

ಕಳ್ಳನಿಗೆ ಬದುಕುವ ದಾರಿಯನ್ನು ನಾಟಕದಲ್ಲಿ ತೋರಿಸಬಹುದಾಗಿತ್ತು. ಕಣ್ಣಿನೊಳಗೆ ಮನಸ್ಸು ಕಳುವಾಗುವುದಿಲ್ಲ. ಮನದ ಭಾವನೆಗಳನ್ನು ಹೇಳಿಕೊಳ್ಳಲು ಕಣ್ಣು ಮಾಧ್ಯಮ ಅಷ್ಟೆ.

ದೈನಂದಿನ ಬದುಕಿನಲ್ಲಿ ನಡೆವ ಶ್ರೀಮಂತರ ಕಳವು, ಸಾರಿಗೆಯಲ್ಲಿ ನಡೆಯುವ ಕಂಡಕ್ಟರ್ ಕಳವು, ನೌಕರಶಾಹಿಯಲ್ಲಿ ನಡೆಯುವ ಅಧಿಕಾರಿಗಳ ಕಳವುಗಳಿಗೆ ಲೇಖಕರು ಒತ್ತುಕೊಟ್ಟಿದ್ದರೆ ನಾಟಕ ಅರ್ಥಪೂರ್ಣವಾಗುತ್ತಿತ್ತು.

ಒಟ್ಟಿನಲ್ಲಿ ಕೋಲಾರದ ಪ್ರಾದೇಶಿಕ ದೇಶೀ ಭಾಷೆಯ ಸೊಗಡು. ಉನ್ನತ ವರ್ಗಗಳ ದಬ್ಬಾಳಿಕೆ, ಮಾತೃ ಕುಟುಂಬಗಳ ದೈನಸೀಯ ಸ್ಥಿತಿಗಳು ನಾಟಕದ ಧನಾತ್ಮಕ ಅಂಶಗಳು. ಬೆಳಕು, ಪ್ರಸಾದನ ಅಚ್ಚುಕಟ್ಟಾಗಿದ್ದವು. ಸಂಗೀತ ಆಯಾ ಸನ್ನಿವೇಶಕ್ಕೆ ತಕ್ಕಂತಿತ್ತು. ನಾಟಕದ ಸೂತ್ರದಾರನ ಪರದಾಟ ನಾಟಕವು ಎಮ್ಮೆಯು ಕೊಂಬಿನಿಂದ ಆರಂಭವಾಗಿದ್ದುದು ಹೊಸ ಪ್ರಯೋಗಕ್ಕೆ ಪೂರಕವಾಗಿತ್ತು. ಇಡೀ ನಾಟಕೋತ್ಸವದಲ್ಲಿನ ಯಶಸ್ವೀ ಪ್ರಯೋಗಗಳಲ್ಲಿ 'ಕಳವು' ನಾಟಕ ವಿಶೇಷ ಪ್ರಯೋಗವೇ ಸರಿ.

ಡಾ. ಸುಜಾತ ಅಕ್ಕಿ
ಹೊಸಕೋಟೆ

ಕವನ

ಸಂಡೂರಿನ ಬೆಟ್ಟಗಳಲ್ಲಿ...

ಶ್ರೀನಿವಾಸ

'ಅವರು'..................
ಹೋಗಿ ಇನ್ನೂ ಬಹಳ ಹೊತ್ತಾಗಿಲ್ಲ
ಮೂಡಿ ಬಿಟ್ಟವೆ ಆಗಲೇ
ಹೆಜ್ಜೆ ಗುರುತುಗಳ ಮೇಲೆ
ರಕ್ಕಸ ಯಂತ್ರಗಳ ಚಕ್ರಗಳು
ಉರುಳಿದ ಗುರುತು !!

ಉಸುರಿದ ಮನುಜ ಪ್ರೇಮದ
ನಾದ ಪ್ರತಿಧ್ವನಿಸುವ ಮುನ್ನ
ಸಿಡಿದು ಬಿಟ್ಟವೆ
ಅಪ್ಪ-ಅವ್ವನೆದೆಯ ಬಂಡೆಗಲ್ಲುಗಳು ॥

ತಿರುಗುವ ಯಂತ್ರಗಳ ಚಕ್ರಗಳಿಗೆ
ಹರಕು ಸೀರೆ - ಪಂಚೆಗಳು ಸಿಕ್ಕು
ರಕ್ತ ಕಾರಿ ಪ್ರಾಣ ಬಿಟ್ಟವರು
ಎಷ್ಟೋ ಜನ ನಿನ್ನೆ, ಮೊನ್ನೆ
ಮತ್ತು ಇವತ್ತು ಬೆಳಿಗ್ಗೆ ॥

ಬೆಟ್ಟಗಳ ಮೇಲಿಂದ
ಬುದ್ಧನ ನಗೆಯ ಕದ್ದು ಬರುವ
ಚುಕ್ಕಿ ಚಂದಮರಿಗೂ ಟಿ.ಬಿ. ಕಾಯಿಲೆ
ಕೆಮ್ಮಿ ಕೆಮ್ಮಿ ಉದುರಿದವರೆಷ್ಟೋ
ಊರು ಬಿಟ್ಟು, ಕೇರಿ ಬಿಟ್ಟು
ದೇಶ ಬಿಟ್ಟು, ಲೋಕ ಬಿಟ್ಟವರೆಷ್ಟೋ ॥

ಕೊರೆವ ಚಳಿಗೆ
ಮೈ ಕಾಯಿಸಿಕೊಳ್ಳುತಿಹರು
ಯಾರೋ
ಒಲೆಗೆ ಹಾಕಿ ಚರಕ: ಕೋಲು ॥
ಕೆಮ್ಮುವ ಬಾಯಿ,
ಕೂಗು ಹಾಕುವ ಬಾಯಿಗಳಲ್ಲಿ
ಯಾರೋ ತುರುಕಿದ ರೊಕ್ಕ
ಉಸಿರುಗಟ್ಟಿ ಸತ್ತವರೆಷ್ಟೋ

ನಗ್ಗಿ ನಗ್ಗಾದ ಸಿಲವಾರ ತಾಟಿನ
ತುಂಬ ಗರಿ ಗರಿ ನೋಟು
ಹಸಿದ ಒಡಲುಗಳ ಮುಂದೆ
ಹಸಿವು
ಕಡಲಾಗಿ
ತೇಲಿ ಹೋದವರೆಷ್ಟೋ

ಸುರಿದ ಮಳೆಗೆ ಇಳೆಯು ನಾಚಿ
ಕೆಂಪಾಗಿ ಹರಿದು ಬಂದ
ರಂಗು ರಂಗಿನ ನೀರಲ್ಲವದು
ತಾಯಿ ಪಾರ್ವತಿ ತನ್ನೊಡಲ
ರಕ್ತ ಕೇಳಿದಳೆಂದು
'ಕುಮಾರ' ಕಾರಿದ
ರಕುತ ವಲ್ಲವದು

ಅದಿರು
ಅಗೆದ ನನ್ನವರ ಬೆವರು
ನೆತ್ತರು
ಹರಿದು ಬಂದ ಪರಿಯಿದು ॥

ಹಸಿದ ಒಡಲ
ಉಕ್ಕುತಿರಲು
ಕುರುಡನಾದನೆ ದೇವ?

ಭುವಿಯ ಒಡಲು
ಸಿಡಿಯುತಿರಲು
ಕಿವುಡನಾದನೆ ಗಂಡಿನರಸಿಂಹ?

ಕಣ್ಣು -ಮೂಗು-ಬಾಯಿ-ಕಿವಿ
ತುಂಬಾ ರೊಕ್ಕ
ಮಾತು ಹೋಗಿ -ಮೌನವಾಗಿ
ದೇವಾನು ದೇವರೆಲ್ಲಾ ಕಲ್ಲಾದವೋ॥

ತೆರೆದ ಕಣ್ಣಿಗೆ ಮಣ್ಣು ತೂರಿ
ಕಾಣದಾಯಿತೋ ಊರು ಕೇರಿ ॥

ಯಾವ ಕಲ್ಲು ಬೇಡಲಿ ನಾನು
ನನ್ನವರ ಉಸಿರಿಗಾಗಿ?

ಯಾವ ಗಣಿಯ ಅಗೆಯಲಿ ನಾನು
ನನ್ನವರ ಜೀವ ಉಳಿಸಲು?

ಯಾವ ಗಣಿಯ ಎದೆಯ ಬಗೆಯಲಿ ನಾನು
ನನ್ನವರ ಜೀವ ಉಳಿಸಲು?

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH